KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫ || ಬೆಂಗಳೂರು, ಗುರುವಾರ, ಫೆಬ್ರವರಿ ೧೮, ೨೦೧೦ (ಮಾಘ ೨೯, ಶಕವರ್ಷ ೧೯೩೧) || ಸಂಚಿಕೆ ೭

ವಿಷಯಸೂಚಿ

ವಿ.ರಾ. ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
147	8.2.2010	ಸಂ. ಚುನಾ(ಗ್ರಾ.ಪಂ)ಸಿಆರ್-34/09-10, ದಿ. 18.1.2010 - ಗ್ರಾ.ಪಂ.ಚು. - 2010 - ಗ್ರಾಮ ಪಂಚಾಯತಿಗಳ ವರ್ಗವಾರು ಮೀಸಲಾತಿ ಬೆಂಗಳೂರು ಜಿಲ್ಲೆ - ಬೆಂಗಳೂರು ಉತ್ತರ ಹಾಗೂ ಅಪರ ತಾಲ್ಲೂಕು.
148	8.2.2010	ಸಂ. ಚುನಾ(ಗ್ರಾ.ಪಂ)ಸಿಆರ್-34/09-10, ದಿ. 18.1.2010 - ಗ್ರಾ.ಪಂ.ಚು. - 2010 - ಗ್ರಾಮ ಪಂಚಾಯತಿಗಳ ವರ್ಗವಾರು ಮೀಸಲಾತಿ ಬೆಂಗಳೂರು ಜಿಲ್ಲೆ - ಆನೇಕಲ್ ತಾಲ್ಲೂಕು.
149	8.2.2010	ಸಂ. ಚುನಾ(ಗ್ರಾ.ಪಂ)ಸಿಆರ್-34/09-10, ದಿ. 18.1.2010 - ಗ್ರಾ.ಪಂ.ಚು. - 2010 - ಗ್ರಾಮ ಪಂಚಾಯತಿಗಳ ವರ್ಗವಾರು ಮೀಸಲಾತಿ ಬೆಂಗಳೂರು ಜಿಲ್ಲೆ - ಬೆಂಗಳೂರು ಪೂರ್ವ ತಾಲ್ಲೂಕು.
150	8.2.2010	ಸಂ. ಚುನಾ(ಗ್ರಾ.ಪಂ)ಸಿಆರ್-34/09-10, ದಿ. 18.1.2010 - ಗ್ರಾ.ಪಂ.ಚು. - 2010 - ಗ್ರಾಮ ಪಂಚಾಯತಿಗಳ ವರ್ಗವಾರು ಮೀಸಲಾತಿ ಬೆಂಗಳೂರು ಜಿಲ್ಲೆ - ಬೆಂಗಳೂರು ದಕ್ಷಿಣ ತಾಲ್ಲೂಕು.
151	9.2.2010	No. ED 76 TPU 2007, Dt. 8.2.2010 - Draft - Karnataka Pre-University Course State Level Public Examination (Amendment), Rules, 2010.
152	9.2.2010	ಸಂ. ಕಾಇ 100 ಎಲ್‌ಎಂಡಬ್ಲ್ಯೂ 2009, ದಿ. 6.2.2010 - ತಿದ್ದುಪಡಿ ಅಧಿಸೂಚನೆ.
153	9.2.2010	No. FD 13 PES 2009, Dt. 9.2.2010 - Karnataka Excise (Manufacture of Wine) (Amendment) Rules, 2009.
154	9.2.2010	No. FD 11 PES 2009, Dt. 9.2.2010 - Karnataka Excise Licences (General Conditions) (Amendment) Rules, 2009.
155	9.2.2010	No. EN 354 NCE 2008, Dt. 19.1.2010 - Karnataka Renewable Energy Policy 2009-14-reg.
156	9.2.2010	ಸಂ. ಆರ್‌ಡಿ 873 ಎಲ್‌ಜಿಬಿ 2009, ದಿ. 22.1.2010 - ನಮೂನೆ-29, ಆನೇಕಲ್ ತಾಲ್ಲೂಕಿಗೆ ಸಂಬಂಧಿಸಿದಂತೆ 68ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ.
157	10.2.2010	ಸಂ. ಸಾರಿಇ 18 ಸಾಸಂಇ 2010, ದಿ. 30.1.2010 - ವಾ.ಕ.ರಾ.ರ. ಸಾರಿಗೆ ಸಂಸ್ಥೆಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.
158	10.2.2010	ಸಂ. ಸಾರಿಇ 303 ಸಾಇಪ 2009, ದಿ. 3.2.2010 - ಕೇಂದ್ರ ಮೋಟಾರು ವಾಹನಗಳ ನಿಯಮ, 1989ರ ನಿಯಮ 16 ಮತ್ತು ನಿಯಮ 48 ರಡಿ.
159	11.2.2010	No. DPAR 46 SDE 2008, Dt. 11.2.2010 - Under Sub-rule (1) of rule 7 of the KCS Rules, 1957.
160	11.2.2010	ಸಂ. ಸಂವ್ಯಶಾಇ 47 ಶಾಸನ 2009, ದಿ. 11.2.2010 - THE UNIVERSITY OF HORTICULTURAL SCIENCES ORDINANCE, 2010.

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)..............................	7-00	325-00
8.	ಭಾಗ - 6ಎ (ಮೈಸೂರು)..............................	50-00	1111-00
9.	ಭಾಗ - 6ಬಿ (ಧಾರವಾಡ)..............................	25-00	1637-00
10.	ಭಾಗ - 6ಸಿ (ಗುಲ್ಬರ್ಗ)...............................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-

1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಫೆಬ್ರವರಿ ೧೮, ೨೦೧೦ (ಮಾಘ ೨೯, ಶಕ ವರ್ಷ ೧೯೩೧)	ಸಂಚಿಕೆ ೭

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಟಿ.ನರಸೀಪುರ ರೇಷ್ಮೆ ಇಲಾಖೆಗೆ ಸೇರಿದ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ:
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ ರೇನಿ/ಗೂಮಾ/ಟಿ.ನರಸೀಪುರ/130/03-04, ದಿನಾಂಕ 14-6-2007, 6-9-2007, 3-12-2007 ಮತ್ತು 29-11-2008.
2. ಮುಖ್ಯ ಅಭಿಯಂತರರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇವರು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರಿಗೆ ಬರೆದ ಪತ್ರ ಸಂಖ್ಯೆ ಕರಾಸಾ/ಕೇಕ/ಕಾಇ/25/2006-07, ದಿನಾಂಕ 3-4-2007.

ಪ್ರಸ್ತಾವನೆ :

ಮುಖ್ಯ ಅಭಿಯಂತರರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇವರು ಟಿ.ನರಸೀಪುರದ ರೇಷ್ಮೆಗೂಡಿನ ಮಾರುಕಟ್ಟೆ ಮುಂಭಾಗದಲ್ಲಿರುವ 2.00 ಎಕರೆ 5 ಗುಂಟೆ ಜಾಗವನ್ನು ಸಾಮಾನ್ಯ ಕನಿಷ್ಠ ಬೆಲೆಯಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ನೀಡುವಂತೆ ಕೋರಿರುವುದಾಗಿ ತಿಳಿಸಿ, ಟಿ.ನರಸೀಪುರದ ರೇಷ್ಮೆಗೂಡು ಮಾರುಕಟ್ಟೆ ವ್ಯಾಪ್ತಿಯಲ್ಲಿ 3.00 ಎಕರೆ 25 ಗುಂಟೆ ಜಮೀನು ಇದ್ದು, ಮಾರುಕಟ್ಟೆಯ ಕಟ್ಟಡ ಹಾಗೂ ಇತರೆ ಕೆಲಸಕ್ಕೆ 1.20 ಎಕರೆ ಜಮೀನು ಬೇಕಾಗಿರುತ್ತದೆ. ಆದ್ದರಿಂದ ಉಳಿದ 2.05 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಿಟ್ಟು ಕೊಡಬಹುದು ಎಂದು ಅಭಿಪ್ರಾಯಪಟ್ಟು ಸದರಿ ಟೌನಿನಲ್ಲಿರುವ ಜಮೀನಿನ ಮೌಲ್ಯದ ಬಗ್ಗೆ ತಿಳಿಸಿ, ಜಮೀನನ್ನು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹಸ್ತಾಂತರಿಸಬಹುದಾಗಿದೆ ಎಂದು ತಿಳಿಸಿ, ಈ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ರೇಷ್ಮೆಗೂಡು ಮಾರುಕಟ್ಟೆ ಟಿ.ನರಸೀಪುರ ರೇಷ್ಮೆ ಇಲಾಖೆಗೆ ಸೇರಿದ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹಸ್ತಾಂತರಿಸಬಹುದಾಗಿದೆ ಎಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ರೇಷ್ಮೆ ಆಯುಕ್ತರು ಶಿಫಾರಸ್ಸು ಮಾಡಿರುವಂತೆ ಟಿ.ನರಸೀಪುರದ ರೇಷ್ಮೆಗೂಡು ಮಾರುಕಟ್ಟೆಯ ವ್ಯಾಪ್ತಿಯಲ್ಲಿರುವ 2.05 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಕ್ಕಾಗಿ ನೀಡಲು ತೀರ್ಮಾನಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ವಾಕೈ 23 ರೇಯೋವಿ 2007, ಬೆಂಗಳೂರು, ದಿನಾಂಕ 12-1-2010

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಶಿಫಾರಸ್ಸು ಮಾಡಿರುವಂತೆ ಟಿ.ನರಸೀಪುರದ ರೇಷ್ಮೆಗೂಡು ಮಾರುಕಟ್ಟೆಯ ವ್ಯಾಪ್ತಿಯಲ್ಲಿಯ 3.25 ಎಕರೆ ಜಮೀನಿನಲ್ಲಿ 1.20 ಎಕರೆ ಜಮೀನನ್ನು ರೇಷ್ಮೆ ಇಲಾಖೆಯು ಉಳಿಸಿಕೊಂಡು ಉಳಿದ 2.05 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಬಸ್ ನಿಲ್ದಾಣ ನಿರ್ಮಾಣ ಮಾಡುವುದಕ್ಕಾಗಿ ಜಮೀನಿನ ಮಾರುಕಟ್ಟೆ ಬೆಲೆ ಪಡೆದು ಮತ್ತು ರೇಷ್ಮೆ ಇಲಾಖೆಯು ಉಳಿಸಿಕೊಂಡಿರುವ 1.00 ಎಕರೆ 20

ಗುಂಟೆ ಜಮೀನಿಗೆ ಗೇಟಿನ ಸಮೇತ 8 ಅಡಿ ಎತ್ತರದ ಕಾಂಪೌಂಡ್ ನಿರ್ಮಿಸಿಕೊಡುವ ಷರತ್ತಿನ ಮೇರೆಗೆ ಹಸ್ತಾಂತರಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆರ್‌ಡಿ 52 ಎಲ್‌ಜಿಎಂ 2008, ದಿನಾಂಕ 2-3-2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ. ಕಂದಾಯ ಇಲಾಖೆಯು ತಿಳಿಸಿರುವಂತೆ ಸದರಿ ಜಮೀನಿನ ಮಾರುಕಟ್ಟೆ ಬೆಲೆಯು ಈ ಕೆಳಕಂಡಂತಿದೆ.

ಸ್ಥಳ	ಖುಷ್ಕಿ/ಎಕರೆಗೆ ರೂ.ಗಳಲ್ಲಿ	ತರಿ/ಎಕರೆಗೆ ರೂ.ಗಳಲ್ಲಿ	ಬಾಗಾಯ್ತು/ಎಕರೆಗೆ ರೂ.ಗಳಲ್ಲಿ
ಟಿ.ನರಸೀಪುರ	20000,00/-	150000,00/-	160000,00/-

ಸ್ಥಳ	ನಿವೇಶನ ದರ ಚದರಡಿಗೆ ರೂ.ಗಳಲ್ಲಿ	
ಟಿ.ನರಸೀಪುರ	ವಾಸೋಪಯೋಗಿ	ವಾಣಿಜ್ಯೋಪಯೋಗಿ
	150,00/-	200.00/-

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.164

(ಭಾರತಿ ಆರ್. ನಾಯಕ್)

ಪೀಠಾಧಿಕಾರಿ (ರೇಷ್ಮೆ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಉನ್ನತ ಶಿಕ್ಷಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಇಡಿ 191 ಯೋಯೋಕ 2008, ಬೆಂಗಳೂರು, ದಿನಾಂಕ 08ನೇ ಜನವರಿ 2010

ವಿಷಯ : ಕಾರವಾರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಪ್ರಾರಂಭಿಸುವ ಬಗ್ಗೆ ಹೊರಡಿಸಿದ ಆದೇಶಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ : ಇಡಿ 191 ಯೋಯೋಕ 2008 ದಿನಾಂಕ 26-06-2009

ಸರ್ಕಾರದ ಆದೇಶ ಸಂಖ್ಯೆ : ಇಡಿ 191 ಯೋಯೋಕ 2009 ದಿನಾಂಕ 26-06-2009 ರ ಅನುಬಂಧದ (ಪುಟ 3) ರಲ್ಲಿನ ಸಾಮಾನ್ಯ ಸಿಬ್ಬಂದಿ ವರ್ಗದ ಹುದ್ದೆಗಳ ಒಟ್ಟು ಸಂಖ್ಯೆ 23 (ಇಪ್ಪತ್ತಮೂರು) ಎಂದು ತಪ್ಪಾಗಿ ಮುದ್ರಿತವಾಗಿದ್ದು ಅದನ್ನು 22(ಇಪ್ಪತ್ತೆರಡು) ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.165

(ಐ.ಎಫ್. ಮಾಗಿ)

ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ

ಉನ್ನತ ಶಿಕ್ಷಣ ಇಲಾಖೆ, (ಯೋಜನೆ)

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಒಇ 183 ಪೊಸಇ 2009, ಬೆಂಗಳೂರು, ದಿನಾಂಕ 16ನೇ ಜನವರಿ 2010

ಶ್ರೀ ಡಿ. ಮರಿದೇವಯ್ಯ, ನಿವೃತ್ತ ಶಾಖಾಧೀಕ್ಷಕರು ಇವರಿಗೆ ಇವರಿಗಿಂತ ಜ್ಯೇಷ್ಠತೆಯಲ್ಲಿ ಕಿರಿಯರಾದ ಶ್ರೀ ಬಿ. ಮುರಳೀಧರ ಇವರಿಗೆ ಸಹಾಯಕ ಆಡಳಿತಾಧಿಕಾರಿಯಾಗಿ ಬಡ್ತಿ ನೀಡಿದ ದಿನಾಂಕ 05-07-2000 ದಿಂದ ಅನ್ವಯವಾಗುವಂತೆ ಸಹಾಯಕ ಆಡಳಿತಾಧಿಕಾರಿ ಹುದ್ದೆಯಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡಲಾಗಿದೆ. ಸದರಿಯವರು ಸೇವೆಯಿಂದ ದಿನಾಂಕ 31-12-2001 ರಂದು ವಯೋ ನಿವೃತ್ತಿ ಹೊಂದಿದ್ದು, ಪೂರ್ವಾನ್ವಯ ಮುಂಬಡ್ತಿಯ ನಂತರದ ಇವರ ವೇತನವನ್ನು ಕರ್ನಾಟಕ ನಾಗರೀಕ ಸೇವೆಗಳು (ಆರ್.ಪಿ.ಪಿ.ಪಿ.) ನಿಯಮಗಳ ನಿಯಮ (6)ರ ಪ್ರಕಾರ ಸಹಾಯಕ

ಆಡಳಿತಾಧಿಕಾರಿ ವೃಂದದಲ್ಲಿ ಕಾಲ್ಪನಿಕವಾಗಿ (notional) ನಿಗದಿಪಡಿಸಿ ಅದರಂತೆ ಇವರ ಪಿಂಚಣಿಯನ್ನು ಮರು ನಿಗದಿಪಡಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ. ಎನ್. ರವಿಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ. ಆರ್. 166

ಒಳಾಡಳಿತ ಸಚಿವಾಲಯ

ವಿಷಯ : ರಾಜ್ಯದ 15 ವಿವಿಧ ನ್ಯಾಯಾಲಗಳಿಗೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರುಗಳ ಹುದ್ದೆಗಳ ಸೃಜನೆ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂ. ಲಾ 108 ಎಲ್‌ಸಿಇ 2003, ದಿನಾಂಕ 23-12-2003
2) ಸರ್ಕಾರದ ಆದೇಶ ಸಂ. ಲಾ 47 ಎಲ್‌ಸಿಇ 2004, ದಿನಾಂಕ 23-06-2005
3) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ : ಡಿಪಿಎನ್/ಸಿಶಾ 1/108/2009-10, ದಿನಾಂಕ 13-07-2009

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 23-12-2003ರ ಸರ್ಕಾರದ ಆದೇಶದನ್ವಯ ರಾಜ್ಯದಲ್ಲಿ 19 ವಿವಿಧ ನ್ಯಾಯಾಲಯಗಳನ್ನು ಸೃಜಿಸಲಾಗಿದ್ದು, ಅವುಗಳಲ್ಲಿ ಬೆಂಗಳೂರಿಗೆ 8 ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಗಳನ್ನು ಹಾಗೂ ದಾವಣಗೆರೆಗೆ 1 ಮತ್ತು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳನ್ನು ಸೃಜನೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 23-06-2005ರ ಸರ್ಕಾರದ ಆದೇಶದನ್ವಯ ರಾಜ್ಯದಲ್ಲಿ 90 ವಿವಿಧ ದರ್ಜೆಯ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಅಪರಾಧ ಪ್ರಕರಣಗಳ ವಿಚಾರಣೆಗಾಗಿ ಬೆಳಗಾಂ ಮತ್ತು ಮೈಸೂರಿನಲ್ಲಿ ವಿಶೇಷ ನ್ಯಾಯಾಲಯಗಳನ್ನು (ಜಿಲ್ಲಾ ನ್ಯಾಯಾಧೀಶರ ಶ್ರೇಣಿ), ವರದಕ್ಷಣೆ ಸಾವು ಅಪರಾಧ ಪ್ರಕರಣಗಳ ವಿಚಾರಣೆಗಾಗಿ ಬೆಳಗಾಂ ಮತ್ತು ಮೈಸೂರಿನಲ್ಲಿ 2 ವಿಶೇಷ ನ್ಯಾಯಾಲಯಗಳನ್ನು (ಜಿಲ್ಲಾ ನ್ಯಾಯಾಧೀಶರ ಶ್ರೇಣಿ) ಹಾಗೂ ಬಳ್ಳಾರಿಗೆ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಸೃಜನೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ 13-07-2009ರ ತಮ್ಮ ಪತ್ರದಲ್ಲಿ ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ವಯ ಸೃಜನೆಯಾದ ವಿವಿಧ ದರ್ಜೆಯ ನ್ಯಾಯಾಲಗಳಲ್ಲಿ ಸರ್ಕಾರದ ಪರವಾಗಿ ರಾಜ್ಯವನ್ನು ಪ್ರತಿನಿಧಿಸಿ, ಪ್ರಕರಣಗಳನ್ನು ನಡೆಸಲು 15 ನ್ಯಾಯಾಲಗಳಿಗೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರ ಹಾಗೂ ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 346 ಪಿಪಿಇ 2009, ಬೆಂಗಳೂರು, ದಿನಾಂಕ 16ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ತಃಖ್ತೆಯ ಅಂಕಣ (2) ರಲ್ಲಿ ನಮೂದಿಸಿರುವ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಅಂಕಣ (3) ರಲ್ಲಿ ನಮೂದಿಸಿರುವ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸೃಜಿಸಿದೆ.

ಕ್ರ. ಸಂಖ್ಯೆ	ನ್ಯಾಯಾಲಯದ ಹೆಸರು	ಹುದ್ದೆಗಳ ಸಂಖ್ಯೆ
(1)	(2)	(3)
1	37ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
2	38ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01

3	39ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
4	40ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
5	41ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
6	42ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
7	43ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
8	44ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ	01
9	4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಹಿಳೆಯರ ಮೇಲಿನ ದೌರ್ಜನ್ಯ ಅಪರಾಧ ಪ್ರಕರಣಗಳ ವಿಚಾರಣೆಗಾಗಿ (ವಿಶೇಷ ನ್ಯಾಯಾಲಯ), ಮೈಸೂರು	01
10	5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವರದಕ್ಷಣೆ ಸಾವು ಅಪರಾಧ ಪ್ರಕರಣಗಳ ವಿಚಾರಣೆಗಾಗಿ (ವಿಶೇಷ ನ್ಯಾಯಾಲಯ), ಮೈಸೂರು	01
11	1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ	01
12	2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ	01
13	2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಳ್ಳಾರಿ	01
14	4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಹಿಳೆಯರ ಮೇಲಿನ ದೌರ್ಜನ್ಯ ಅಪರಾಧ ಪ್ರಕರಣಗಳ ವಿಚಾರಣೆಗಾಗಿ (ವಿಶೇಷ ನ್ಯಾಯಾಲಯ), ಬೆಳಗಾವಿ	01
15	6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವರದಕ್ಷಣೆ ಸಾವು ಅಪರಾಧ ಪ್ರಕರಣಗಳ ವಿಚಾರಣೆಗಾಗಿ (ವಿಶೇಷ ನ್ಯಾಯಾಲಯ), ಬೆಳಗಾವಿ	01
	ಒಟ್ಟು ಹುದ್ದೆಗಳು	**15**

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ "2014–ನ್ಯಾಯಪರಿಪಾಲನೆ–00–114–ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು–0–02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು" ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಎಫ್‌ಡಿ 368 ವೆಚ್ಚ–11/2009, ದಿನಾಂಕ 01–01–2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಪಿ. ಸಿದ್ದಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

ಪಿ.ಆರ್. 167 (ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಕಾಫಿಪೋಸ ಮತ್ತು ಅಭಿಯೋಗಗಳು)

INFRASTRUCTURE DEVELOPMENT SECRETARIAT

Sub : Participation in the conference of Chief Secretaries on PPP in infrastructure to be held on 2-2-2010 at Vigyan Bhavan, New Delhi.

Read : D.O. Letter No. 14011/6/2009-Infra, dated 26-11-09 from the Advisor to Deputy Chairman, Planning Commission, New Delhi.

Preamble :

In the letter dated 3-11-09 read at above the Advisor to the Deputy Chairman, Planning Commission, Government of India, New Delhi has informed that the meeting scheduled to be held on 15-12-09 is being postponed to 2-2-2010. Therefore he has requested the State Government to participation in the conference of Chief Secretaries on Public Private Partnership (PPP) to be held on 2-2-2010 at Vigyan Bhavan, New Delhi.

2. Hence this order

Government order No. IDD 112 IDM 2009, Bangalore, Dated 18-01-2010

Government is pleased to accord permission to the following officers of the Government of Karnataka to participate in the conference of Chief Secretaries on Public Private Partnership (PPP) to be held on 2-2-2010 at Vigyan Bhavan, New Delhi.

1. ACS & Principal Secretary to Govt., Finance Dept.,
2. Principal Secretary to Govt., Education Dept.,
3. Principal Secretary to Govt., Urban Dev. Dept.,
4. Principal Secretary to Govt., Planning Dept.,
5. Principal Secretary to Govt., Infrastructure Dev. Dept.,
6. Principal Secretary to Govt., PWD
7. The Secretary to Govt., (B & R) Finance Dept.,

2. The Officers are eligible to draw TA/DA as per rules.

By order and in the name of the Governor of Karnataka

(R. Shivalingaiah)

Under Secretary to Government,

P.R. 168 Infrastructure Development Department

INFRASTRUCTURE DEVELOPMENT SECRETARIAT

Sub : Release of Government of Karnataka's 50% balance share of the cost escalation towards Sholapur-Gadag Railway Guage conversion project.

Read : 1. G.O.No. IDD 1 NSW 2003, dated 03-03-2003
2. G.O.No. IDD 1 NSW 2003, dated 29-03-2003
3. G.O.No. IDD 40 NSW 2003, dated 16-09-2003
4. G.O.No. IDD 95 NSW 2003, dated 22-01-2004
5. G.O.No. IDD 42 NSW 2004, dated 16-06-2004
6. G.O.No. IDD 21 NSW 2005, dated 22-02-2005
7. G.O.No. IDD 21 NSW 2005, dated 29-03-2005
8. G.O.No. IDD 42 NSW 2004 (P) dated 22-07-2005
9. G.O.No. IDD 42 NSW 2004 (P) dated 15-10-2005
10. G.O.No. IDD 63 IDM 2005, dated 28-03-2006
11. G.O.No. IDD 42 NSW 2004, dated 25-10-2006
12. G.O.No. IDD 42 NSW 2004, dated 26-05-2007
13. G.O.No. IDD 91 NSW 2007, dated 23-03-2009
14. G.O.No. IDD 91 NSW 2007, dated 31-03-2009
15. Letter No. K-RIDE/Project/11/Solapur-Gadag/2007/10, dated 17-9-09 of CEO, K-RIDE, Bangalore

Preamble :

In the Government Orders read at Sl. No. (1) to (14) above Government of Karnataka have released their agreed 50% share of balance cost towards Sholapur-Gadag railway gauge conversion project amounting to Rs. 157.36 crore.

2. The Chief Executive Officer, K-RIDE, Bangalore in his letter read at Sl. No. (15) above, has furnished the details of expenditure incurred for the various cost sharing projects and the amount to be deposited by Government of Karnataka. According to this balance amount to be released by Government of Karnataka for completion of Sholapur-Gadag guage conversion project is Rs. 166.00 crores. Total amount so for released by the Government of Karnataka for this project is Rs. 157.36 crore. Now the Government has decided to release the balance amount of Rs. 6.5 crore towards Solapur-Gadag Railway Gauge Conversion project out of the budget provided during 2009-10.

3. Hence this Order

Government Order No. IDD 91 NSW 2007, Bangalore, Dated 18-01-2010

After careful examination of the above, Government is pleased to accord sanction for release an amount of Rs. 6.5 crore (Rupees Six crore fifty lakhs only) towards Sholapur-Gadag Guage Conversion railway project from the Head of Account "5465-01-190-3-03 (P) Solapur-Gadag Gauge Conversion Project-211-Investments.

2. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore

3.This Order is issued in accordance with the concurrence of Finance Department given vide U.O. Note No. FD 1808 Exp. 1/2009, dated 21-12-2009.

By Order and in the name of the Governor of Karnataka

(**N. Manjula Geetha**)

Under Secretary to Government,

P.R. 169 Infrastructure Development Department

INFRASTRUCTURE DEVELOPMENT SECRETARIAT

Sub : Release of funds towards cost sharing Railway project Kotturu-Harihar new broad gauge Railway Line project.

Read : 1. G.O.No. IDD 1 NSW 2002, dated 22-03-2002
2. G.O.No. IDD 47 NSW 2003 (P) dated 26-03-2004
3. G.O.No. IDD 51 NSW 2004, dated 19-07-2004
4. G.O.No. IDD 98 NSW 2003, dated 21-10-2006
5. G.O.No. IDD 98 NSW 2003, dated 20-12-2006
6. G.O.No. IDD 98 NSW 2003, dated 05-09-2007
7. G.O.No. IDD 15 NSW 2008, dated 22-10-2008
8. G.O.No. IDD 15 NSW 2008, dated 17-12-2008
9. G.O.No. IDD 15 NSW 2008, dated 20-01-2009
10. G.O.No. IDD 15 NSW 2008, dated 04-08-2009
11. Letter No. W.63/B/CN/BNC/Genl., dated 19-11-2009 Of Chief Engineer, (Con.,) SWR, Bangalore.

Preamble :

In the Government Orders referred to at Sl. No. (1) to (10) above Government of Karnataka has so far released an amount of Rs. 154.57 crore towards cost sharing for Kotturu-Harihar New railway line project.

2. The Chief Engineer, South Western Railway, Bangalore in his letter read at Sl. No. (11) above, has stated that the railways had already spent Rs. 250.48 crore towards Kotturu-Harihar new railway line project and requested for immediate deposit balance of Rs. 32.79 crore i.e. 2/3 share of Government of Karnataka.

3. The proposal of Railways has been examined and it has been decided to release an amount of Rs. 15.00 crore out of the Budget of Rs. 100.00 crore provided under the Head of Account "5465-01-190-3-05" (Plan) 211 investment towards cost sharing for new railway projects during 2009-2010. Hence this order

Government order No. IDD 15 NSW 2008, Bangalore, Dated 13-01-2010

After careful examination of the request of Railways, Government is pleased to release Rs. 15.00 crore (Rupees Fifteen Crore only) towards Kotturu-Harihar new railway line being the part of the balance 2/3rd share of Government of Karnataka. The above amount shall be met under the Head of Account "5465-01-190-3-05" (Plan) 211 investment out of the budget provision Rs. 100.00 crore, towards cost sharing for new railway projects during 2009-10.

2. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government Infrastructure Development Department and K-RIDE shall in turn deposit the same with the Financial Advisor and Chief Accounts Officers (Construction), South Western Railway, Bangalore.

3. This order is issued in accordance with the concurrence of Finance Department given vide U.O. Note No.FD 2047 Exp-1/09, dated 24-12-2009.

By Order and in the name of the Governor of Karnataka

(**R. Shivalingaiah)**

Under Secretary to Government,

P.R. 170 Infrastructure Development Department

ಇಂಧನ ಸಚಿವಾಲಯ

ವಿಷಯ : ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕೊಡಗಿಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಡಿಇ 205 ಎನ್‌ಸಿಇ 2001, ದಿನಾಂಕ 25-1-2002.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 262 ಎನ್‌ಸಿಇ 2006, ದಿನಾಂಕ 26-10-2006.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್‌ಪಿ/08/2029, ದಿನಾಂಕ 2/3-12-2008.
4. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ : ಇಎನ್ 514 ಎನ್‌ಸಿಇ 2008, ದಿನಾಂಕ 27-12-2008.
5. ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರ ಪತ್ರಗಳ ದಿನಾಂಕ : 5-1-2009 ಮತ್ತು 14-7-2009.
6. ಸರ್ಕಾರಿ ಪತ್ರ ಸಂಖ್ಯೆ : ಇಎನ್ 514 ಎನ್‌ಸಿಇ 2008, ದಿನಾಂಕ : 18/19-8-2009.
7. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಕೊಡಿಗೆಹಳ್ಳಿ/09/3649, ದಿನಾಂಕ 6/7-11-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಪುಸಾಲಾ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಕೊಡಗಿಹಳ್ಳಿ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕೊಡಗಿಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಸದರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಲಿಮಿಟೆಡ್ ಎಂಬ ಕಂಪನಿಯ ಹೆಸರಿನಲ್ಲಿ ವರ್ಗಾವಣೆ ಮಾಡಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು 5 ವರ್ಷಕ್ಕೆ ಮೇಲ್ಪಟ್ಟ ಯಾವುದೇ ಪ್ರಗತಿ ಸಾಧಿಸದ ಕಂಪನಿಗಳ ಪಟ್ಟಿಯನ್ನು ಕಳುಹಿಸುತ್ತಾ, ಸದರಿ ಕಂಪನಿಗಳ ಹಂಚಿಕೆ ಆದೇಶವನ್ನು ರದ್ದುಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪಟ್ಟಿಯಲ್ಲಿ ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಲಿಮಿಟೆಡ್ ಕಂಪನಿ ಒಂದಾಗಿರುತ್ತದೆ.

ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಲಿಮಿಟೆಡ್ ಇವರ 1.5 ಮೆ.ಗಾ ವ್ಯಾಟ್ ಸಾಮರ್ಥ್ಯದ ಕೊಡಗಿಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಕಾರಣ ಕೇಳುವ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿತ್ತು.

ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ದಿನಾಂಕ 5-1-2009ರ ಪತ್ರದಲ್ಲಿ ಸದರಿ ನೋಟೀಸಿಗೆ ಉತ್ತರವನ್ನು ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 14-7-2009ರ ಪತ್ರದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 1.5 ಮೆಗಾ ವ್ಯಾಟ್‌ನಿಂದ 5.00 ಮೆಗಾ ವ್ಯಾಟ್‌ಗೆ ಹೆಚ್ಚಿಸುವಂತೆ ಕೋರಿರುತ್ತಾರೆ.

ಸದರಿ ಪತ್ರಗಳನ್ನು ಮೇಲೆ ಓದಲಾದ ಕ್ರಮಸಂಖ್ಯೆ (6)ರ ಸರ್ಕಾರಿ ಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರಿಗೆ ಕಳುಹಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ನೀಡುವಂತೆ ಕೋರಲಾಗಿತ್ತು.

ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರು ವಿವರವಾದ ಯೋಜನಾ ವರದಿಯನ್ನು ತಯಾರಿಸಿರುವುದಿಲ್ಲವೆಂದು ದಿನಾಂಕ 5-1-2009ರ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಕಂಪನಿಗೆ ಕಿರು ಜಲ ವಿದ್ಯುತ್ ಯೋಜನೆಯು ವರ್ಗಾವಣೆಗೊಂಡು 3 ವರ್ಷ ಕಳೆದರೂ ಏನು ಪ್ರಗತಿ ಸಾಧಿಸಿರುವುದಿಲ್ಲ. ಸರ್ಕಾರವು ದಿನಾಂಕ 26-10-2006ರ ಆದೇಶದಲ್ಲಿ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ ಎಂದು ತಿಳಿಸಿದೆ. ಆದುದರಿಂದ ಕಂಪನಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ನೀಡಿರುವ ಸಮಯಾವಕಾಶವು ಮುಗಿದಿರುತ್ತದೆ. ಆದರೂ ಸಹ ಏನು ಪ್ರಗತಿಯನ್ನು ಸಾಧಿಸಲಾಗಿಲ್ಲ. ಶಾಸನಬದ್ಧ ಅನುಮತಿಗಳನ್ನು ಪಡೆಯಲಾಗಿಲ್ಲ. ಆದುದರಿಂದ ಸದರಿ ಕಂಪನಿಗೆ ವರ್ಗಾವಣೆಗೊಂಡಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕೊಡಗಿಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸಬೇಕೆಂದು ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಅಭಿಪ್ರಾಯ ನೀಡಿರುತ್ತಾರೆ.

ಸದರಿ ಪ್ರಸ್ತಾವನೆವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಂಖ್ಯೆ ಇಎನ್ 514 ಎನ್‌ಸಿಇ 2008, ಬೆಂಗಳೂರು, ದಿನಾಂಕ: 5ನೇ ಜನವರಿ 2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶಗಳ ಸಂಖ್ಯೆ ಡಿಇ 205 ಎನ್‌ಸಿಇ 2001 ದಿನಾಂಕ 25-1-2002 ಹಾಗೂ ಆದೇಶ ಸಂಖ್ಯೆ ಇಎನ್ 262 ಎನ್‌ಸಿಇ 2006 ದಿನಾಂಕ 26-10-2006ರಲ್ಲಿ ಮೆ॥ ಸಾಯಿ ಕಿರಣ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಕೊಡಗಿಹಳ್ಳಿ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕೊಡಗಿಹಳ್ಳಿ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಗೆ ಸಂಬಂಧಿಸಿದ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಜಿ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ

ಪಿ.ಆರ್.92

ಇಂಧನ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಇಎನ್ 220 ಎನ್‌ಸಿಇ 2007, ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್ 2009.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 220 ಎನ್‌ಸಿಇ 2007, ದಿನಾಂಕ 19-5-2009ರ ಆದೇಶ ಭಾಗದ ಮೊದಲನೆ ಕಂಡಿಕೆಯಲ್ಲಿ ಈ ಕೆಳಗಿನಂತೆ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು:-

``Weir - **Longitude**: $15^0$50'10'' **N Latitude**: $75^0$50'10''E

Power House - **Longitude**: $15^0$50'10'' **N Latitude**: $75^0$05'35''E

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಜಿ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ

ಪಿ.ಆರ್.93

ಇಂಧನ ಸಚಿವಾಲಯ

ವಿಷಯ : ಮೆ॥ ಸಾಗರ ಪವರ್ (ನೀರುಕಟ್ಟೆ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಪಟ್ಟದಹಳ್ಳ/2007/1934, ದಿನಾಂಕ 23/30-8-2007.

2. ದಿನಾಂಕ 13-2-2009ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಸಾಗರ ಪವರ್ (ನೀರುಕಟ್ಟೆ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ

ತಾಲ್ಲೂಕು ನರಸ್ಕಲ್ ಗ್ರಾಮದ ಬಳಿ ಪಟ್ಟದಹಳ್ಳಕ್ಕೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ 13-2-2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಸಾಗರ ಪವರ್ (ನೀರುಕಟ್ಟೆ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 304 ಎನ್‌ಸಿಇ 2007, ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್ 2009.

ಮೆ॥ ಸಾಗರ ಪವರ್ (ನೀರುಕಟ್ಟೆ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ನರಸ್ಕಲ್ ಗ್ರಾಮದ ಬಳಿ ಪಟ್ಟದಹಳ್ಳಕ್ಕೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದು.

4. ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು

ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್ ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.
13. Subject to the risk of submersion in the event of KPCL project.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಜೆ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್.94

COMMERCE & INDUSTRIES SECRETARIAT

Notification No. CI 60 SGF 2007, Bangalore, Dated 5th January 2010

Whereas it is necessary to make an order with a view to enabling Gokak Sugars Ltd., (Soubhagya Laxmi Sugars Private Limited) at Hirenandhi Village, Gokak Taluk, Belgaum District, to purchase the quantity of Sugar Cane required having regard to the crushing capacity of the factory, the availability of Sugarcane in the area where sugarcane is grown and the need for production of Sugar.

Now, therefore, in exercise of the powers conferred by clause 6,7,8 and 9 of the Sugarcane (Control) Order 1966 read with CSR 1127, dated 16th July 1966 of the Government of India in the Ministry of Food, Agriculture, Community Development and Co-operation (Department of Food) the Government of Karnataka Hereby makes the following orders namely :-

1. **TITLE, COMMENCEMENT AND DURATION OF OPERATION :**
   i) This order may be called the Karnataka Sugarcane (Regulation of Distribution) Gokak Sugars Ltd., (Soubhagya Laxmi Sugars Private Limited) at Hirenandhi Village, Gokak Taluk, Belgaum District, Order 2009.
   ii) It shall come into force at once and shall remain in force till withdraw or repealed subject to amendments as the State Government may make from time to time.

2. **DEFINITIONS :-** In this Order
   a) Factory means the premises of the factory at Hirenandhi Village, owned by Gokak Sugars Ltd., (Soubhagya Laxmi Sugars Private Limited), Hirenandhi Village, Gokak Taluk, Belgaum District, including the premises of such factory.
   b) 'Form' means a form appended to this Order
   c) Words and expressions used in this order but not defined shall have the meaning assigned to them in clause 2 of the Sugarcane (Control) Order 1966.

3. **DETERMINATION OF THE QUANTITY OF SUGARCANE REQUIRED BY THE FACTORY AND RESERVATION OF THE AREA FOR SUPPLY OF SUGARCANE.**
   i) The crushing capacity of Gokak Sugars Ltd., (Soubhaya Laxmi Sugars Private Limited) being 2500 TCD. The quantity of Sugarcane required by the factory during a year is about 4.50 Lakhs M.Ts to 5.00 Lakh M.Ts.
   ii) The factory shall secure the Sugarcane determined under sub clause (2) from the areas specified in schedule-I to this order which shall be the area reserved temporarily in the interest of farmers for supplying Sugarcane to the factory concerned, till the new factories, likely to come up in that area are established.

4. **FIXATION OF QUANTITY OF SUGARCANE TO BE SUPPLIED BY THE GROWER :-**

Every grower of Sugarcane in the area reserved temporarily as specified in Schedule-I shall supply to the factory ninety five percent of the Sugarcane grown by each such grower Co-operative Society operating in the reserved area, through such society

5. **AGREEMENT TO SUPPLY OR PURCHASE THE DETERMINED QUANTITY OF SUGARCANE**

Every grower of Sugarcane or a Sugarcane grower Co-operative Society, supplying Sugarcane to the factory and the factory shall enter into agreement to supply or purchase as the case may be, the quantity of Sugarcane determined under clause-4.

6. **PROHIBITION OF EXPORT OF SUGARCANE FROM AREA RESERVED TEMPORARILY**

No Sugarcane shall be exported from the area reserved temporarily except under and in accordance with the conditions of a permit issued by the Deputy Commissioner in Form-I of Schedule-II.

7. **ISSUE OF PERMITS :-**

i) Application for the grant of a permit under clause-6 shall be made in form 2 of Schedule-II and shall be accompanied by a fee of Rs. 5/- and an amount of Rs. 100/- as security Deposit.

ii) If any condition of the permit is contravened, the Deputy Commissioner may after giving an opportunity to the person Concerned to show cause why the amount deposited by way of security or any part thereof may not be forfeited, pass order forfeiting the whole or part of the amount deposited as security.

By Order and in the name of the Governor of Karnataka

P. Ananda Kumar

Desk Officer (Sugar)

Commerce & Industries Department

SCHEDULE-I

Following 9 Villages of Gokak Taluk of Belgaum District are allocated temporarily to Gokak Sugars Ltd., (Soubhagya Laxmi Sugars Private Limited), Hirenandhi Village, Gokak Taluk, Belgaum District, for supply of Sugarcane.

Gokak Taluk	
1)	Mamadapur
2)	Betageri
3)	Kaparatti
4)	Mannikeri
5)	Gosbala
6)	Chikkanandi
7)	Hirenandi
8)	Hosur
9)	Bagarnal

CI 60 SGF 2007

(P. Anandakumar)

Desk Officer (Sugar)

Commerce & Industries Department

SCHEDULE-II-FORM-I

(See Clause 6)

The Karnataka Sugarcane (Regulation of Distribution), Gokak Sugars Ltd., (Soubhagya Laxmi Sugars Private Limited), Hirenandhi Village, Gokak Taluk, Belgaum District Order 2009.

Permit No. : Date :

1. Full Name of the permit holder :
2. Father's Name :

3. Residential Address in full :
4. Quantity of Sugarcane for which Permit is granted for export :
5. Area and village from which Sugarcane is permitted to be Exported. :
6. A. Place to which it is to be exported :
   B. The purpose for which export is permitted.
   i) For Sale
   ii) For crushing sugar cane juice for Manufacture of Gur/Sakkare Gul/ Jaggery Rabi or Khandasari. :
7. Their permit is valid up to :
8. The permit is granted subject to the Following terms & conditions. :
   a) Permit is not transferable.
   b) The permit shall be produced on demand by an officer authorized by the Deputy Commissioner.
   c) On expiry of the validity of the permission within 48 hours of the expiry of the validity date the permit shall be surrendered to the permit issuing authority.

Place *Signature of the Permit issuing Authority*

Date

SCHEDULE-II-FORM-II

(See Clause 7)

The Karnataka Sugarcane (Regulation of Distribution), Gokak Sugars Ltd., (Soubhagya Laxmi Sugars Private Limited), Hirenandhi Village, Gokak Taluk, Belgaum Disrict Order 2009. Application for the grant of permit for exporting Sugarcane from a reserved area.

1. Full Name of the Applicant :
2. Father's Name :
3. Residential Address in full :
4. Quantity of Sugarcane for which Permit is requested for export :
5. Area and village from which Sugarcane is intended to be Exported. :

6. The purpose for which export is intended
   i) For Sale
   ii) For crushing Sugarcane Juice or Manufacture of Gur/Sakkare Gul/ Jaggery Rabi/or Khandasari for sale or self consumption :

I declare that, I am fully aware of the provisions of the Karnataka Sugarcane (Regulation of Distribution), Gokak Sugars Ltd.,(Soubhagya Laxmi Sugars Private Limited), Hirenandhi Village, Gokak Taluk, Belgaum District, Order 2009 and the particulars furnished in the application are true to the best of my knowledge and belief and the permit to be issued will be properly used for the purpose for which it is issued. I have actually read got read and understood the conditions of the permit given in Form No. 1 of the Schedule appended to the Karnataka Sugarcane (Regulation of Disribution), Gokak Sugars Ltd., (Soubhagya Laxmi Sugars Private Limited), Hirenandhi Village, Gokak Taluk, Belgaum District Order 2009 and I agree to abide by them.

Place *Signature of the Applicant*

Date
PR No. 125

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಕೆ. ರಾಮೇಗೌಡ ನೋಟರಿ, ಬೆಂಗಳೂರು ಇವರ ವಿರುದ್ಧ ಪಾಸ್‌ಪೋರ್ಟ್ ಕಛೇರಿಯಿಂದ ಸ್ವೀಕೃತವಾದ ದೂರಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಆದೇಶ ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ. ಲಾ 128 ಎಲ್‌ಸಿಎಲ್ 08, ದಿನಾಂಕ 29-01-09
2) ಉಚ್ಚ ನ್ಯಾಯಾಲಯದ ರಿ.ಪಿ.ನಂ. 3713/09 (ಎಸ್.ಆರ್.ಇ.ಎಸ್.) ದಿನಾಂಕ 8-6-09

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 29-1-09ರ ಆದೇಶದಲ್ಲಿ ಶ್ರೀ ಕೆ. ರಾಮೇಗೌಡ. ನೋಟರಿ, ಬೆಂಗಳೂರು ಇವರು ಅರ್ಜಿದಾರರ ಸಹಿ ಇಲ್ಲದೇ ಅಫಿಡವಿಟನ್ನು ಶಪಥೀಕರಿಸಿರುವುದರ ಬಗ್ಗೆ ಪಾಸ್‌ಪೋರ್ಟ್ ಕಛೇರಿಯಿಂದ ಬಂದ ದೂರನ್ನು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಶ್ರೀಯುತರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿತ್ತು. ಈ ಬಗ್ಗೆ ಶ್ರೀಯುತರು ಉಚ್ಚ ನ್ಯಾಯಾಲಯದಲ್ಲಿ ರಿ.ಪಿ. 3713/09ರಲ್ಲಿ ಸರ್ಕಾರವು ದಿನಾಂಕ 29-1-09ರ ಆದೇಶದಲ್ಲಿ ಗುರುತರ ದಂಡನೆ ವಿಧಿಸಿರುವುದನ್ನು ಪ್ರಶ್ನಿಸಿದ್ದರು.

ಉಚ್ಚ ನ್ಯಾಯಾಲಯವು ಮೇಲೆ (2)ರಲ್ಲಿ ಓದಲಾದ ದಿನಾಂಕ 08-06-09ರ ಆದೇಶದಲ್ಲಿ ಅರ್ಜಿದಾರರ ಸುದೀರ್ಘ ಸೇವಾ ಅವಧಿಯಲ್ಲಿ ಈಗಿನ ತಪ್ಪು ಹೊರತು ಬೇರೆ ಅಪಾದನೆಗಳಿಲ್ಲದೆ, ಅವರ ವಯಸ್ಸು 72 ಮತ್ತು ನಡತೆ ಪರಿಗಣಿಸಿ ಅವರಿಂದ ಆದ ಪ್ರಮಾದ ಅಷ್ಟೊಂದು ದೊಡ್ಡ ಪ್ರಮಾಣದ್ದಾಗಿಲ್ಲದಿರುವುದರಿಂದ ವಿಧಿಸಲಾಗಿರುವ ದಂಡನೆ ಸಮಪ್ರಮಾಣದಲ್ಲಿಲ್ಲ ಮತ್ತು ಅಫಿಡವಿಟ್‌ನಲ್ಲಿ ಡಿಪೋನೆಂಟ್ ಸಹಿ ಮಾಡಿದ್ದು ಅದು ಎಡಭಾಗದಲ್ಲಿದ್ದು, ನೋಟರಿಯವರು ಆಗಿರುವ ತಪ್ಪನ್ನು ಒಪ್ಪಿಕೊಂಡು ಇನ್ನು ಮುಂದೆ ಈ ರೀತಿಯಾಗದಂತೆ ಎಚ್ಚರ ವಹಿಸುತ್ತೇನೆಂದಿರುವುದನ್ನು ಒಪ್ಪಿ ಎಚ್ಚರಿಕೆ ನೀಡಬಹುದಿತ್ತೆಂದು ಹಾಗೂ ಅವರ ದುರ್ನಡತೆ ಗುರುತರವಾದ ಸ್ವರೂಪದ್ದಲ್ಲವಾದ್ದರಿಂದ ದಿನಾಂಕ 29-01-09ರ ಸರ್ಕಾರದ ಆದೇಶವನ್ನು ರದ್ದುಗೊಳಿಸಿದೆ ಮತ್ತು ನೋಟರಿ ಕರ್ತವ್ಯದಲ್ಲಿ ಇನ್ನು ಮುಂದೆ ತಪ್ಪುಗಳನ್ನು ಮಾಡಬಾರದೆಂಬ ಎಚ್ಚರಿಕೆ ನೀಡಿದೆ.

ಉಚ್ಚ ನ್ಯಾಯಾಲಯದ ಆದೇಶ ಹಾಗೂ ವಿಷಯವನ್ನು ಸರ್ಕಾರದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ. ಲಾ 128 ಎಲ್‌ಸಿಎಲ್ 2008, ಬೆಂಗಳೂರು, ದಿನಾಂಕ 14-12-2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಕೆ. ರಾಮೇಗೌಡ, ನೋಟರಿ, ಬೆಂಗಳೂರು ಇವರಿಗೆ ನೋಟರಿ ನಿಯಮಗಳು 1956ರ ನಿಯಮ 13(12)(ಬಿ)(iii) ರನ್ವಯ ಇನ್ನು ಮುಂದೆ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವಂತೆ ಸೂಚಿಸಿ ಪ್ರಕರಣ ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.126

ಶಕುಂತಲಾ ಹೆಚ್. ಆರ್.

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ವೆಂಕೋಬ ರಾವ್, ನಿವೃತ್ತ ಉಪ ಕಾರ್ಮಿಕ ಆಯುಕ್ತರು, ಇವರ ಮರು ನೇಮಕಾತಿ ಸೇವೆಯನ್ನು ಸಂಬಳ ಮತ್ತು ಪಿಂಚಣಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 490 ಎಂಎಸ್‌ಓ 83, ದಿನಾಂಕ 20-02-1984
2) ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 363 ಎಂಎಸ್‌ಓ 85, ದಿನಾಂಕ 25-06-1985
3) ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 584 ಎಂಎಸ್‌ಓ 86, ದಿನಾಂಕ 03-03-1987
4) ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 18 ಎಸ್‌ಡಿಇ 84, ದಿನಾಂಕ 24-08-1984
5) ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 18 ಎಸ್‌ಡಿಇ 84, ದಿನಾಂಕ 31-12-1984
6) ಕೆ.ಎ.ಟಿ. ಆದೇಶ ದಿನಾಂಕ 25-07-2008 ಅರ್ಜಿ ಸಂಖ್ಯೆ : 210/2005 ಮತ್ತು 7016/2005

ಪ್ರಸ್ತಾವನೆ :

ಕಾರ್ಮಿಕ ಇಲಾಖೆಯಲ್ಲಿ ಉಪ ಕಾರ್ಮಿಕ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವೆಂಕೋಬರಾವ್ ಇವರನ್ನು ಆಗಿನ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಯಾಗಿದ್ದಾಗಲೇ ದಿನಾಂಕ 31-05-1984ರಂದು 55 ವರ್ಷ ತುಂಬಿದ್ದರಿಂದ ಸೇವೆಯಿಂದ ನಿವೃತ್ತರಾಗಿದ್ದರು. ತದನಂತರ ದಿನಾಂಕ 01-06-1984ರಿಂದ ಪುನಃ ಗುತ್ತಿಗೆ ಆಧಾರದ ಮೇಲೆ ಸರ್ಕಾರದ ಅಧಿಸೂಚನೆ ಸಂಖ್ಯೆ : DPAR 121 SGO 84, ದಿನಾಂಕ 12-06-84ರಲ್ಲಿ ಮಾನ್ಯ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಯವರಾಗಿ ನೇಮಕಗೊಂಡು ದಿನಾಂಕ 28-04-89ರವರೆಗೂ ಸೇವೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : DPAR 18 SDE 84, ದಿನಾಂಕ : 24-08-1984ರಲ್ಲಿ ಸರ್ಕಾರವು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಸಿದೆ. ತದನಂತರ ಸರ್ಕಾರವು ಆದೇಶ ಸಂಖ್ಯೆ : DPAR 18 SDE 84 ದಿನಾಂಕ 17-09-1984 ಆದೇಶದ ಮೂಲಕ ಈ ಕೆಳಗಿನ ಮೂರು ನಿಬಂಧನೆಗಳನ್ನು ಪೂರೈಸುವವರ ಸೇವೆಯನ್ನು 58 ವರ್ಷಗಳ ತನಕ ಮುಂದುವರೆಸಲು ಆದೇಶ ಹೊರಡಿಸಿದೆ.

1) 55 ವರ್ಷ ವಯಸ್ಸನ್ನು ಹೊಂದಿ ದಿನಾಂಕ 1-8-1984ರಂದು ಅಥವಾ ಅದಕ್ಕೂ ಮುನ್ನ ಸೇವೆಯಿಂದ ನಿವೃತ್ತ ಹೊಂದಿರತಕ್ಕದ್ದು.
2) ಸೇವೆಯಲ್ಲಿ ಯಾವುದೇ ಛಿದ್ರತೆ ಇಲ್ಲದಂತೆ ನಿವೃತ್ತಿ ಹೊಂದಿದ ತಕ್ಷಣವೇ ಪುನರ್ ನೇಮಕಾತಿ ಅಥವಾ ಒಪ್ಪಂದದ ನೇಮಕಾತಿ ಮೇರೆಗೆ ಮುಂದುವರೆಯತಕ್ಕದ್ದು.
3) ದಿನಾಂಕ 02-08-1984ರಂದು ಸೇವೆಯಲ್ಲಿ ಇರತಕ್ಕದ್ದು

ಸದರಿ ಆದೇಶದಂತೆ ತಮ್ಮ ಸೇವೆಯನ್ನು 58 ವರ್ಷಗಳವರೆಗೆ ಮುಂದುವರೆಸಿ ನಿವೃತ್ತಿ ವೇತನವನ್ನು ನೀಡುವಂತೆ ಶ್ರೀ ಸೋಮೇಶ್ವರ್ ಹಾಗೂ ಶ್ರೀ ವಾಸುದೇವ ಮಯ್ಯ ಎಂಬುವವರು ಕೆ.ಎ.ಟಿ.ಗೆ ಅರ್ಜಿ ಸಂಖ್ಯೆ : 2382/87ನ್ನು ಸಲ್ಲಿಸಿದ್ದರು. ಈ ಅರ್ಜಿಯ ತೀರ್ಪಿನ ವಿರುದ್ಧ ಸರ್ಕಾರವು ಅಪೀಲನ್ನು ಸಲ್ಲಿಸಿತು. ಈ ಅಪೀಲಿನ ತೀರ್ಪಿನ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅರ್ಜಿ ಸಂಖ್ಯೆ : 1248-1261/98ನ್ನು ಸಲ್ಲಿಸಲಾಗಿತ್ತು. ಇದರಲ್ಲಿ ಶ್ರೀ ಸೋಮೇಶ್ವರ್ ಹಾಗೂ ಶ್ರೀ ವಾಸುದೇವ ಮಯ್ಯ ಇವರಿಗೆ 58 ವರ್ಷಗಳಾಗುವ ತನಕದ ಅವಧಿಯನ್ನು ಸೇವೆಗೆ ಪರಿಗಣಿಸಿ ನೀಡುವಂತೆ ಮಾನ್ಯ ನ್ಯಾಯಾಲಯವು ಆದೇಶವನ್ನು ನೀಡಿದೆ. ಅದರಂತೆ, ಸದರಿಯವರಿಗೆ ನಿವೃತ್ತಿ ಸೌಲಭ್ಯವನ್ನು ನೀಡಲಾಗಿದೆ. ಇದೇ ಸೌಲಭ್ಯವನ್ನು ತಮಗೂ ನೀಡುವಂತೆ ಶ್ರೀ ವೆಂಕೋಬರಾವ್‌ರವರು ಸಹ ಅರ್ಜಿಯನ್ನು ಸಲ್ಲಿಸಿದ್ದು, ಆ ಸಂದರ್ಭದಲ್ಲಿ ಆರ್ಥಿಕ ಇಲಾಖೆಯು ನ್ಯಾಯಾಲಯದಲ್ಲಿ ಆದೇಶ ಪಡೆದ ಅರ್ಜಿದಾರರಿಗೆ ಸಂಬಂಧಿಸಿದಂತೆ ಮಾತ್ರ ನ್ಯಾಯಾಲಯದ

ತೀರ್ಮಾನವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ ಎಂದು, ಆದ್ದರಿಂದ ಈ ಸೌಲಭ್ಯವನ್ನು ಶ್ರೀ ವೆಂಕೋಬರಾವ್‌ರವರಿಗೆ ಪರಿಗಣಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ ನೀಡಿದೆ. ಆ ಪ್ರಕಾರ ಶ್ರೀ ವೆಂಕೋಬರಾವ್ ರವರ ಮನವಿಯನ್ನು ನಿರಾಕರಿಸಲಾಗಿತ್ತು.

ಶ್ರೀ ವೆಂಕೋಬರಾವ್‌ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ : 7016/05ನ್ನು ಸಲ್ಲಿಸಿದ್ದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 25-07-2008ರ ತೀರ್ಪಿನಲ್ಲಿ ಶ್ರೀ ವೆಂಕೋಬರಾವ್‌ರವರ ವಯೋ ನಿವೃತ್ತಿ ವಯಸ್ಸನ್ನು 58ಕ್ಕೆ ಪರಿಗಣಿಸಿ, ನಿವೃತ್ತಿ ವೇತನವನ್ನು ನಿಗಧಿಪಡಿಸುವಂತೆ ಆದೇಶಿಸಿರುತ್ತದೆ ಹಾಗೂ ಆರ್ಥಿಕ ಸೌಲಭ್ಯವನ್ನು ದಿನಾಂಕ 01-09-2005ರಿಂದ ನೀಡುವಂತೆ ಆದೇಶಿಸಿದೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಕಾಇ 284 ಎಲ್‌ಇಟ 2009, ಬೆಂಗಳೂರು, ದಿನಾಂಕ 11-01-2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಶ್ರೀ ವೆಂಕೋಬರಾವ್, ನಿವೃತ್ತ ಉಪ-ಕಾರ್ಮಿಕ ಆಯುಕ್ತರು ಇವರು 55 ವರ್ಷಗಳ ತರುವಾಯದಲ್ಲಿ 58 ವರ್ಷಗಳವರೆಗೆ ಮರು ನೇಮಕಾತಿ ಮೇರೆಗೆ ಸಲ್ಲಿಸಿದ ಸೇವೆಯನ್ನು ಸತತವಾಗಿ ಸೇವೆಯಲ್ಲಿ ಮುಂದುವರೆದ ಅವಧಿಯೆಂದು ಪರಿಗಣಿಸಿ ಇವರ ವೇತನವನ್ನು ಕಾಲಕಾಲಕ್ಕೆ ಪರಿಷ್ಕರಿಸುವಲ್ಲಿ ಶ್ರೀಯುತರು 55 ವರ್ಷಗಳ ವಯೋ ನಿವೃತ್ತಿಯ ನಂತರದಲ್ಲಿ ಯಾವುದೇ ವಿಚ್ಛಿನ್ನತೆಯಿಲ್ಲದೆ ಮರು ನೇಮಕಾತಿಗೊಂಡು 58 ವರ್ಷಗಳವರೆಗೆ ಸತತವಾಗಿ ಸೇವೆಯನ್ನು ಸಲ್ಲಿಸಿರುವ ಅಂಶಗಳನ್ನು ಸೇವಾ ದಾಖಲೆಗಳ ರೀತ್ಯ ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟು ವೇತನ, ನಿವೃತ್ತಿ ವೇತನ ಮತ್ತು ಅರ್ಹತಾದಾಯಕ ಸೇವೆಯನ್ನು ಪರಿಷ್ಕರಿಸಲು ಮತ್ತು ಅದರಂತೆ ನಿವೃತ್ತಿ ಸೌಲಭ್ಯಗಳಾದ ನಿವೃತ್ತಿ ಉಪದಾನ, ಗಳಿಕೆ ರಜೆ ನಗದೀಕರಣದ ವ್ಯತ್ಯಾಸಕ್ಕೆ ಅರ್ಹರಾದಲ್ಲಿ ನಿಯಮಾನುಸಾರ ಪರಿಗಣಿಸಲು ಸರ್ಕಾರದ ಸಹಮತಿಯನ್ನು ನೀಡಲಾಗಿದೆ.

ಆದರೆ, ನ್ಯಾಯ ಮಂಡಳಿಯ ತನ್ನ ಆದೇಶದಲ್ಲಿ ತತ್ಸಂಬಂಧದಲ್ಲಿ ಅರ್ಹರಾಗುವ ಆರ್ಥಿಕ ಸೌಲಭ್ಯಗಳಿಗೆ ದಿನಾಂಕ 01-09-2005ರ ನಂತರದಲ್ಲಿ ಅರ್ಹರಾಗತಕ್ಕದೆಂದು ನಿರ್ದಿಷ್ಟವಾಗಿ ಆದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 01-06-1984 ರಿಂದ ದಿನಾಂಕ 01-09-2005ರ ನಡುವಣ ಅವಧಿಗೆ ಸಂಬಂದಿಸಿದಂತೆ ಲಭ್ಯವಾಗುವ ಯಾವುದೇ ನಿವೃತ್ತಿ ವೇತನದ ಹಣಕಾಸಿನ ಸೌಲಭ್ಯಕ್ಕೆ ಅರ್ಜಿದಾರರು ಅರ್ಹರಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 773 ವೆಚ್ಚ-9/08, ದಿನಾಂಕ 02-01-09 ಹಾಗೂ ಆಇ 721 ವೆಚ್ಚ-9/09, ದಿನಾಂಕ 14-12-2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 127

ಯು. ಎನ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಗಿಡಮೂಲಿಕೆ ಔಷಧಿ ಪ್ರಾಧಿಕಾರದ ರಾಜ್ಯ ಮಟ್ಟದ ಯೋಜನಾ ಪ್ರಸ್ತಾವನೆ ಮತ್ತು ತಡಿಕೆ (Screening) ಮೌಲ್ಯಮಾಪನ ಸಮಿತಿ ನೇಮಿಸುವ ಕುರಿತು.

ಓದಲಾಗಿದೆ : 1) ಕೇಂದ್ರ ಉತ್ತೇಜಿತ ಯೋಜನೆ ಮಾರ್ಗಸೂಚಿ ಸೆಪ್ಟೆಂಬರ್, 2008

2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಗಿಡಮೂಲಿಕೆ ಔಷಧಿ ಪ್ರಾಧಿಕಾರ (ಕಂ.ಪ.) ಇವರ ಪತ್ರ ಸಂಖ್ಯೆ : ಕಂಪ/ಪನಿಮಸ/090415.1, ದಿನಾಂಕ : 15-04-2009 ಹಾಗೂ ದಿನಾಂಕ : 18-07-2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸೆಪ್ಟೆಂಬರ್, 2008ರ ಕೇಂದ್ರ ಉತ್ತೇಜಿತ ಯೋಜನೆ ಮಾರ್ಗಸೂಚಿಯನ್ವಯ ರಾಷ್ಟ್ರೀಯ ಗಿಡಮೂಲಿಕಾ ಮಂಡಳಿಯು ರಾಜ್ಯದಲ್ಲಿ ಔಷಧಿ ಸಸ್ಯಗಳ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ದಿಸೆಯಲ್ಲಿ ಹಲವಾರು ಸಂಶೋಧನಾ ಕೇಂದ್ರಗಳು, ವಿಶ್ವವಿದ್ಯಾನಿಲಯಗಳು, ವಿವಿಧ ಇಲಾಖೆಗಳು ಮತ್ತು ಇನ್ನಿತರ ಸಂಘ ಸಂಸ್ಥೆ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಔಷಧಿ ಸಸ್ಯ ಬೆಳವಣಿಗೆಗೆ ಪೂರಕವಾದ ಹಲವಾರು ಉತ್ತೇಜಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದು, ಇವುಗಳ ನಿರ್ಧರಿಸುವಿಕೆ ಮತ್ತು ಮೌಲ್ಯಮಾಪನಕ್ಕೆ ರಾಜ್ಯಮಟ್ಟದ ಸಮಿತಿಯನ್ನು ರಚಿಸುವಂತೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಕೇಂದ್ರ ಉತ್ತೇಜಿತ ಯೋಜನೆಯ ಮಾರ್ಗಸೂಚಿಯನ್ವಯ ಮೇಲೆ (2)ರಲ್ಲಿ ಓದಲಾದ ದಿನಾಂಕ 15-04-2009 ಹಾಗೂ 18-07-2009ರ ಪತ್ರದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ರಾಜ್ಯ ಗಿಡಮೂಲಿಕೆ ಔಷಧಿ ಪ್ರಾಧಿಕಾರ ಇವರು ತಡಿಕೆ (Sreening) ಸಮಿತಿ ನೇಮಿಸುವ ಬಗ್ಗೆ ಸಮಿತಿಯ ಸದಸ್ಯರ ಮಾಹಿತಿಯನ್ನು ಕೆಳಗಿನಂತೆ ಸಲ್ಲಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ – ಅಧ್ಯಕ್ಷರು
ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

2) ಮುಖ್ಯ ಕಾರ್ಯನಿರ್ವಹಣಾಧಿಕಾರಿ, – ಸಂಚಾಲಕರು
ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಪ್ರಾಧಿಕಾರ,
ವನ ವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

3) ರಾಷ್ಟ್ರೀಯ ಗಿಡಮೂಲಿಕ ಔಷಧಿ ಮಂಡಳಿ, ನವದೆಹಲಿ ಇವರ ಪ್ರತಿನಿಧಿ – ಸದಸ್ಯರು

4) ಕೇಂದ್ರ ಸಂಸ್ಥೆಯ ಪ್ರತಿನಿಧಿಗಳು
ಅ) ಡಾ॥ ವಸಂತಕುಮಾರ್ – ಸದಸ್ಯರು
ಮುಖ್ಯ ವಿಜ್ಞಾನಿ, ಭಾರತೀಯ ತೋಟಗಾರಿಕಾ ಸಂಸ್ಥೆ, ಹೆಸರುಘಟ್ಟ,
ಬೆಂಗಳೂರು-89.
ಆ) ಡಾ॥ ಇ.ವಿ.ಎಸ್. ಪ್ರಕಾಶ ರಾವ್, – ಸದಸ್ಯರು
ಪ್ರಭಾರಿ ವಿಜ್ಞಾನಿ, ಕೇಂದ್ರೀಯ ಔಷಧಿ ಮತ್ತು ಸೌಗಂಧಿತ ಸಸ್ಯಗಳ ಸಂಸ್ಥೆ

5) ಅರಣ್ಯ ಇಲಾಖೆಯ ಪ್ರತಿನಿಧಿ
ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು – ಸದಸ್ಯರು
(ಅಭಿವೃದ್ಧಿ), ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.

6) ಆಯುಷ್ ಇಲಾಖೆಯ ಪ್ರತಿನಿಧಿ
ಶ್ರೀ ಜಿ. ಎನ್. ಶ್ರೀಕಂಠಯ್ಯ, ಭಾ.ಆ.ಸೇ., – ಸದಸ್ಯರು
ನಿರ್ದೇಶಕರು, ಆಯುಷ್ ಇಲಾಖೆ, ಬೆಂಗಳೂರು

7) ಆಯುಷ್ ಇಲಾಖೆಯಿಂದ ನೇಮಿಸಲ್ಪಟ್ಟ ವಿಷಯ ತಜ್ಞರು
ಅ) ಆಶಾಲತಾ, – ಸದಸ್ಯರು
ಉಪನ್ಯಾಸಕರು ಮತ್ತು ಇಲಾಖೆಯ ಮುಖ್ಯಸ್ಥರು,
ದ್ರವ್ಯಗುಣ ಇಲಾಖೆ, ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಬೆಂಗಳೂರು.
ಆ) ಡಾ॥ ಎಂ. ಚಂದ್ರಶೇಖರ್, – ಸದಸ್ಯರು
ಉಪನ್ಯಾಸಕರು, ದ್ರವ್ಯಗುಣ ಇಲಾಖೆ, ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು,
ಬೆಂಗಳೂರು.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಅಪಜೀ 81 ಎಫ್‌ಪಿಸಿ 2009, ಬೆಂಗಳೂರು, ದಿನಾಂಕ 04-01-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕೇಂದ್ರ ಉತ್ತೇಜಿತ ಯೋಜನೆ ಮಾರ್ಗಸೂಚಿ ಸೆಪ್ಟೆಂಬರ್, 2008ರನ್ವಯ ರಾಜ್ಯ ಮಟ್ಟದ ಯೋಜನಾ ಪ್ರಸ್ತಾವನೆ ಮತ್ತು ತಡಿಕೆ (Screening) ಮೌಲ್ಯಮಾಪನ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ನೇಮಕ ಮಾಡಿದೆ.

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, – ಅಧ್ಯಕ್ಷರು
ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ – ಸಂಚಾಲಕರು
ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಪ್ರಾಧಿಕಾರ, ವನ ವಿಕಾಸ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
3. ರಾಷ್ಟ್ರೀಯ ಗಿಡಮೂಲಿಕೆ ಔಷಧಿ ಮಂಡಳಿ, ನವದೆಹಲಿ ಇವರ ಪ್ರತಿನಿಧಿ – ಸದಸ್ಯರು

4. ಕೇಂದ್ರ ಸಂಸ್ಥೆಯ ಪ್ರತಿನಿಧಿಗಳು
   ಅ) ಡಾ॥ ವಸಂತಕುಮಾರ್ – ಸದಸ್ಯರು
   ಮುಖ್ಯ ವಿಜ್ಞಾನಿ, ಭಾರತೀಯ ತೋಟಗಾರಿಕಾ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು-89
   ಆ) ಡಾ॥ ಇ.ವಿ.ಎಸ್. ಪ್ರಕಾಶ ರಾವ್, – ಸದಸ್ಯರು
   ಪ್ರಭಾರಿ ವಿಜ್ಞಾನಿ, ಕೇಂದ್ರಿಯ ಔಷಧಿ ಮತ್ತು ಸೌಗಂಧಿತ ಸಸ್ಯಗಳ ಸಂಸ್ಥೆ.
5. ಅರಣ್ಯ ಇಲಾಖೆಯ ಪ್ರತಿನಿಧಿ
   ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು – ಸದಸ್ಯರು
   (ಅಭಿವೃದ್ಧಿ), ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
6. ಆಯುಷ್ ಇಲಾಖೆಯ ಪ್ರತಿನಿಧಿ
   ಶ್ರೀ ಜಿ. ಎನ್. ಶ್ರೀ ಕಂಠಯ್ಯ, ಭಾ.ಆ.ಸೇ. – ಸದಸ್ಯರು
   ನಿರ್ದೇಶಕರು,
   ಆಯುಷ್ ಇಲಾಖೆ, ಬೆಂಗಳೂರು.
7. ಆಯುಷ್ ಇಲಾಖೆಯಿಂದ ನೇಮಿಸಲ್ಪಟ್ಟ ವಿಷಯ ತಜ್ಞರು
   ಅ) ಡಾ॥ ಆಶಾಲತಾ – ಸದಸ್ಯರು
   ಉಪನ್ಯಾಸಕರು ಮತ್ತು ಇಲಾಖೆಯ ಮುಖ್ಯಸ್ಥರು, ದ್ರವ್ಯಗುಣ ಇಲಾಖೆ,
   ಸರ್ಕಾರಿ ಆಯರ್ವೇದಿಕ್ ಮೆಡಿಕಲ್ ಕಾಲೇಜು, ಬೆಂಗಳೂರು.
   ಆ) ಡಾ॥ ಎಂ. ಚಂದ್ರಶೇಖರ್, – ಸದಸ್ಯರು
   ಉಪನ್ಯಾಸಕರು, ದ್ರವ್ಯಗುಣ ಇಲಾಖೆ, ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಬೆಂಗಳೂರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 128

ಪಿ. ಆರ್. ಕಲಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಇಂಧನ ಸಚಿವಾಲಯ

ವಿಷಯ : ಮೆ: ಫ್ರೆನ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಪಶ್ಚಿಮವಾಹಿನಿ/2008-09/1234 ದಿನಾಂಕ : 6/12-3-2009 ಹಾಗೂ ಪತ್ರ ಸಂಖ್ಯೆ : ಕೆಆರ್‌ಇಡಿ/06/ಪಶ್ಚಿಮವಾಹಿನಿ ಎಂಹೆಚ್‌ಎಸ್/2009/3139 ದಿನಾಂಕ : 22-09-2009.
2. ದಿನಾಂಕ : 23-10-2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಫ್ರೆನ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಸ್ವಾಸ್ಥ್ಯ ಆಯುರ್ವೇದ ಗ್ರಾಮದ ಪಶ್ಚಿಮವಾಹಿನಿ ತೊರೆಗೆ ಅಡ್ಡಲಾಗಿ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ : 23-10-2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ: ಫ್ರೆನ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ, ಇಎನ್ 261 ಎನ್‌ಸಿಇ 2009, ಬೆಂಗಳೂರು ದಿನಾಂಕ : 5ನೇ ಜನವರಿ 2010

ಮೆ:: ಫ್ರೆನ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಸ್ವಾಸ್ಥ್ಯ ಆಯುರ್ವೇದ ಗ್ರಾಮದ ಪಶ್ಚಿಮವಾಹಿನಿ ತೊರೆಗೆ ಅಡ್ಡಲಾಗಿ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್

ಯೋಜನೆಯನ್ನು (Weir-Latitude. 12º24'10" Longitude. 76º41'15" Power House-Latitude: 12º23'10" Longitude : 76º42'15") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ :-

1 (ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲವಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2 (ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.

4 ಫೈನಾನ್ಷಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ /ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12 ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಸ್.ಜೆ. ಸಂಪತ್ ಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.131 ಇಂಧನ ಇಲಾಖೆ

ENERGY SECRETARIAT

CORRIGENDUM No. EN 68 PSR 2009 Bangalore Dated : 8th January 2010

The words and figures appearing in the G.O. No. EN 68 PSR 2009 dated : 21-10-2009 in Para No. 2 & 3 (a) of the order portion indicated in column 1 shall be read as indicated in column 2 below :

No.	As existing	To be read as
Para-2	The Principal Secretary to Government of Karnataka, Energy Department, Bangalore will act as the convener of the Selection committee.	The Additional Chief Secretary /Principal Secretary to Government of Karnataka, Energy Department, Bangalore will act as the convener of the selection Committee.
Para-3	In terms of Section 84 (1) of the electricity Act 2003, finalize the selection of panel of names for appointment as Chairperson, KERC as expeditiously as possible and within 45 days from the date of this order.	In terms of Section 84 (1) of the Electricity Act 2003, finalize the selection of panel of names for appointment as Chairperson, KERC as expeditiously as possible and within 3 months from the date of this order.

By Order and in the name of the Governor of Karnataka,

(S.J. Sampath Kumar)

Under Secretary to Government

Energy Department.

PR. 132

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಪ್ರಾಥಮಿಕ ಆರೋಗ್ಯ ಕೇಂದ್ರ ಸೂಡಿ ಇಲ್ಲಿ ವೈದ್ಯಾಧಿಕಾರಿ/ಸಿಬ್ಬಂದಿ ವರ್ಗದವರಿಗೆ ಹಳೆಯ ಕಟ್ಟಡವನ್ನು ನವೀಕರಿಸಿ ವಸತಿ ಗೃಹಗಳನ್ನು ನಿರ್ಮಿಸಲು ಅನುದಾನ ಬಿಡುಗಡೆ-ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:

1. ಜಿಲ್ಲಾ ಯೋಜನಾ ನಿರ್ವಹಣಾಧಿಕಾರಿ, ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಕೆಹೆಚ್‌ಎಸ್‌ಡಿಆರ್‌ಪಿ, ಗದಗರವರ ಪತ್ರ ಸಂಖ್ಯೆ : ರಾಗ್ರಾಅಅ/ಜಿಯೋನಿಘಗ 116/2009-10, ದಿನಾಂಕ : 13-08-2009.
2. ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ. ವಿಭಾಗ, ಧಾರವಾಡ ಇವರ ಪತ್ರ ಸಂ. EE KHSDRP/DIV-DWD/Gadag/Estimate/2009-10/camp/Bang/ದಿನಾಂಕ : 13-10-2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿ, ಶುಶ್ರೂಷಕಿ ಹಾಗೂ "ಡಿ" ಗ್ರೂಪ್ ನೌಕರರಿಗೆ ವಸತಿ ಗೃಹಗಳು ಇರುವುದಿಲ್ಲವಾದ್ದರಿಂದ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರ ಸೂಡಿ, ಇಲ್ಲಿ ಬಳಕೆಯಾಗದಿರುವ ಹಳೆಯ ಕಟ್ಟಡವನ್ನು ನವೀಕರಿಸಿ, ಸದರಿ ಸಿಬ್ಬಂದಿಗೆ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಸದರಿ

ಪ್ರಸ್ತಾವನೆಗೆ ರೂ. 10.00 ಲಕ್ಷಗಳ ಅಂದಾಜು ವೆಚ್ಚವನ್ನು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುತ್ತಾರೆ.

ಕೆಹೆಚ್‌ಎಸ್‌ಡಿಆರ್‌ಪಿ ಸಂಗ್ರಹಣಾ ಯೋಜನೆ ಪ್ರಕಾರ ಯೋಜನೆಯಲ್ಲಿ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನವೀಕರಣಕ್ಕಾಗಿ, 2009-10ನೇ ಸಾಲಿನಲ್ಲಿ ಅನುದಾನವನ್ನು ನಿಗಧಿಗೊಳಿಸಲಾಗಿದೆ. ಸದರಿ ಯೋಜನೆಯಡಿ ಈ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿದೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ, ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಐಸಿಎಫ್/ನವೀಕರಣ/19/2009-10,
ಬೆಂಗಳೂರು ದಿನಾಂಕ : 13ನೇ ಜನವರಿ 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಅನುಕೂಲಕ್ಕಾಗಿ, ಈಗಾಗಲೇ ಇರುವ ಹಳೆಯ ಕಟ್ಟಡವನ್ನು ನವೀಕರಿಸಿ ವಸತಿ ಗೃಹಗಳನ್ನು ನಿರ್ಮಿಸಲು ಅಂದಾಜು ವೆಚ್ಚ ರೂ. 10,00,000/- (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ಶಶಿಧರ್
ಸರ್ಕಾರದ ಉಪ ಕಾರ್ಯದರ್ಶಿ,
ಕೆಹೆಚ್‌ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿ.ಆರ್.133

ಜಲಸಂಪನ್ಮೂಲ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆ, ಶಿರ್ಸಿ ತಾಲ್ಲೂಕು , ಪವ್ವಲ ಹತ್ತಿರ ಹಳ್ಳಕ್ಕೆ ಬಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ:

1. ದಿನಾಂಕ: 11-11-09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-2/2009-10/6679.
2. ಅಧ್ಯಕ್ಷರು ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ : 26-12-09ರ ಪತ್ರ ಸಂಖ್ಯೆ : ಮುಸದ/ಆಪ್ತ ಶಾಖೆ/ಟೆಂಡರ್/08-09/4972.

ಪ್ರಸ್ತಾವನೆ :

ಉತ್ತರ ಕನ್ನಡ ಜಿಲ್ಲೆ, ಶಿರ್ಸಿ ತಾಲ್ಲೂಕಿನ ಪವ್ವಲ ಹತ್ತಿರ ಹಳ್ಳಕ್ಕೆ ಬಾಂದಾರ ನಿರ್ಮಾಣ ಕಾಮಗಾರಿಯ 25.00 ಲ ರೂ.ಗಳ ಅಂದಾಜು ಪಟ್ಟಿಗೆ ದಿನಾಂಕ : 26-02-09 ರಂದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಳಿಯಾಳ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ಜಿಲ್ಲಾ ಟೆಂಡರ್ ಬುಲೆಟಿನ್	ದಿ: 21-02-2009
2	ವಿಜಯ ಕರ್ನಾಟಕ ದಿನಪತ್ರಿಕೆ	ದಿ: 04-03-2009

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 20 ಜನ ಗುತ್ತಿಗೆದಾರರ ಪೈಕಿ ಇಬ್ಬರು ಗುತ್ತಿಗೆದಾರರು ಮಾತ್ರ ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರನ್ನು ದಿನಾಂಕ : 09-07-0 ರಂದು ತೆರೆಯಲಾಗಿದೆ. ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 24,60,619/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	ರೂ. 24,23,207/-

ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡವಾರು ಹೆಚ್ಚಳ
1	ಪಿ.ಕೆ. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು	ರೂ. 28,24,559/-	14.79 ಹೆಚ್ಚು	16.56 ಹೆಚ್ಚು
2	ಗಣಪಯ್ಯಾ ನಾಯಕ್ 1ನೇ ದರ್ಜೆ ಗುತ್ತಿಗೆದಾರರು	ರೂ. 30,60,656/-	24.38 ಹೆಚ್ಚು	26.30 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ. 1 ರಲ್ಲಿರುವ ಶ್ರೀ ಪಿ.ಕೆ. ಶೆಟ್ಟಿ, 1 ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 28,24,559-00 ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.79 ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರನ್ನು ಸರ್ಕಾರದ ಮಟ್ಟದಲ್ಲಿ ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 13-11-09 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 24,23,207-00ಗಳ ಮೇಲೆ ಶೇಕಡ 13.25ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 27,44,282-00 ಗಳಿಗೆ ಕಾಮಗಾರಿಯನ್ನು ಶ್ರೀ ಪಿ.ಕೆ. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಕುಮಟಾ ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ, ಸನೀಇ 85 ಅಪಿಬಂ 2009, ಬೆಂಗಳೂರು ದಿನಾಂಕ : 13ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆ, ಶಿರ್ಶಿ ತಾಲ್ಲೂಕಿನ ಪದ್ದಲ ಹತ್ತಿರ ಹಳ್ಳಕ್ಕೆ ಬಾಂದಾರ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರ ಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 24,23,207-00 ಗಳ ಮೇಲೆ ಶೇಕಡ 13.25 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 27,44,282-00ಗಳಿಗೆ (ಇಪ್ಪತ್ತೇಳು ಲಕ್ಷದ ನಲವತ್ನಾಲ್ಕು ಸಾವಿರದ ಇನ್ನೂರ ಎಂಭತ್ತೆರಡು ರೂ.ಗಳು ಮಾತ್ರ) ಶ್ರೀ ಪಿ.ಕೆ. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು, ಕುಮಟಾ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ :ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್.134

ಜಲಸಂಪನ್ಮೂಲ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು, ನರಿಬೋಳೆ ಕ್ಷಾರಭೂಮಿ ಯೋಜನೆ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ : ಸನೀ 15 ಮಸಾವಿ 2009(1), ದಿನಾಂಕ : 26-02-09
2. ದಿನಾಂಕ : 11-11-09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನೀ(ಉ) ವಲಯ/ಬಿಜೆಪಿ/ ಪಿಬಿ-2/2009-10/6680.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ : 26-12-09 ರ ಪತ್ರ ಸಂಖ್ಯೆ: ಮುಸದ/ಆಪ್ತ ಶಾಖೆ/ಟೆಂಡರ್-08-09/4972.

ಪ್ರಸ್ತಾವನೆ :

ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು, ನರಿಬೋಳೆ ಕ್ಷಾರಭೂಮಿ ಯೋಜನೆ ಕಾಮಗಾರಿಯ 50.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ : 26-02-09 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಳಿಯಾಳ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ಜಿಲ್ಲಾ ಟೆಂಡರ್ ಬುಲೆಟಿನ್	ದಿ: 21-02-2009
2	ಕನ್ನಡ ಪ್ರಭ ದಿನಪತ್ರಿಕೆ	ದಿ: 03-03-2009

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 14 ಜನ ಗುತ್ತಿಗೆದಾರರ ಪೈಕಿ ಇಬ್ಬರು ಗುತ್ತಿಗೆದಾರರು ಮಾತ್ರ ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರನ್ನು ದಿನಾಂಕ 22-07-09 ರಂದು ತೆರೆಯಲಾಗಿದ್ದು. ಅದರಲ್ಲಿ ಈ ಕೆಳಕಂಡ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು, ಅವರು ಸೂಚಿಸಿರುವ ದರಗಳ ವಿವರ ಕೆಳಕಂಡಂತಿದೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 46,75,876/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	ರೂ. 46,75,876/-

ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಆರ್.ಎಸ್. ಶಾನಭಾಗ, 1ನೇ ದರ್ಜೆ ಗುತ್ತಿಗೆದಾರರು	ರೂ. 53,43,317/-	14.27 ಹೆಚ್ಚು	14.27 ಹೆಚ್ಚು

ಮೇಲ್ಕಂಡಂತೆ ಶ್ರೀ ಆರ್.ಎಸ್. ಶಾನಭಾಗ, 1ನೇ ದರ್ಜೆ ಗುತ್ತಿಗೆದಾರರು ಅರ್ಹತೆ ಹೊಂದಿದ ಏಕೈಕ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿರುವ ಮೊತ್ತ ರೂ. 53,43,317-00 ಗಳಾಗಿದ್ದು, ಈ ಮೊತ್ತವನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿನಾಗ ಶೇಕಡ 14.27 ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಮೇಲೆ (2) ರಲ್ಲಿ ಓದಲಾದ ದಿನಾಂಕ : 11-11-09ರ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 13-11-09 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ

ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 46,75,876-00ಗಳ ಮೇಲೆ ಶೇಕಡ 13.25ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 52,95,430-00 ಗಳಿಗೆ ಕಾಮಗಾರಿಯನ್ನು ಶ್ರೀ ಆರ್.ಎಸ್. ಶಾನಭಾಗ, 1ನೇ ದರ್ಜೆ ಗುತ್ತಿಗೆದಾರರು, ಕುಮಟಾ ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ, ಸನೀಇ 86 ಅಪಿಬಿಂ 2009, ಬೆಂಗಳೂರು, ದಿನಾಂಕ : 13ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕಿನ, ನರಿಬೋಳೆ ಕ್ಷಾರಭೂಮಿ ಯೋಜನೆ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರ ಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 46,75,876-00 ಗಳ ಮೇಲೆ ಶೇಕಡ 13.25 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 52,95,430-00ಗಳಿಗೆ (ಐವತ್ತೆರಡು ಲಕ್ಷದ ತೊಂಭತ್ತೈದು ಸಾವಿರದ ನಾನೂರ ಮೂವತ್ತು ರೂ.ಗಳು ಮಾತ್ರ) ಶ್ರೀ ಆರ್.ಎಸ್. ಶಾನಭಾಗ, 1ನೇ ದರ್ಜೆ ಗುತ್ತಿಗೆದಾರರು, ಕುಮಟಾ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ :ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.135 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

WATER RESOURCES SECRETARIAT

Sub : According Administrative Approval to the Minor Irrigation Projects under Accelerated Irrigation Benefit Programme-Regarding.

Read: Letter No. CEMI/(S) TA-3/AE-10/AIBP/2009-10/4925 dt. 22.12-2009 from the Chief Engineer, Minor Irrigation South Zone, Bangalore.

Preamble:

As per the modified guidelines issued by the Government of India, Minor Irrigation schemes with potential of more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought Prone Area Programme (DPAP). Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks for seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimates of the works proposed under AIBP. Accordingly the following schemes in DPAP taluks are being considered for according administrative approval.

Head of Account : 4702-00-101-1-10-139 AIBP Major Works **Amount Rs. In Lakhs**

Sl. No	Name of the Scheme	District	Taluka	Estimated Cost	Potential Planned in Ha.	Cost per Ha.
1	2	3	4	5	6	7
1	Construction of channel of pickup across Purekallumane (Malemane) in Baluru Hobli.	Chikkama galur	Chikkama galur	50.00	50.00	1.00
2	Construction of pickup across Kuve Kallu Oddue	Chikkama galur	Chikkama galur	40.00	40.00	1.00
3	Construction of canal to Belavadi tank	Chikkama galur	Chikkama galur	200.00	250.00	0.80
4	Construction of pickup across Horanadu halla near Kalasa Hobli	Chikkama galur	Mudigere	50.00	50.00	1.00
5	Construction of pickup across Karakki channel in Kalasa Hobli	Chikkama galur	Mudigere	50.00	50.00	1.00
6	Balance work for construction of Percolation tank near Karalahalla near Bommenahalli in kasaba hobli in Turuvekere Tq, Tumkur Dist.	Tumkur	Turuvekere	40.00	30.00	1.33
7	Construction of check dam across Vrushabhavathi river near Venkatapura	Kolar	Bangarapet	30.00	50.00	0.60
8	Construction of check dam across Markandeya halla near Kanamanahalli	Kolar	Bangarapet	40.00	51.00	0.78
				500.00		

Government Order No. SANEEYEE 236 MASAVI 2009 (22), Bangalore, Dated 7th January 2010

In view of the above, the Administrative approval is hereby accorded for taking up the above 8 works with an estimated cost totalling of Rs. 500.00 lakhs (Five hundred lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.

4. The Central share is in the form of grant to the State.
5. The Projects will be implemented by the Water Resources Department (Minor Irrigation) as per the KTPP act.
6 The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finance Department in their note No.PWD-890-FC-1/2009 dated 09-12-2009

By Order and in the name of the Governor of Karnataka,

K. SUDHAKARA SHETTY

Under Secretary to Government,

Water Resources Department (Minor Irrigation)

PR. 136

WATER RESOURCES SECRETARIAT

Sub : According Administrative Approval to the Minor Irrigation Projects under Accelerated Irrigation Benefit Programme-Regarding.

Read: Letter No. CEMI/(S) TA-3/AE-10/AIBP/2009-10/4925 dt. 22.12-2009 from the Chief Engineer, Minor Irrigation South Zone, Bangalore.

Preamble:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought Prone Area Programme (DPAP). Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks for seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimates of the works proposed under AIBP. Accordingly the following schemes in DPAP taluks are being considered for according administrative approval.

Head of Account : 4702-00-101-1-10-139 AIBP Major Works **Amount Rs. In Lakhs**

Sl. No	Name of the Scheme	District	Taluka	Estimated Cost	Potential Planned in Ha.	Cost per Ha.
1	2	3	4	5	6	7
1	Construction of new tank near Ganguru village in Belur taluk, Hassan dist.	Hassan	Belur	118.00	143.00	0.83

2	Construction of new tank (percolation) near Siddaswamy gudda village in Arasikere taluk, Hassan dist.	Hassan	Arasikere	77.00	63.00	1.22
3	Construction of pickup near Jenukal siddapur haranahalli tank feeder valley in Arasikere taluk, Hassan dist.	Hassan	Arasikere	75.00	121.00	0.62
4	Construction of pickup (bridge cum barrage) near Nagenahalli village in Javagal hobli in Arasikere taluk, Hassan dist.	Hassan	Arasikere	78.00	52.00	1.50
5	Construction of pickup across patnahalla in Bidre panchayath	Chikkama galur	Chikkama galur	60.00	105.00	0.57
6	Construction of channel of pickup across Malaganahalla in Devadan Panchayath	Chikkama galur	Chikkama galur	60.00	105.00	0.57
				468.00		

Government Order No. SANEEYEE 236 MASAVI 2009 (21),
Bangalore, Dated 7th January 2010

In view of the above, the Administrative approval is here by accorded for taking up the above 6 works with an estimated cost totalling of Rs. 468.00 lakhs (Four hundred sixtyeight lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.
5. The Projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finance Department in their note No.PWD-890-FC-1/2009 dated 09-12-2009

By Order and in the name of the Governor of Karnataka,
K. SUDHAKARA SHETTY
Under Secretary to Government,
Water Resources Department (Minor Irrigation)

PR. 137

COMMERCE & INDUSTRIES SECRETARIAT

Sub : Enhancement of borrowing limit of Karnataka Industrial Areas Development Board from current Rs.200 crores to Rs.500 crores and concurrence for Government guarantee.

Read : (1) Chief Executive Officer & Executive Member, KIADB, letter No.IADB/COF/3237 / 2009-10, date 1-7-2009.

(2) Chief Executive Officer & Executive Member, KIADB, letter No. KIADB/COF-112/ 6542/09-10, date. 8-9-2009.

Preamble:

In reference letters read (1) & (2) above Karnataka Industrial Areas Development Board has submitted the proposals to enhance the borrowing limit to Rs.500 crores from the existing Rs.200 crores as it is engaged in acquiring huge extent of land across the State for various projects. The Board would require Rs.1000 crores every year for ongoing acquisition as well as developments.

In the budget speech of Hon'ble Chief Minister for 2009-10, the following schemes are announced.

1. State will allocate Rs.1000 crores for acquiring 1000 to 2000 acres of land in each district through Karnataka Industrial Areas Development Board to facilitate establishment of thousands of small and medium enterprises. It is also proposed to attract foreign capital to the State Industrial Sector by establishing industrial colonies.
2. Establishment of Steel Park in about 10000 acres at Koppal, Bellary & Bagalkot Districts.
3. Establishment of Foundry Park in about 500 acres at Mache, Belgaum.
4. Establishment of Spice Park in about 120 acres at Haveri.
5. Establishment of Auto Parks in about 20 to 25 acres at Basavakalyan, Bidar.
6. Establishment of Silver Park in about 50 acres at Chikkodi, Belgaum.

Further, the Board is acquiring huge extent of lands under Suvarna Karnataka Industrial Corridor Project and Chennai-Bangalore-Mumbai Industrial Corridor Project so as to attract the foreign capital as well as indigenous industrial investments in the State. In this process, Land Bank is being created of about 1,62,000 acres of land across the State for various schemes/programmes.

In the 292nd Board meeting held on 21.3.2009 proposal for availing term loan of Rs.1000 crores for payment of land compensation to the following projects was discussed.

1.	Aerospace manufacturing components for IA at Devanahalli	-	918-10 acres
2.	Hardward Park at Devanahalli	-	869-10 acres
3.	IT Park at Devanahalli	-	1028-20 acres
4.	Other Industrial Areas	-	2259-28 acres
	Total	-	5075-28 acres

After detailed discussions the following suggestions were made by the Board in the 292nd Board Meeting.

1. To mobilize additional resources in the order of Rs.500 to 1000 crores to bridge the gap between the capital receipts and capital expenditure in case of acquisition of large extent of lands.
2. To enhance the present borrowing power of Karnataka Industrial Areas Development Board from Rs.200 crores to the required amount with the approval of the State Government and also.
3. To avail the services of expert financial consultants for advising the Board on the matters such as, quantum of loan, period of repayment, source of borrowings, credit rating etc., for mobilization of additional funds.

Since, the Govt. has already approved the borrowing limit up to Rs.200 crores, Board requested approval from the Govt. for enhancing the borrowing limit from Rs.200 crores to Rs.500 crores in the first stage.

In view of the reasons explained above Government has examined the proposal in detail and decided to enhance the borrowing limit of Karnataka Industrial Areas Development Board from Rs.200 crores to Rs.500 crores and also to give Government guarantee as per the norms. Hence the following order.

GOVERNMENT ORDER NO. CI 245 SPQ 2009, BANGALORE, DATED 8TH JANUARY 2010

I. After careful consideration of the proposal and in exercise of the powers conferred by section 4 of KIADB rules 1966 in chapter III Government is pleased to concur for enhancing the borrowing limit of Karnataka Industrial Areas Development Board from current Rs.200 crores to Rs.500 crores. Government also concurs for the Government guarantee subject to the Cabinet approval and payment of the guarantee fee as per the norms. As the guarantee is being sought on revolving basis, it may be provided for period upto 31-3-2011; thereafter Karnataka Industrial Areas Development Board may seek annual renewal.

II. Karnataka Industrial Areas Development Board has to take action accordingly & submit proposal.

This Order issues with the concurrence of Finance Department vide note No.FD 1584 Exp-1/09, dated 22-12-2009.

By Order and in the name of the Governor of Karnataka,

K.M. VEERAIAH,

Under Secretary to Government (ID)

Commerce & Industries Department.

PR. 119

COMMERCE & INDUSTRIES SECRETARIAT

Sub : The Project Proposal of M/s. CF Biotec Pvt. Ltd. Mumbai to Enhance the Plant capacity.

Read : (1) Proceedings of the 15th State High Level Clearance Committee (SHLCC) meeting held on 21-8-2008

(2) G.O. No. CI 314, 2008, Bangalore.

(3) Proceedings of the 17th State High Level Clearance Committee (SHLCC) meeting held on 28-1-2009.

Preamble:

The Proposal of M/s. CF Biotec Pvt. Ltd. Mumbai to Enhance the Plant capacity from 125 KLPD to atleast 175 KLPD of total Spirit, Bio Diesel from 30TPD to 50 TPD and Co-generation plant from 9 MW to 30 MW in 120 acres of land, at Sogal Village, Saudatti taluk, Belgaum District, with an investment of Rs.345.49 crores. The project proposes to provide employment to about 253 persons.

In the 17th State High Level Clearance Committee (SHLCC) held on 28-1-2009, the Committee has approved the expansion proposed by the project proponents.

The Government has examined the recommendations made by the State High Level Clearance Committee in the 17th SHLCC Meeting held on 28-1-2009 in all respects.

Hence the following order :

GOVERNMENT ORDER NO. CI 67 SPI 2009, BANGALORE, DATED 6TH JANUARY 2010

The Government is pleased to accord approval to M/s. CF Biotec Pvt. Ltd. Mumbai to enhance the Plant capacity from 125 KPD to 175 KLPD of total Spirit, Co-generation from 9 MW to 30 MW in 120

acres of land, at various Sy Nos of Sogal Village. Saudatti taluk, Belgaum District, with an investment of Rs.345.49 crores. The project shall provide employment to about 253 persons.

With respect to their enhancement of Bio Diesel power plant capacity from 30 TPD to 50 TPD the Company has to get the technical approval from Karnataka Renewable Energy Development Limited.

This issues with the concurrence of Energy Department vide No. EN 459 NCE 2009, Date 24-12-2009.

This approval is valid for a period of 3 years from the date of issue.

By Order and in the name of the Governor of Karnataka,

APARNA PAVATE

PR. 120

Desk Officer (Technical Cell)

Commerce & Industries Department.

COMMERCE & INDUSTRIES SECRETARIAT

Sub : Extending Sales Tax concessions for pipeline projects - reg.

Read :
1. G.O. No. FD 303 DSL 99 dated 07-01-2000.
2. G.O. No. FD 303 DSL 99 dated 13-07-2000.
3. G.O. No. FD 303 DSL 99 dated 21-03-2002.
4. Proceedings of the meeting held on 24.08.2009 under the chairmanship of Principal Secretary to Govt. Commerce & Industries Department.

Preamble:

In the Govt. Orders read at (1), (2) & (3) above, certain conditions have been stipulated for extending Sales Tax concessions for pipeline projects. The following 3 projects are confirming to the conditions stipulated in the Govt. Orders.

Sl. No.	Details of the Unit	PRC dated should be before 31.12.1999	Application submitted to FI before 31-12-1999, if own finance 25% of investment before 31-12-1999	Land allotment/ purchased before 31-12-1999	Production date should be before 31-12-2001	Investment of fixed assets created upto date of commencement of production (Rs. In lakhs)
1	M/s. Mahalakshmi Plastics, KIADB Industrial Area, Holenarasipura, Hassan Dist.	16-1-1997	23-11-1999	KIADB 2-4-1997	3-11-2001	14.25
2	M/s. Kamala Industries, Mysore (Hot Tops/APC/ Powder Laddes Powder)	1-6-1996	Own finance 61.58%	KIADB allotted plt on 13-3-1997	23-1-2001	14.38
3	M/s. Automotive Axles Ltd., Mysore [3rd expansion programme] [Automotive Axies/ Brakes] Approval of GoI (IEM filed)	Industrial licence 1-4-1982 by GoI	Funds raised through rights to issue share holders	KIADB 6-3-1981	25-6-1995	3972.16 Expansion-I

Hence the following order :

GOVERNMENT ORDER NO. CI 31 SPI 2009, BANGALORE, DATED 4TH JANUARY 2010

The Government is pleased to extend Sales Tax concessions to :

1. M/s. Mahalakshmi Plastics, KIADB Industrial Area, Holenarasipura, Hassan Dist.
2. M/s. Kamala Industries, Mysore
3. M/s. Automotive Axles Ltd., Mysore

With the following conditions of Finance Department.

a) The period of ST incentives/concessions that the pipeline units would normally be entitled to should be reckoned with effect from 1st January 2002, irrespective of the actual date of commercial production.

b) The sales tax exemption should only be prospective i.e., it should not involve refund of tax already paid by these units.

The Commissioner for Industrial Development and Director of Industries & Commerce is authorized to issue the Fixed Assets Valuation Certificate (FAVC) incorporating the conditions laid by Finance Department.

The Commercial Tax Department will have to extend the sales tax exemptions as per the respective Industrial Policies with effect from 01-01-2002 irrespective of date of commercial production.

This issues with the concurrence of Finance Department (Exp.1) vide No. FD 1695 Exp.1 2009/ FD 525 Exp 1 2008, dated 15-12-2009.

By Order and in the name of the Governor of Karnataka,

APARNA PAVATE

PR. 121

Desk Officer (Technical Cell)

Commerce & Industries Department.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ವಾಕೈ 140 ಕೈಸೇವಿ 2009, ಬೆಂಗಳೂರು, ದಿನಾಂಕ: 5ನೇ ಜನವರಿ 2010

ಸರ್ಕಾರದ ಆದೇಶ ಸಂಖ್ಯೆ ವಾಕೈ 140 ಕೈಸೇವಿ 2009, ಬೆಂಗಳೂರು ದಿನಾಂಕ 05-10-2009 ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಮೂಹ 'ಎ' ಗುಂಪಿನ ವೇತನ ಶ್ರೇಣಿ ರೂ. 18,150-26,925 ವೇತನ ಶ್ರೇಣಿಯ ಉಪ ನಿರ್ದೇಶಕರಾದ ಶ್ರೀ ಎ. ಲೋಕೇಶ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ ಎಂಬುವುದರ ಮುಂದೆ "ದಿ: 20-9-2009 ರಂದು ಆಯ್ಕೆ ಕಾಲಿಕ ವೇತನ ಶ್ರೇಣಿಗೆ ಅರ್ಹರಾಗಿದ್ದಾರೆ" ಎಂಬುದನ್ನು ಸೇರ್ಪಡಿಸಿಕೊಂಡು ರೂ. 19,050-27,600 ನ್ನು ಮಂಜೂರು ಮಾಡಿದೆ ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಸಿ. ಪ್ರಕಾಶ್,

ಪಿ.ಆರ್.122

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಕಬ್ಬು ಬೆಳೆದ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ಸಕ್ಕರೆ ವರ್ಷ 2006-07ರ ಸಾಲಿಗೆ ವಿಶೇಷ ನೆರವು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ ಸಿಐ 58 ಎಸ್‌ಜಿಎಫ್ 07 (ಭಾಗ-2), ದಿನಾಂಕ 13-06-2007.
2. ಸರ್ಕಾರದ ಆದೇಶ ಸಂಖ್ಯೆ : ಸಿಐ 58 ಎಸ್‌ಜಿಎಫ್ 07 (ಭಾಗ-2) (3), ದಿನಾಂಕ 2-11-2007.
3. ಸರ್ಕಾರದ ಆದೇಶ ಸಂಖ್ಯೆ : ಸಿಐ 58 ಎಸ್‌ಜಿಎಫ್ 07 (ಭಾಗ-2) (8), ದಿನಾಂಕ 25-03-2008
4. ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪತ್ರ ಸಂಖ್ಯೆ ಡಿಎಸ್‌ಕೆ/ಎಸ್‌ಟಿಟಿ/13/2007-08, ದಿನಾಂಕ 03-11-2008 ಮತ್ತು 28-02-2009.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿರುವ ಸರ್ಕಾರದ ಆದೇಶದಲ್ಲಿ ರಾಜ್ಯದ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 2006-07ನೇ ಸಾಲಿನ ಸಕ್ಕರೆ ವರ್ಷದಲ್ಲಿ ಕೆಲವು ಸಹಾಯಧನ ಸೌಲಭ್ಯವನ್ನು ನೀಡಲು ಸರ್ಕಾರದ ಒಪ್ಪಿಗೆಯನ್ನು ನೀಡಲಾಗಿದೆ.

ಮೇಲೆ ಓದಲಾದ (2) ರಲ್ಲಿರುವ ಸರ್ಕಾರದ ಆದೇಶದಲ್ಲಿ ದಿನಾಂಕ 16-04-2007 ರಿಂದ ದಿನಾಂಕ 31-05-2007 ರವರೆಗೆ ವಿಸ್ತರಿಸಿದ ಅವಧಿಯಲ್ಲಿ ಸಕ್ಕರೆ ಕಾರ್ಖಾನೆಗಳು ನುರಿಸಿದ ಪ್ರತಿ ಟನ್ ಕಬ್ಬಿಗೆ 100/- ರೂ.ಗಳ ಸಹಾಯಧನ ಪಾವತಿ ಸಂಬಂಧ 20,38,64,000 ರೂ.ಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3) ರಲ್ಲಿರುವ ಸರ್ಕಾರದ ಆದೇಶದಲ್ಲಿ ವಿಸ್ತರಿಸಿದ ಅವಧಿ ನಂತರವು ಅಂದರೆ ದಿನಾಂಕ 01-06-2007 ರಿಂದ 31-07-2007 ರವರೆಗೆ ಸಕ್ಕರೆ ಕಾರ್ಖಾನೆಗಳು ನುರಿಸಿದ ಪ್ರತಿ ಟನ್ ಕಬ್ಬಿಗೆ 100/- ರೂ.ಗಳ ಸಹಾಯಧನ ಪಾವತಿ ಸಂಬಂಧ 8,74,92,000 ರೂ.ಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4) ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರ ಪತ್ರದಲ್ಲಿ ಮೇಲೆ ಓದಲಾದ (2) ಮತ್ತು (3) ರಲ್ಲಿರುವ ಆದೇಶಗಳಲ್ಲಿ ಬಿಡುಗಡೆಗೊಳಿಸಿದ ಸಹಾಯಧನವನ್ನು ಮಂಡ್ಯ, ಮೈಸೂರು ಮತ್ತು ರಾಮನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳು ದಿನಾಂಕ 31-03-2008 ರೊಳಗೆ ಹಣ ಡ್ರಾ ಮಾಡದೇ ಇದ್ದ ಕಾರಣ ಸದರಿ ಹಣವನ್ನು ಈ ಕೆಳಕಂಡ 5 ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆಗೊಳಿಸಲಾಗಿಲ್ಲವೆಂದು ಈ ಹಣವನ್ನು 2008-09ನೇ ಸಾಲಿನಲ್ಲಿ ಮರುಹೊಂದಾಣಿಕೆ ಮೂಲಕ ಬಿಡುಗಡೆಗೊಳಿಸುವ ಬಗ್ಗೆ ಆಯುಕ್ತರು ಕಬ್ಬು ಅಭಿವೃದ್ಧಿರವರು ತಮ್ಮ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

(ರೂ.ಗಳಲ್ಲಿ)

ಕ್ರ. ಸಂ.	ಕಾರ್ಖಾನೆ	ಮೊತ್ತ	ಜಿಲ್ಲಾಧಿಕಾರಿ
1.	ಎನ್.ಎಸ್.ಎಲ್. ಶುಗರ್ಸ್ (ಲಿ)	89,11,000	ಮಂಡ್ಯ
2.	ಶ್ರೀ ಚಾಮುಂಡೇಶ್ವರಿ ಶುಗರ್ಸ್ (ಲಿ)	69,10,000	ಮಂಡ್ಯ
3.	ಮೈಸೂರು ಸಕ್ಕರೆ ಕಾರ್ಖಾನೆ	8,69,000	ಮಂಡ್ಯ
4.	ಬನ್ನಾರಿ ಅಮ್ಮನ್ ಶುಗರ್ಸ್ (ಲಿ)	55,11,000	ಮೈಸೂರು
5.	ಎಸ್.ಪಿ.ಆರ್. ಶುಗರ್ಸ್ (ಲಿ)	13,82,000 6,98,000	(ಆದೇಶ ದಿ. 02-11-07) (ಆದೇಶ ದಿ. 25-3-08) ರಾಮನಗರ
	ಒಟ್ಟು	**2,42,81,000**	

ಆಯುಕ್ತರು, ಕಬ್ಬು ಅಭಿವೃದ್ಧಿ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಕ್ರಮ ಸಂಖ್ಯೆ (4) ಮತ್ತು (5) ರಲ್ಲಿರುವ ಕಾರ್ಖಾನೆಗಳನ್ನು ಹೊರತುಪಡಿಸಿ, ಉಳಿದ 3 ಕಾರ್ಖಾನೆಗಳು ಸರ್ಕಾರಕ್ಕೆ ನೀಡಬೇಕಾದ ಬಡ್ಡಿ ರಹಿತ ಸಾಲ ಮತ್ತು ಕಬ್ಬು ಖರೀದಿ ತೆರಿಗೆ ಬಾಕಿ ಉಳಿಸಿಕೊಂಡಿರುವುದರಿಂದ ನೀಡಬೇಕಾದ ಸಹಾಯಧನದಲ್ಲಿ ಹೊಂದಾಣಿಕೆ ಮಾಡಿಕೊಂಡು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 298 ಎಸ್‌ಜಿಎಫ್ 2008, ಬೆಂಗಳೂರು, ದಿನಾಂಕ 5ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡ 5 ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ವಿಸ್ತರಿಸಿದ ಅವಧಿ ದಿನಾಂಕ 16-04-2007 ರಿಂದ 31-05-2007 ಮತ್ತು ವಿಸ್ತರಿಸಿದ ಅವಧಿಯ ನಂತರವು ಅಂದರೆ 01-06-2007 ರಿಂದ 31-07-2007 ರವರೆಗೆ ನುರಿಸಿದ ಪ್ರತಿ ಟನ್ ಕಬ್ಬಿಗೆ 100/- ರೂ.ಗಳಂತೆ ಸಹಾಯಧನವನ್ನು ಮೇಲೆ ಓದಲಾದ (2) ಮತ್ತು (3) ಆದೇಶಗಳಲ್ಲಿ ಬಿಡುಗಡೆಗೊಳಿಸಿದ್ದು, ಈ ಹಣವನ್ನು 2008-09ನೇ ಸಾಲಿನಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಡ್ರಾ ಮಾಡದೆ ಇದ್ದ ಪ್ರಯುಕ್ತ ಸದರಿ ಹಣವನ್ನು ಮರು ಹೊಂದಾಣಿಕೆ ಮೂಲಕ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

(ರೂ.ಗಳಲ್ಲಿ)

ಕ್ರ. ಸಂ.	ಕಾರ್ಖಾನೆ	ಮೊತ್ತ	ಕಾರ್ಖಾನೆಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಮೊತ್ತ		ನಿವ್ವಳ ಕಾರ್ಖಾನೆಗಳಿಗೆ ಬಿಡುಗಡೆ ಮೊತ್ತ/ ಜಿಲ್ಲಾಧಿಕಾರಿಗಳು
1.	ಎನ್.ಎಸ್.ಎಲ್. ಶುಗರ್ಸ್ (ಲಿ), ಮಂಡ್ಯ	89,11,000	89,11,000	(980.94 ಲಕ್ಷ)	---
2.	ಶ್ರೀ ಚಾಮುಂಡೇಶ್ವರಿ ಶುಗರ್ಸ್ (ಲಿ), ಮಂಡ್ಯ	69,10,000	69,10,000	(1055.56 ಲಕ್ಷ)	---
3.	ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ	8,69,000	8,69,000	(1028.24 ಲಕ್ಷ)	---
4.	ಬನ್ನಾರಿ ಅಮ್ಮನ್ ಶುಗರ್ಸ್ (ಲಿ), ನಂಜನಗೂಡು	55,11,000	---	---	55,11,000 (ಜಿಲ್ಲಾಧಿಕಾರಿ, ಮೈಸೂರು)
5.	ಎಸ್.ಪಿ.ಆರ್. ಶುಗರ್ಸ್ (ಲಿ), ರಾಮನಗರ	13,82,000 6,98,000	---	---	20,80,000 (ಜಿಲ್ಲಾಧಿಕಾರಿ, ರಾಮನಗರ)
	ಒಟ್ಟು	**2,42,81,000**	**1,66,90,000**	---	**75,91,000**

ಮೇಲಿನ ಕಂಡಿಕೆಯಲ್ಲಿ ವಿವರಿಸಿದಂತೆ ಕ್ರಮ ಸಂಖ್ಯೆ (1) ರಿಂದ (3) ರಲ್ಲಿರುವ ಕಾರ್ಖಾನೆಗಳು ಸರ್ಕಾರಕ್ಕೆ ಕಬ್ಬು ಖರೀದಿ ತೆರಿಗೆ ಬಾಕಿ ಉಳಿಸಿಕೊಂಡಿದ್ದು, ಈ ಕಾರ್ಖಾನೆಗಳಿಂದ ಸರ್ಕಾರಕ್ಕೆ ಬರಬೇಕಾದ ರೂ. 1,66,90,000-00 ಗಳನ್ನು ಲೆಕ್ಕ ಶೀರ್ಷಿಕೆ "2852-08-201-0-07 (ಯೋಜನೆ)" ಇದರಡಿ ಬಿಡುಗಡೆಗೊಳಿಸಿ ನಂತರ ವೆಚ್ಚ ಹಾಕಿ ಲೆಕ್ಕ ಶೀರ್ಷಿಕೆ 0040-00-110-1-04 ಗೆ ಜಮಾ ಮಾಡುವುದು. 2009-10 ನೇ ಸಾಲಿನ ಲೆಕ್ಕ ಹೊಂದಾಣಿಕೆಯನ್ನು ಮಹಾಲೇಖಪಾಲರು ಮಾಡುವರು.

ಲೆಕ್ಕ ಶೀರ್ಷಿಕೆ 2852-08-201-0-07 (ಯೋಜನೆ) ಇದರಡಿ ರೂ.75,91,000-00 ಗಳನ್ನು ಜಿಲ್ಲಾಧಿಕಾರಿ, ಮೈಸೂರು ಮತ್ತು ರಾಮನಗರ ರವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆ ಮಾಡಲಾದ ಈ ಹಣವನ್ನು ಸರ್ಕಾರ ವಿಧಿಸಿರುವ ನಿಬಂಧನೆ ಹಾಗೂ ಮಾರ್ಗದರ್ಶನಗಳನ್ವಯ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ವಿತರಿಸಲಾಗಿರುವ ಹಣದ ವಿವರವನ್ನು ಜಿಲ್ಲಾಧಿಕಾರಿಗಳಿಂದ ಕಬ್ಬು ಆಯುಕ್ತರು ಪಡೆದು ಸರ್ಕಾರಕ್ಕೆ ವರದಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 1218 ವೆಚ್ಚ-1/2009, ದಿನಾಂಕ 09-10-09, ಎಫ್‌ಡಿ 1476 ವೆಚ್ಚ-1/2009, ದಿನಾಂಕ 26-10-09 ಮತ್ತು ಆಇ 1783 ವೆಚ್ಚ-1/2009 ದಿನಾಂಕ 30-12-2009 ರಂದು ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಆನಂದ್ ಕುಮಾರ್,
ಪೀಠಾಧಿಕಾರಿ (ಸಕ್ಕರೆ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.123

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ರೇಷ್ಮೆ ಇಲಾಖೆಯ ಚದಲಪುರ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯ ಸರ್ವೆ ನಂ. 81 ರಲ್ಲಿನ 14 ಎಕರೆ ಜಮೀನಿನಲ್ಲಿ 2 ಎಕರೆ ಜಮೀನನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೂಡ್‌ಸೆಟಿ/ಆರ್-ಸೆಟಿಸಂಸ್ಥೆ ಸ್ಥಾಪನೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ : 1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿರವರ ಅನಧಿಕೃತ ಟಿಪ್ಪಣಿ ಸಂಖ್ಯೆ. ಗ್ರಾಅಪ/130/ಎಸ್‌ಇಪಿ (ಇತರೆ) 09/ಪಿ1, ದಿನಾಂಕ 17-12-2009.

2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಇವರ ಪತ್ರ ಸಂಖ್ಯೆ : ರೇಜೀರೇಕ್ಷೇ/ಬಿ.ಕೋ/ಚದ/11/09-10, ದಿನಾಂಕ 26-12-2009.

ಪ್ರಸ್ತಾವನೆ :

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿ ದಿನಾಂಕ 7-1-2009 ರನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗ್ರಾಮೀಣಾ ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು (ಆರ್-ಸೆಟಿ) ಲೀಡ್ ಬ್ಯಾಂಕ್‌ಗಳ ಮೂಲಕ ಸ್ಥಾಪಿಸಲು ಸೂಚನೆ ಇದ್ದು, ಈ ಬಗ್ಗೆ ರಾಜ್ಯ ಸರ್ಕಾರವು ನಿವೇಶನ ಅಥವಾ ಜಮೀನನ್ನು ಉಚಿತವಾಗಿ ಒದಗಿಸಬೇಕಾಗಿರುತ್ತದೆ ಮತ್ತು ಕೇಂದ್ರ ಸರ್ಕಾರವು ಕಟ್ಟಡ, ಪೀಠೋಪಕರಣ ಮತ್ತು ಯಂತ್ರೋಪಕರಣಗಳಿಗಾಗಿ ರೂ.1.00 ಕೋಟಿ ಅನುದಾನ ನೀಡುತ್ತದೆ. ಈ ಯೋಜನೆಯು ದಿನಾಂಕ 31-12-2009 ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಸದರಿ ಸಮಯದೊಳಗೆ ನಿವೇಶನ ನೀಡದಿದ್ದಲ್ಲಿ ಕೇಂದ್ರ ಸರ್ಕಾರವು ಹಣವನ್ನು ಹಿಂಪಡೆಯುವುದಾಗಿ ತಿಳಿಸಿರುತ್ತದೆ. ಆದ್ದರಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೂಡ್‌ಸೆಟ್/ಆರ್-ಸೆಟಿ ಸಂಸ್ಥೆ ಸ್ಥಾಪನೆಗೆ ಉಚಿತವಾಗಿ ರೇಷ್ಮೆ ಇಲಾಖೆಯ ನಿವೇಶನವನ್ನು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶನದಂತೆ 33 ವರ್ಷಗಳ ಅವಧಿಗೆ ಗುತ್ತಿಗೆ ಮೇಲೆ ನೀಡುವಂತೆ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಅನಧಿಕೃತ ಟಿಪ್ಪಣಿಯಲ್ಲಿ ಈ ಇಲಾಖೆಯನ್ನು ಕೋರಿರುತ್ತಾರೆ.

ಚದಲಪುರ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯ ಸರ್ವೆ ನಂ.81 ರಲ್ಲಿರುವ 14 ಎಕರೆ ಜಮೀನಿನಲ್ಲಿ 2 ಎಕರೆ ಜಮೀನನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಉದ್ಯೋಗ ಮತ್ತು ವೃತ್ತಿ ಕೌಶಲ್ಯಗಳ ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಹಸ್ತಾಂತರಿಸುವಂತೆ ಮತ್ತು ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರು ಕೋರಿದ್ದು, ಅವರು ಕೋರಿರುವ 2 ಎಕರೆ ಜಮೀನಿನಲ್ಲಿ ಯಾವುದೇ ಇಲಾಖಾ ಚಟುವಟಿಕೆಗಳು ನಡೆಯದೇ ಇರುವ ಪ್ರಯುಕ್ತ ಅವರ ಕೋರಿಕೆಯಂತೆ ಉದ್ಯೋಗ ಮತ್ತು ವೃತ್ತಿ ಕೌಶಲ್ಯಗಳ ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಜಮೀನನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸಬಹುದೆಂದು ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗ ಇವರು ಶಿಫಾರಸು ಮಾಡಿರುವುದರಿಂದ ಅದರಂತೆ ಚದಲಪುರ ಸರ್ಕಾರಿ ಬಿತ್ತನೆ ಕೋಠಿಯ ಸರ್ವೆ ನಂ. 81 ರಲ್ಲಿನ 14 ಎಕರೆ ಜಮೀನಿನ ಪೈಕಿ 2 ಎಕರೆ ಜಮೀನನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸಲು ಸೂಕ್ತ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ಕೇಂದ್ರ ಸರ್ಕಾರದ ಯೋಜನೆಯ ಜಾರಿಗಾಗಿ ತುರ್ತಾಗಿ ಜಮೀನು ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೋರಿದ್ದು, ಕೋರಿರುವ ಜಮೀನಿನಲ್ಲಿ ರೇಷ್ಮೆ ಇಲಾಖೆಗೆ ಸಂಬಂಧಿಸಿದ ಇಲಾಖಾ ಕಾರ್ಯಚಟುವಟಿಕೆಗಳು ನಡೆಯದೇ ಇರುವ ಪ್ರಯುಕ್ತ ರೇಷ್ಮೆ ಆಯುಕ್ತರು ಶಿಫಾರಸ್ಸು ಮಾಡಿರುವಂತೆ 2 ಎಕರೆ ಜಮೀನನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ ವಾಕೈ 33 ರೇಯೋವಿ 2009, ಬೆಂಗಳೂರು ದಿನಾಂಕ 31ನೇ ಡಿಸೆಂಬರ್ 2009

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯನ್ವಯ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಥಾಪಿಸುವುದಕ್ಕಾಗಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಶಿಫಾರಸ್ಸು ಮಾಡಿರುವಂತೆ ಚದಲಪುರ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯ ಸರ್ವೆ ನಂ. 81 ರಲ್ಲಿನ 14 ಎಕರೆ ಜಮೀನಿನ ಪೈಕಿ 2 ಎಕರೆ ಜಮೀನನ್ನು 33 ವರ್ಷಗಳ ಅವಧಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಗುತ್ತಿಗೆ ಮೇಲೆ ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಭಾರತಿ ಆರ್. ನಾಯಕ್,
ಪೀಠಾಧಿಕಾರಿ (ರೇಷ್ಮೆ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.124

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮಂಜುನಾಥ, ಮಾಜಿ ಸಿ.ಪಿ.ಸಿ. 460 ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಇವರ ಆದೇಶ ಸಂಖ್ಯೆ: ಡಿ.ಇ. 12/2007-08 ಓ.ಬಿ:334/2007-08 ದಿನಾಂಕ : 15-02-08.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ : ಅಪೀಲು/10/2008-09 ಓಬಿ: 13/2008-09 ದಿನಾಂಕ : 21-06-08.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 20-09-08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)70/2008-09 ದಿನಾಂಕ : 04-12-2008.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ. 220 ಸಿಎನ್‌ಎಸ್. 08 ದಿನಾಂಕ : 01-12-09.

ಪ್ರಸ್ತಾವನೆ :

ಶ್ರೀ ಮಂಜುನಾಥ, ಇವರು ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅನಧಿಕೃತವಾಗಿ ಗೈರುಹಾಜರಾಗಿ, ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

ಇವರು ಪದೇ ಪದೇ ಅನದಿಕೃತ ಗೈರು ಹಾಜರಿಯಾಗುವ ಹವ್ಯಾಸವುಳ್ಳವರಾಗಿದ್ದು, ಈ ಹಿಂದೆ ಗೈರುಹಾಜರಿಯಾದ ಅವಧಿಗಳನ್ನು ಲಘು ಶಿಕ್ಷೆ ಹಾಗೂ ಕಠಿಣ ಶಿಕ್ಷೆ ವಿಧಿಸುವುದರ ಮೂಲಕ ಇತ್ಯರ್ಥಪಡಿಸಿದ್ದರೂ ಸಹ ಇವರ ಹವ್ಯಾಸದಲ್ಲಿ ಯಾವುದೇ ಸುಧಾರಣೆಯಾಗದೇ ದಿನಾಂಕ 24-05-2007 ರಿಂದ 16-07-2007 ವರೆಗೆ ಅನಧಿಕೃತ ಗೈರುಹಾಜರಿಯಾಗಿರುವುದರ ಮೂಲಕ ಬೇಜವಾಬ್ದಾರಿತನ ನಿರ್ಲಕ್ಷತೆ ಹಾಗೂ ಅಶಿಸ್ತು ಪ್ರದರ್ಶಿಸಿರುತ್ತಾರೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 15-02-2008ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದಾರೆ. ದಿನಾಂಕ: 24-05-2007 ರಿಂದ 16-07-2007ರ ವರೆಗೆ ಅನಧಿಕೃತವಾಗಿ ಗೈರುಹಾಜರಾದ ಅವಧಿಯನ್ನು ವೇತನ ರಹಿತ ರಜೆಯಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ : 21-06-2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಮಾನವೀಯತೆ ನೆಲೆಯಲ್ಲಿ ಒಂದು ಕೊನೆಯ ಅವಕಾಶವಾಗಿ ಪರಿಷ್ಕರಣ ಮೇಲ್ಮನವಿಯ ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಓದಲಾದ (5)ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 308 ಪೊಸಿಅ 2008, ಬೆಂಗಳೂರು, ದಿನಾಂಕ: 31ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ. ಶ್ರೀ ಮಂಜುನಾಥ, ಮಾಜಿ ಪಿ.ಸಿ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ, ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಿನಾಂಕ: 15-02-2008ರ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ.

(i) ಅರ್ಜಿದಾರರನ್ನು ಸೇವೆಗೆ ಪುನರ್ ನೇಮಕ ಮಾಡಲಾಗಿದೆ.

(ii) ಇವರ ವೇತನವನ್ನು ಪಿ.ಸಿ. ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಎರಡು ವರ್ಷಗಳ ಅವಧಿಗೆ ಇಳಿಸಲಾಗಿದೆ.

(iii) ಸೇವೆಯಿಂದ ವಜಾಗೊಂಡು ಪುನರ್ ನೇಮಕ ಮಾಡಿ ಕರ್ತವ್ಯಕ್ಕೆ ಹಾಜರಾಗುವವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-Non) ಎಂದು ಪರಿಗಣಿಸಲಾಗಿದೆ

(iv) ದಿನಾಂಕ 24-05-2007 ರಿಂದ 16-07-2007ರ ವರೆಗೆ ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಲಾಗಿದೆ.

ಪಿ.ಆರ್. 110

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ. ಎನ್. ರವಿಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
(ಪೊಲೀಸ್ ಸೇವೆಗಳು)

ಶಿಕ್ಷಣ ಸಚಿವಾಲಯ

ವಿಷಯ : ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಅನುಕಂಪದ ನೇಮಕಾತಿ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 98 ಎಸ್‌ಟಿಬಿ 96, ದಿನಾಂಕ:21-11-1996.
2. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ : ಡಿಟಿಇ 70 ಇಎಸ್‌ಟಿ (4) ಎ 2004. ದಿನಾಂಕ : 02-03-2006/03-04-2006, 09-11-2006, 20-12-2007, 14/24-03-2008 ಹಾಗೂ 12/25-11-2008.
3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 209 ಎಸ್‌ಇಪಿ 2007, ದಿನಾಂಕ: 10-11-2009.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆಯಲ್ಲಿದ್ದಾಗ ಮೃತರಾದ ನೌಕರರ / ಅಧಿಕಾರಿ / ಬೋಧಕ ಸಿಬ್ಬಂದಿ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು 1996 ರನ್ವಯ ದಿನಾಂಕ :12-09-1996 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 100 ಎಸ್‌ಸಿಎ 95 ರಲ್ಲಿನ ನಿಯಮಗಳನ್ನು ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಪತ್ರಗಳಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿನ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸಿದ ಮೃತ ಸಿಬ್ಬಂದಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಪ್ರಸ್ತಾವನೆಗಳು ಬಂದಿರುತ್ತವೆ. ಸದರಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಕೋರಿ ಬಂದ ಒತ್ತಡಗಳನ್ನು ಗಮನಿಸಿ ಅನುಕಂಪದ ನೇಮಕಾತಿಗಳು ಮೃತ ನೌಕರನ ಕುಟುಂಬಕ್ಕೆ ಆಸರೆ ಕಲ್ಪಿಸಲು ಸರ್ಕಾರವೇ ಸದುದ್ದೇಶದಿಂದ ನೀಡಿರುವಂತಹ ಆದೇಶವಾಗಿರುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ 1 ಮತ್ತು 3 ರಲ್ಲಿ ಈ ಸೌಲಭ್ಯಗಳನ್ನು ವಿಸ್ತರಿಸುವಂತೆಯೇ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸಿದ್ದ ಮೃತ ಸಿಬ್ಬಂದಿಗಳ ಅವಲಂಬಿತರಿಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಟಿಇಸಿ 2006, ಬೆಂಗಳೂರು, ದಿನಾಂಕ: 05ನೇ ಜನವರಿ 2010.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ನೇಮಕಾತಿ ಅನುಮೋದನೆಗೊಂಡು ಅನುದಾನಿತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಂತಹ ವ್ಯಕ್ತಿಗಳು ಮೃತರಾದಂತಹ ನೌಕರರ / ಅಧಿಕಾರಿ / ಬೋಧಕರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು 1996 ರನ್ವಯ ದಿನಾಂಕ : 12-09-96 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 100 ಎಸ್‌ಸಿಎ 95 ರಲ್ಲಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿಸ್ತರಿಸಲಾಗಿದೆ.

1. ಪ್ರತಿಯೊಬ್ಬ ಅರ್ಜಿದಾರರ ಪ್ರಕರಣದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಸದರಿ ನಿಯಮಗಳ ಪ್ರಕಾರ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರತಕ್ಕದ್ದು.
2. ಅರ್ಜಿದಾರರು ಅರ್ಜಿ ನೀಡಿದ ದಿನಾಂಕದಂದು ವಯೋಮಿತಿ ಒಳಗಡೆ ಇರತಕ್ಕದ್ದು ಎಂಬುದನ್ನು ಪರಿಶೀಲಿಸಿ, ಖಚಿತಪಡಿಸಿಕೊಂಡು ಸೂಕ್ತ ಪ್ರಸ್ತಾವನೆಗಳನ್ನು ಅನುಬಂಧದಲ್ಲಿನ ಚೆಕ್ ಲಿಸ್ಟ್‌ನಲ್ಲಿ ಪ್ರತಿಯೊಂದು ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಪಡೆದು ನಿಯಮಾನುಸಾರ ಅರ್ಹ ಪ್ರಕರಣಗಳಲ್ಲಿ ಅನುಕಂಪದ ಆಧಾರದ ನೇಮಕಾತಿಯನ್ನು ಅನುದಾನಸಹಿತ ಅನುಮೋದಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3. ಈ ಆದೇಶದನ್ವಯ ಮಂಜೂರಾದ ಖಾಲಿ ಹುದ್ದೆಗಳ ಎದುರಿಗೆ ಮಾತ್ರ ಅನುಕಂಪದ ಆಧಾರದ ಮೇರೆಗೆ ನೇಮಕಾತಿ ಮಾಡಬಹುದು. ಆದರೆ ಈ ಉದ್ದೇಶಕ್ಕಾಗಿ ಹೊಸ ಹುದ್ದೆಗಳನ್ನು ಯಾವುದೇ ವೃಂದದಲ್ಲಿ ಸೃಜಿಸುವಂತಿಲ್ಲ.

4. ಸಂಬಂಧಪಟ್ಟ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಅನುಕಂಪದ ನೇಮಕಾತಿ ಕುರಿತು ಹುದ್ದೆಗಳು ಖಾಲಿ ಇಲ್ಲದಿದ್ದಲ್ಲಿ ಬೇರೆ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಗಳಿನ ಅನುದಾನಸಹಿತ ಮಂಜೂರಾದ ಖಾಲಿ ಹುದ್ದೆಗಳಿಗೆ ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 111

(ಬಿ. ಎಸ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ).
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪರಿಷ್ಕೃತ ಚೆಕ್ ಲಿಸ್ಟ್

1.	ಅರ್ಜಿದಾರರ/ಅರ್ಜಿದಾರಳ ಹೆಸರು ಮತ್ತು ದಿವಂಗತ ನೌಕರರೊಂದಿಗೆ ಇರುವ ಸಂಬಂಧ	
2.	ದಿವಂಗತ ನೌಕರರ/ನೌಕರಳ ಹೆಸರು ಮತ್ತು ಪದನಾಮ ಹಾಗೂ ಕರ್ತವ್ಯ ನಿರ್ವಹಿಸುತ್ತಿದ್ದ ಇಲಾಖೆ/ಶಾಖೆ	
3.	ನೌಕರನು ಮರಣ ಹೊಂದಿದ ದಿನಾಂಕ: ಅಧಿಕೃತ ಧೃಢೀಕರಣ ಪತ್ರ	
4.	ಅನುಕಂಪದ ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ ದಿನಾಂಕ	
5.	ದಿವಂಗತ ನೌಕರನು/ನೌಕರಳು ನಾಮ ನಿರ್ದೇಶಿತರ ಹೆಸರುಗಳು/ನೀಡಿದ ಸೂಕ್ತ ದಾಖಲೆ	
6.	ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ ಮತ್ತು ಆ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ	
7.	ಅರ್ಜಿ ಸಲ್ಲಿಸಿದ ದಿನಾಂಕದಂದು ಅರ್ಜಿದಾರರ ವಿದ್ಯಾರ್ಹತೆ	
8.	ದಿವಂಗತ ನೌಕರರ ಜೀವಿತ ಕುಟುಂಬ ಸದಸ್ಯರುಗಳ ವಿವರಗಳು (ಸಂಬಂಧಪಟ್ಟ ತಹಶೀಲ್ದಾರರವರಿಂದ)	
9.	ಅರ್ಜಿ ಸಲ್ಲಿಸಿದ ದಿನಾಂಕದಂದು ಅರ್ಜಿದಾರರ ಕ್ರಮ ಸಂಖ್ಯೆ : 8ರಲ್ಲಿ ನಮೂದಿಸಿದ ಕುಟುಂಬದ ಪ್ರತಿಯೊಬ್ಬ ಸದಸ್ಯರುಗಳ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ಸೇರಿ ಮೊದಲನೇ ದರ್ಜೆ ಸಹಾಯಕ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಮತ್ತು ಗರಿಷ್ಠ ವೇತನದ ಸರಾಸರಿಯ ವೇತನಕ್ಕೆ ತುಟ್ಟಿಭತ್ಯೆ, ಬೆಂಗಳೂರಿಗೆ ಅನ್ವಯಿಸುವಂತೆ ಮನೆ ಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆಯು ಸೇರಿ ಬರುವ ಒಟ್ಟು ಉಪಲಬ್ದಿಗಿಂತ ಕಡಿಮೆ ಇದೆಯೇ? (1) ಅಂತಹ ಮಾಸಿಕ ವರಮಾನವನ್ನು ಲೆಕ್ಕ ಹಾಕುವಾಗ, ಕುಟುಂಬ ನಿವೃತ್ತಿ ವೇತನ, ನಿವೃತ್ತಿಯಿಂದ ಪಡೆದ ಒಟ್ಟು ಆರ್ಥಿಕ ಪ್ರಯೋಜನಗಳು ಮತ್ತು ಅದರ ಮೇಲೆ ಪ್ರಾಪ್ತವಾದ ಬಡ್ಡಿಯನ್ನು ಬಿಟ್ಟು ಬಿಡತಕ್ಕದ್ದು. (2) ಮೃತ ಸರ್ಕಾರಿ ನೌಕರನ ಕುಟುಂಬದ ಯಾವೊಬ್ಬ ಸದಸ್ಯನು ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಸೇವೆಯಲ್ಲಿದ್ದರೆ ಅಥವಾ ಸರ್ಕಾರಿ ಅಥವಾ	

	ಖಾಸಗಿ ವಲಯ ಉದ್ಯಮದಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದರೆ ಅವನ ನಿಯೋಜಕನಿಂದ ಪಡೆದ ಪ್ರಮಾಣ ಪತ್ರದ ಆಧಾರದ ಮೇಲೆ ಮತ್ತು ಅಂತಹ ಸದಸ್ಯನು ಸ್ವಯಂ ಉದ್ಯೋಗದಲ್ಲಿ ತೊಡಗಿದ್ದರೆ, ತಹಸೀಲ್ದಾರ್ ದರ್ಜೆಗಿಂತ ಕಡಿಮೆಯಲ್ಲದ ಕಂದಾಯ ಅಧಿಕಾರಿಯಿಂದ ಪಡೆದ ವರಮಾನ ಪ್ರಮಾಣ ಪತ್ರದ ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು. (3) ಮೃತ ಸರ್ಕಾರಿ ನೌಕರನಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ ಅವನೊಂದಿಗೆ ವಾಸಿಸುತ್ತಿದ್ದ ಅವರ ಪತ್ನಿ ಅಥವಾ ಅವಳ ಪತಿ ಮತ್ತು ಅವರ ಮಗ, ಅವಿವಾಹಿತ ಮಗಳು ಮತ್ತು ವಿಧವಾ ಮಗಳು.	
10.	ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಅರ್ಜಿದಾರರಿಗೆ ಕುಟುಂಬದ ಇತರೆ ಸದಸ್ಯರು ನೀಡಿರುವ ಅಫಿಡವಿಟ್ ಲಗತ್ತಿಸಿದೆಯೇ ?	
11.	ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ ನಿಯಮಗಳು) ನಿಯಮಾವಳಿಗಳು 1977ರ ಪ್ರಕಾರ ಅರ್ಜಿದಾರರು ನೇಮಕಾತಿ ಹೊಂದುವ ಹುದ್ದೆಗೆ ಅರ್ಜಿ ಸಲ್ಲಿಸಿದ ದಿನಾಂಕದಂದು ತಕ್ಕ ವಯೋಮಿತಿ ಹೊಂದಿರುತ್ತಾರೆಯೇ? ಮೂಲ ದಾಖಲಾತಿ ಲಗತ್ತಿಸಿದೆಯೇ? ಹಾಗೂ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ದಾಖಲಾತಿಗಳನ್ನು ಲಗತ್ತಿಸಲಾಗಿದೆಯೇ?	
12.	ಅನುಕಂಪದ ಆಧಾರದ ನೇಮಕಾತಿಗೆ ಸರ್ಕಾರದಿಂದ ನಿಗದಿಪಡಿಸಲಾದ ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ?	
13.	ಅನುಕಂಪದ ನೇಮಕಾತಿಗೆ ಪ್ರಸ್ತಾಪಿಸಿದ ಹುದ್ದೆ.	
14.	ಶಾಲೆ ಕಾಲೇಜಿನ ಹೆಸರು ಮತ್ತು ವಿಳಾಸ	
15.	ಶಾಲೆ/ಕಾಲೇಜು ನಡೆಸುತ್ತಿರುವ ಸಂಸ್ಥೆಯ ಹೆಸರು/ವಿಳಾಸ	
16.	ಸದರಿ ಹುದ್ದೆಯನ್ನು ಅನುದಾನಕ್ಕೆ ಒಳಪಡಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ (ಪ್ರತಿ ಲಗತ್ತಿಸಿದೆ)	
17.	ಸದರಿ ಹುದ್ದೆಯಲ್ಲಿದ್ದ ಹಿಂದಿನ ಸಿಬ್ಬಂದಿಗೆ ಅನುದಾನ ನೀಡಲಾಗುತ್ತಿತ್ತೆ.	
18.	ಹುದ್ದೆ ಹೇಗೆ ಖಾಲಿ ಆಯಿತು	
19.	ಎಂದಿನಿಂದ ಖಾಲಿ ಇದೆ	
20.	ಇಲಾಖಾ ಮುಖ್ಯಸ್ಥರ ಸ್ಪಷ್ಟ ಶಿಫಾರಸ್ಸು	
21.	ಶಾಖೆಯ ಅಭಿಪ್ರಾಯ	

ಬಿ. ಎಸ್. ನಾಗರಾಜ್

ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ).

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : ಆರ್.ಐ.ಡಿ.ಎಫ್-13 ಯೋಜನೆಯಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ : ಇಡಿ 248 ಯೋಸಕಾ : 2008 ಬೆಂಗಳೂರು, ದಿನಾಂಕ 30-12-2008 (ಸ್ವೀಮರ/200/(ಯುನಿಕ್)2008 ದಿನಾಂಕ 30-12-2008.

2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಕಾಶಿಇ 28 ಯೋಜನೆ 2008-09 ದಿನಾಂಕ 28-10-2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಸರ್ಕಾರದ ಆದೇಶದಲ್ಲಿ ಆರ್.ಐ.ಡಿ.ಎಫ್. 13 ಯೋಜನೆಯಡಿ 2008-09 ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡಲು ಅನುದಾನ ಹಂಚಿಕೆ ಮಾಡಿ ಸದರಿ ಕಾಮಗಾರಿಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ಬೆಂಗಳೂರು ಇವರಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ

ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಕೆಳಕಾಣಿಸಿದ 05 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008-09 ಒದಗಿಸಿರುವ ಅನುದಾನ
01	ಕರ್ಜಗಿ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	200.00	40.00
02	ಕಮಲಾಪುರ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	50.00	10.00
03	ಕಾಳಗಿ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	100.00	20.00
04	ಕೆ.ಕೆ. ಕೊಪ್ಪ, ಬೆಳಗಾವಿ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	100.00	20.00
05	ಕಿತ್ತೂರು, ಬೆಳಗಾವಿ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	200.00	40.00

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 268 ಯೋಯೋಕ 2009, ಬೆಂಗಳೂರು, ದಿನಾಂಕ: 30ನೇ ನವೆಂಬರ್ 2009.

ಆರ್.ಐ.ಡಿ.ಎಫ್. 13 ಯೋಜನೆಯಡಿ ಈ ಕೆಳಕಾಣಿಸಿದ 05 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿಗಳಿಗೆ ಅವುಗಳ ಮುಂದೆ ತೋರಿಸಿರುವ ಅಂದಾಜು ಮೊತ್ತಕ್ಕೆ ಕೆಲವು ಷರತ್ತುಗಳನ್ನು ವಿಧಿಸಿ, ಆಡಳಿತಾತ್ಮಕ ಅನುಮೋದನೆ ನೀಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008-09 ಒದಗಿಸಿರುವ ಅನುದಾನ
01	ಕರ್ಜಗಿ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	200.00	40.00
02	ಕಮಲಾಪುರ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	50.00	10.00
03	ಕಾಳಗಿ, ಗುಲ್ಬರ್ಗಾ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	100.00	20.00
04	ಕೆ.ಕೆ. ಕೊಪ್ಪ, ಬೆಳಗಾವಿ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	100.00	20.00
05	ಕಿತ್ತೂರು, ಬೆಳಗಾವಿ ಜಿಲ್ಲೆ, ಸ.ಪ್ರ.ದ.ಕಾ. ಕಟ್ಟಡ ನಿರ್ಮಾಣ	200.00	40.00

ಷರತ್ತುಗಳು :

- ಸದರಿ ಕಾಮಗಾರಿಯನ್ನು ಈಗಾಗಲೇ ನಿಗದಿಯಾಗಿರುವ ಆಯವ್ಯಯದ ಮಿತಿಯಲ್ಲಿಯೇ ಪೂರ್ಣಗೊಳಿಸಲು ಸೂಚಿಸಿದೆ. ನಬಾರ್ಡ್ ಕಾಮಗಾರಿಗಳಿಗೆ ನಕ್ಷೆ ಬದಲಾಯಿಸಬೇಕಾದಲ್ಲಿ ನಬಾರ್ಡ್ ನಿಗದಿಪಡಿಸಿದ ಅಂದಾಜಿನಲ್ಲಿಯೇ ಸಲ್ಲಿಸಿ ನಬಾರ್ಡ್ ಅನುಮತಿ ಪಡೆಯತಕ್ಕದ್ದು.
- ಸದರಿ ಕಾಮಗಾರಿಗೆ 2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಬಳಸಿಕೊಂಡು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸುವಂತೆ ಸೂಚಿಸುವುದು.
- ಕಟ್ಟಡ ನಿರ್ಮಾಣದ ಗುಣಮಟ್ಟದ ಬಗ್ಗೆ ನಿಗಾ ವಹಿಸಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.
- ಕೇಂದ್ರ ಕಛೇರಿಯಿಂದ ತಿಂಗಳಿಗೊಮ್ಮೆ ಕಟ್ಟಡ ನಿರ್ಮಾಣದ ಕಾಮಗಾರಿ ಅಭಿವೃದ್ಧಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.
- ಕಟ್ಟಡ ನಿರ್ಮಾಣ ಕಾಮಗಾರಿಯನ್ನು ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಕಟ್ಟಡವನ್ನು ಪೂರ್ಣಗೊಳಿಸಿ ಕಾಲೇಜಿಗೆ ಹಸ್ತಾಂತರಿಸಿದ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಅವರಿಗೆ ಸೂಚನೆ ನೀಡುವುದು.
ದಿನಾಂಕ:04-05-2008 ರಂದು ಬಂಟ್ವಾಳ ತಾಲೂಕು ಸರಿಂಗಾನ ಗ್ರಾಮದ ಕಲ್ಲಾರೆಕೋಡಿ ಎಂಬಲ್ಲಿ ಕಲ್ಲಾರೆ-ನೆತ್ತಿಲಪದವು ಸಾರ್ವಜನಿಕ ಡಾಮಾರು ರಸ್ತೆಯಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಮಯದಲ್ಲಿ ರಾತ್ರಿ 10-30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಸಂಖ್ಯೆ:ಕೆಎ-19-ಎ-5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಒಳಗೆ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಟ್ಯೂಬ್‌ಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯಿಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ನಾಲ್ಕು ಬಾಟ್ಲಿಗಳ ಸ್ಯಾಂಪಲ್ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಓ. ಅರಗು ಸೀಲ್ ಹಾಕಿ ಪಂಚರ ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ಸಿಬ್ಬಂದಿಯವರ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು ಇದರ ನೋಂದಣಿ ಸಂಖ್ಯೆ: ಕೆಎ-19-ಎ-5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ತಕ್ಷೀರು ನಡೆದ ದಿನಾಂಕ ಮತ್ತು ಸಮಯವನ್ನು ನಮೂದಿಸಿರುತ್ತಾರೆ. ಯಾವುದೇ ದಾಖಲಾತಿಗಳಿಲ್ಲದೆ ಒಟ್ಟು 140 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಆಟೋರಿಕ್ಷಾದಲ್ಲಿ ಸಾಗಾಟ ಮಾಡಿರುವುದು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಓಡಿ ಹೋದ ಇಬ್ಬರು ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 53/2008 ದಿ:4-5-2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:5-5-2008 ರಂದು ವರದಿಯನ್ನು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ/26/ಸಿಆರ್‌ಎಂ/2008-09 ದಿ:13-05-2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:02-06-2008 ರಂದು ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: 1/2008-09 ದಿ:16-8-2009 ರ ವರದಿಯಲ್ಲಿ, ತಕ್ಷೀರಿಗೆ ಸಂಬಂಧಿಸಿದ ಕಳ್ಳಭಟ್ಟಿ ಸಾರಾಯಿಯ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪಣಂಬೂರು ಉಪ ವಿಭಾಗ, ದ.ಕ.ಜಿಲ್ಲೆ,ಮಂಗಳೂರು ಇವರು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಿ, ಅವರಿಂದ ಪತ್ರ ಸಂಖ್ಯೆ: ಇ-228-7 ದಿ:12-6-2008 ರ ವರದಿಯಲ್ಲಿ ಕಳ್ಳಭಟ್ಟಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.22 ಇರುವುದಾಗಿ ಹಾಗೂ ಕಳ್ಳಭಟ್ಟಿ ಸಾರಾಯಿಯು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢೀಕರಣ ಪತ್ರ ಪಡೆದಿರುತ್ತಾರೆ.

ಸದರಿ ವರದಿಯಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಕಳ್ಳಭಟ್ಟಿ ಸಾರಾಯಿಯನ್ನು ನಾಶಪಡಿಸಲು ಮತ್ತು ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: 157/2007-08 ದಿ:16-8-2008 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಸಿ) ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರ ಮತ್ತು ಅಬಕಾರಿ ಉಪ ಅಧೀಕ್ಷಕರ ತನಿಖಾ ವರದಿಯನ್ನು ಆಧರಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/425/ಡಿಟಿಸಿಆರ್/2007-08 ದಿ:18-9-2008 ರ

ಆದೇಶದಲ್ಲಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ವಾಹನದ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರದ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್ಎಂ/2004 ದಿ:12–9–2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ವರದಿ ಸಂಖ್ಯೆ ದಿ:9–2–2009 ರ ವರದಿಯಲ್ಲಿ ಅಬಕಾರಿ ಉಪ ಅಧೀಕ್ಷಕರು, ವಲಯ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಯವರ ಮತ್ತು ಸಾರ್ವಜನಿಕರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಶ್ರೀ.ಎಂ.ಎ.ಅಬೂಬಕ್ಕರ್, ಬಿನ್:ಎಂ.ಎ.ಮಹಮ್ಮದ್,ಮುಂಡಾಡಿ ಹೌಸ್, ಮನೆ ನಂ: 5–229(9), ಮದನಿ ನಗರ, ಮುನ್ನೂರು ಗ್ರಾಮ, ಮಂಗಳೂರು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:1–8–2008 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾದ ನೋಂದಣಿ ಮಾಲೀಕನಾಗಿದ್ದು, ತನ್ನ ವಾಹನವು ಕಳ್ಳಭಟ್ಟಿ ಸಾರಾಯಿ ಸಾಗಾಟದಲ್ಲಿ ಭಾಗಿಯಾಗಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಶೀಲಿಸುವ ಸಲುವಾಗಿ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಈ ಪ್ರಾಧಿಕಾರದಿಂದ ದಿ:16–3–2009 ರಂದು ಅರ್ಜಿಯ ಕುರಿತು ಕ್ರಮ ಜರುಗಿಸುವ ಬಗ್ಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ವಾಹನದ ಮೌಲ್ಯಮಾಪನ ವರದಿಯನ್ನು ಪಡೆದು ಒಪ್ಪಿಸುವಂತೆ ಸೂಚಿಸಲಾಗಿದ್ದು, ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ದಿ:4–4–2009 ರ ಪತ್ರದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ನೀಡಿರುತ್ತಾರೆ. ಸದರಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ಮೂಲ ನೋಂದಣಿ ಸಂಖ್ಯೆ: ಕೆಎ–19–ಎ–5875 ಆಗಿದ್ದು, ಇದರ ಆರ್.ಸಿ. ಮಾಲೀಕ ಶ್ರೀ.ಎಂ.ಎ.ಅಬೂಬಕ್ಕರ್, ಬಿನ್:ಎಂ.ಎ.ಮಹಮ್ಮದ್,ಮುಂಡಾಡಿ ಹೌಸ್, ಮನೆ ನಂ: 5–229(9) ಮದನಿ ನಗರ, ಮುನ್ನೂರು ಗ್ರಾಮ, ಮಂಗಳೂರು ಎಂದು ದೃಢೀಕರಿಸಿ ನೀಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ನೀಡಿರುವ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ಮಾಲೀಕರಿಗೆ ಮತ್ತು ಇದರ ಹೆಚ್.ಪಿ.ಎ.ದಾರರಾದ ಮ್ಯಾನೇಜರ್, ಮೆ:ಸುರಕ್ಷಾ ಅಸೋಸಿಯೇಟ್ಸ್, ಉಳ್ಳಾಲ, ಮಂಗಳೂರು ಇವರುಗಳಿಗೆ ಈ ಪ್ರಾಧಿಕಾರದಿಂದ ದಿ:29–4–2009 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಹೆಚ್.ಪಿ.ಎ.ದಾರರಿಗೆ ನೀಡಿರುವ ನೋಟೀಸು ಸ್ವೀಕೃತಿಯಾಗದೆ ಹಿಂದೆ ಬಂದಿದ್ದು, ವಾಹನ ಮಾಲೀಕರಿಗೆ ನೀಡಿದ ನೋಟೀಸು ಸ್ವೀಕೃತಿಯಾಗಿ ಸ್ವೀಕೃತಿ ಅಂಚೆ ರಶೀದಿ ಬಂದಿರುತ್ತದೆ.

ಈ ಪ್ರಾಧಿಕಾರದಿಂದ ನೀಡಿದ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ಶ್ರೀ.ಎಂ.ಎ.ಅಬೂಬಕ್ಕರ್ ಇವರು ದಿ:23–5–2009 ರಂದು ಈ ಪ್ರಾಧಿಕಾರಕ್ಕೆ ಉತ್ತರವನ್ನು ಸಲ್ಲಿಸುತ್ತಾ, ಸದರಿ ಅರ್ಜಿಯಲ್ಲಿ ತಾನು ಕಡುಬಡವನಾಗಿದ್ದು, ತನ್ನ ವಾಹನವನ್ನು ರಿಕ್ಷಾ ಡ್ರೈವರ್‌ನಾದ ಕಿರಣ್‌ಗೆ ಚಾಲನೆ ಮಾಡಲು ನೀಡಿದ್ದು, ಆತನು ತಕ್ಷೀರಿಗೆ ಸಂಬಂಧಿಸಿದ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡಿದ ಅಪರಾಧದ ಬಗ್ಗೆ ತಾನು ವಿಚಾರಿಸಿದಾಗ ಸುಳ್ಳು ಆಪಾದನೆ ಎಂದು ತಿಳಿದು ಬಂದಿದ್ದು, ಸದರಿ ಆಪಾದನೆಯಲ್ಲಿ ತಾನು ಭಾಗಿಯಾಗಿರುವುದಿಲ್ಲ. ಈ ಕಳ್ಳಭಟ್ಟಿ ಸಾರಾಯಿಗೂ ತನಗೂ ಯಾವುದೇ ಸಂಬಂಧವಿರುವುದಿಲ್ಲ. ತಾನು ಕಡುಬಡವನಾಗಿದ್ದು, ತನಗೆ ವಕೀಲರನ್ನು ಇಟ್ಟು ವಾದ ಮಾಡುವಷ್ಟು ಆರ್ಥಿಕ ಸೌಲಭ್ಯವಿರುವುದಿಲ್ಲ ಮತ್ತು ಈ ಪ್ರಾಧಿಕಾರಕ್ಕೆ ವಾಹನದ ಮೌಲ್ಯಕ್ಕೆ ಅನುಗುಣವಾಗಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡಿಸಿಕೊಳ್ಳಲು ಸಾಮರ್ಥ್ಯವಿರುವುದಿಲ್ಲವೆಂದು ತನ್ನ ವಾಹನವನ್ನು ತನಗೆ ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ತದನಂತರ ವಾಹನದ ಮಾಲೀಕರಾದ ಶ್ರೀ.ಎಂ.ಎ.ಅಬೂಬಕ್ಕರ್ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:21–8–2009 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ತನಗೆ ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಪ್ರಭಾರ ಸಹಾಯಕ ಅಭಿಯೋಗ ನಿರ್ದೇಶಕರು, ಮಂಗಳೂರು ಇವರು ಪರಿಶೀಲಿಸಿ, ಈ ಬಗ್ಗೆ ಈ ಪ್ರಾಧಿಕಾರಕ್ಕೆ ದಿ:26–9–2009 ರಂದು ವರದಿಯನ್ನು ಸಲ್ಲಿಸಿ, ಸದರಿ ವರದಿಯಲ್ಲಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಸ್ವಾಧೀನಪಡಿಸಿದ ಸೊತ್ತುಗಳಾಗಿದ್ದು, ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವಂತೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ನೋಂದಣಿ ಮಾಲೀಕರಾದ ಶ್ರೀ.ಎಂ.ಎ.ಅಬೂಬಕ್ಕರ್ ಮತ್ತು ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು,

ವಾಹನದ ಮಾಲೀಕರಾಗಲಿ ಅವರ ಪರ ವಕೀಲರಾಗಲಿ ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:04-05-2008 ರಂದು ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧಕ್ಕೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ?.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಸೈಪುಲ್ಲ, ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಹಾಲಿ ಉಳ್ಳಾಲ ಪೊಲೀಸ್ ಠಾಣೆ ಇವರು ದಿ:16-09-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:4-4-2008 ರಿಂದ ದಿ:18-9-2008 ರವರೆಗೆ ಕೋಣಾಜೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂದಿಯವರು ಮತ್ತು ಪಂಚರೊಂದಿಗೆ ಕೂಡಿಕೊಂಡು ಸಂಜೆ 10-30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಕಡೆಗೆ ಕೆಎ-19-ಎ-5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಸೀಟುಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ, ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ಸ್ಯಾಂಪಲ್ ಬಗ್ಗೆ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಒ. ಅರಗು ಸೀಲ್ ಹಾಕಿ ಪಂಚರ ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ಸಿಬ್ಬಂದಿಯವರ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ, ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾದೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಎ-5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನ ಪ್ರತಿಯನ್ನು ನಿಶಾನೆ ಪಿ-1 ಎಂದು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಬಂದು ಓಡಿ ಹೋದ ಆರೋಪಿಗಳ ವಿರುದ್ದ ಪ್ರಕರಣ ಸಂಖ್ಯೆ: 53/2008 ರಂತೆ ಪ್ರಕರಣವನ್ನು ದಾಖಲಿಸಿರುತ್ತೇನೆ. ಅದನ್ನು ನಿಶಾನೆ ಪಿ-2 ಎಂದು ಗುರುತಿಸಿರುತ್ತೇನೆ. ನಂತರ ತನಿಖೆಯನ್ನು ಮುಂದುವರಿಸಿ ತಕ್ಷೀರಿಗೆ ಸಂಬಂಧಿಸಿದ ಆಟೋರಿಕ್ಷಾದ ಬಿ ಎಕ್ಸ್‌ಟ್ರ್ಯಾಕ್ಟ್ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಾಕ್ಷಿಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅಮಾನತ್ತುಪಡಿಸಿದ ಮಾದರಿ ಬಾಟಲ್‌ಗಳನ್ನು ಮೇಲಾಧಿಕಾರಿಗಳ ಮುಖಾಂತರ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಟ್ಟಿರುತ್ತೇನೆ. ತಾನು ದಿ:12-6-2008

ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿದ ಆಟೋರಿಕ್ಷಾ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ಇವರಿಗೆ ಹಸ್ತಾಂತರಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ದಿನಾಂಕ:5–6–2008 ರಂದು ಪ್ರಕರಣಕ್ಕೆ ಸಂಬಂಧಿಸಿದ ಆರೋಪಿ ಕಿರಣ್ ಕುಮಾರ್ ಎಂಬವನನ್ನು ಮಾನ್ಯ ಬಂಟ್ವಾಳ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಪಡೆದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿರುತ್ತಾನೆ. ಆಟೋರಿಕ್ಷಾದಲ್ಲಿದ್ದ ಇನ್ನೊಬ ವ್ಯಕ್ತಿಯ ಬಗ್ಗೆ ವಿಷಯ ತಿಳಿದುಕೊಳ್ಳಲಾಗಿ, ಆತನು ಎಲಿಯಾರುಪದವಿನ ಬೆಂಜಿಲ್ ಎಂಬುವುದಾಗಿ ತಿಳಿದು ಬಂದಿರುತ್ತದೆ. ತಾನು ದಿ: 15–6–2008 ರಂದು ರಿಕ್ಷಾದ ಆರ್.ಸಿ. ಮಾಲೀಕರಿಗೆ ಕಲಂ 133 ರ ಪ್ರಕಾರ ನೋಟೀಸು ಜಾರಿ ಮಾಡಿದ್ದು, ಅವರು ಠಾಣೆಯಲ್ಲಿ ಹಾಜರಾಗಿ ಆರ್.ಸಿ. ಮಾಲೀಕರಾದ ಅಬೂಬಕ್ಕರ್ ಇವರು ಸುಮಾರು 4 ತಿಂಗಳಿನಿಂದ ಕಿರಣ್ ಎಂಬವರಿಗೆ ಬಾಡಿಗೆ ರೂಪದಲ್ಲಿ ಕೊಡಿಸಿದ್ದು, ಈ ಪ್ರಕರಣದಲ್ಲಿ ಕಳ್ಳಭಟ್ಟಿ ಸರಾಯಿ ಸಾಗಾಟ ಮಾಡಿದ ಪ್ರಯುಕ್ತ ಆಟೋರಿಕ್ಷಾ ಜಪ್ತಾಗಿರುವ ವಿಷಯ ತನಗೆ ತಿಳಿದಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಆರ್.ಸಿ. ಮಾಲೀಕರ ಹಾಗೂ ಇದರ ಸಾಕ್ಷಿಗಳ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ:19–7–2008 ರಂದು ಇನ್ನೊಬ್ಬ ಆರೋಪಿ ಬೆಂಜಿಲ್ ಎಂಬಾತನನ್ನು ದಸ್ತಗಿರಿ ಮಾಡಿರುತ್ತೇನೆ. ನಂತರ ಪ್ರಕರಣದ ಅಂತಿಮ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಸಿ.ಸಿ.ನಂ:53/2009 ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಾನು ಠಾಣೆಯಿಂದ ಇಬ್ಬರು ಸಿಬ್ಬಂದಿ ಹಾಗೂ ಇಬ್ಬರು ಪಂಚರನ್ನು ಒಟ್ಟಿಗೆ ಕರೆದುಕೊಂಡು ಹೋಗಿರುತ್ತೇನೆ. ತನಗೆ ಖಚಿತ ವರ್ತಮಾನ ಸಿಕ್ಕಿರುತ್ತದೆ. ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣಕ್ಕೆ ಸಂಬಂಧಿಸಿ ತನಿಖಾಧಿಕಾರಿಯಾದ ಶ್ರೀ.ಸಿ.ಹೆಚ್.ಸೋಮಶೇಕರ್, ಅಬಕಾರಿ ನಿರೀಕ್ಷಕರು(ಪ್ರಭಾರ), ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:15–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು 2008 ನೇ ಜೂನ್ ತಿಂಗಳಿನಲ್ಲಿ ಬಂಟ್ವಾಳ ವಲಯ ಕಚೇರಿಯಲ್ಲಿ ಪ್ರಭಾರನಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತಾನು ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ಕೋಣಾಜೆ ಪೊಲೀಸ್ ಠಾಣೆ ಸಿಬ್ಬಂದಿಯವರ ಸುಪರ್ಧಿಯಲ್ಲಿ ದಿ:2–6–2008 ರಂದು ಪಡೆದಿರುತ್ತೇನೆ. ಸದರಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ದಿ:16–8–2008 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಪ್ರಕರಣದಲ್ಲಿ ಹಸ್ತಾಂತರ ಪಡೆದುಕೊಂಡ ಸೊತ್ತುಗಳಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ ಮತ್ತು ಈ ಪ್ರಾಧಿಕಾರದ ಮುಂದೆ ನಿಂತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 3

ಪ್ರಾಸಿಕ್ಯೂಶನ್ ಪರ ಪ್ರಕರಣಕ್ಕೆ ಸಂಬಂಧಿಸಿ ಮಹಜರು ಸಾಕ್ಷಿದಾರರಾದ ಶ್ರೀ.ಸತೀಶ್.ಕೆ, ಪಿ.ಸಿ.ನಂ:1072, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಿ:16–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ಉಪ ನಿರೀಕ್ಷಕರು ಮತ್ತು ಇತರೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಕೂಡಿಕೊಂಡು ರಾತ್ರಿ 10–30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಟ್ಯೂಬ್‌ಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯಿಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ, ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ಸ್ಯಾಂಪಲ್ ಬಗ್ಗೆ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಓ. ಅರಗು ಸೀಲ್ ಹಾಕಿ ಪಂಚರ

ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ತನ್ನ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಎ-5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಪೊಲೀಸ್ ಉಪ ನಿರೀಕ್ಷಕರು ತಯಾರಿಸಿರುತ್ತಾರೆ. ಸದರಿ ಮಹಜರಿಗೆ ತಾನು ಸಹಿಯನ್ನು ಮಾಡಿರುತ್ತೇನೆ. ತನ್ನ ಸಹಿಯನ್ನು ನಿಶಾನೆ ಪಿ-1ಬಿ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತನ್ನನ್ನು ಹಾಗೂ ಪಂಚರನ್ನು ಘಟನಾ ಸ್ಥಳಕ್ಕೆ ತನ್ನ ಪೊಲೀಸ್ ಉಪ ನಿರೀಕ್ಷಕರು ಕರೆದುಕೊಂಡು ಹೋಗಿರುತ್ತಾರೆ. ತಾನು ಮೇಲಾಧಿಕಾರಿಗಳ ಒತ್ತಡಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಮತ್ತು ಮಹಜರನ್ನು ಠಾಣೆಯಲ್ಲಿಯೇ ಬರೆದು ಅದಕ್ಕೆ ತಾನು ಸಹಿ ಮಾಡಿರುತ್ತೇನೆ ಮತ್ತು ಘಟನೆ ನಡೆದೇ ಇಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಈ ಪ್ರಾಧಿಕಾರದಿಂದ ಮೂರು ಬಾರಿ ಅವಕಾಶವನ್ನು ನೀಡಲಾಗಿದ್ದು, ಆರ್.ಸಿ. ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಪ್ರಕರಣವು ದಾಖಲಾಗಿ ಈಗಾಗಲೇ ಒಂಭತ್ತು ತಿಂಗಳು ಕಳೆದಿದ್ದು, ಎಲ್ಲಾ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:04-05-2008 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ರಲ್ಲಿ ಆರೋಪಿಗಳು ಅಕ್ರಮವಾಗಿ 140 ಲೀಟರ್ ಊರ ಕಳ್ಳಭಟ್ಟಿ ಸಾರಾಯಿಯನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ, ಅವರು ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣದಿಂದ, ವಾಹನ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಕೇರಳ ರಾಜ್ಯಕ್ಕೆ ಸಾಗಿಸಲು ಬಳಸಿರುವುದು ಸಾಕ್ಷಿ ಹೇಳಿಕೆಗಳಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 140 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಕಳ್ಳಭಟ್ಟಿ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ಆಟೋರಿಕ್ಷಾ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38(ಎ) ರ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ವಶಪಡಿಸಿಕೊಂಡು ಸುಮಾರು ಒಂಭತ್ತು ತಿಂಗಳು ಕಳೆದಿದ್ದು, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಈ ಪ್ರಾಧಿಕಾರದಿಂದ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದು, ಆದರೆ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ವಾಹನದ ಮಾಲೀಕರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದ ಸದರಿ ಬಜಾಜ್ ಆಟೋರಿಕ್ಷಾದಲ್ಲಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದು ಸಾಕ್ಷಿದಾರರ ಹೇಳಿಕೆ ಹಾಗೂ ದಾಖಲಾತಿಗಳಿಂದ ದೃಢಪಟ್ಟಿದ್ದು, ಆರೋಪಿಗಳು ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾದಲ್ಲಿ 140 ಲೀಟರ್ ಪ್ರಮಾಣದ ಊರ ಕಳ್ಳಭಟ್ಟಿ ಸಾರಾಯಿಯನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಆದುದರಿಂದ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ವಾಹನದ ಮಾಲೀಕರು ಈ ಪ್ರಾಧಿಕಾರದಲ್ಲಿ ಅಂತಹ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸದಿರುವ ಕಾರಣ, ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ವಾಹನದ ಮಾಲೀಕರು ತಕ್ಷೀರು ನಡೆಸಲು ಉತ್ಸುಕರಿಲ್ಲದ ಕಾರಣ ಮತ್ತು ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಈಗಾಗಲೆ ಒಂಭತ್ತು ತಿಂಗಳು ಕಳೆದಿದ್ದು, ಅಕ್ರಮವಾಗಿ 140 ಲೀಟರ್ ಕಳ್ಳಭಟ್ಟಿ ಸಾರಾಯಿ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ,ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/425/ಡಿಟಿಸಿಆರ್/2008-09, ದಿನಾಂಕ:20ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರ ತಕ್ಷೀರು ಸಂ: 53/2008 ದಿ:4-5-2008 ರಲ್ಲಿ ಜಪ್ತುಪಡಿಸಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20-01-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಸೈಪುಲ್ಲ, ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ,
ಕೋಣಾಜೆ ಹಾಲಿ ಉಳ್ಳಾಲ ಪೊಲೀಸ್ ಠಾಣೆ.

ಪ್ರಾ.ಸಾ-2: ಶ್ರೀ.ಸಿ.ಹೆಚ್.ಸೋಮಶೇಕರ್, ಅಬಕಾರಿ ನಿರೀಕ್ಷಕರು(ಪ್ರಭಾರ), ಬಂಟ್ವಾಳ ವಲಯ.

ಪ್ರಾ.ಸಾ-3: ಶ್ರೀ.ಸತೀಶ್.ಕೆ, ಪಿ.ಸಿ.ನಂ:1072, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ.

ಅನುಬಂಧ-2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1: ಮಹಜರಿನ ಪ್ರತಿ.

ನಿಶಾನೆ ಪಿ-1A: ಪ್ರಾ.ಸಾ-1ರವರ ಸಹಿ.

ನಿಶಾನೆ ಪಿ-1B: ಪ್ರಾ.ಸಾ-3ರವರ ಸಹಿ

ನಿಶಾನೆ ಪಿ-2 : ಸೊತ್ತುಗಳ ಪಟ್ಟಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : -ಇಲ್ಲ-

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.208

COMMERCE AND INDUSTRIES DEPARTMENT

NOTIFICATION

No.CI 248 SGF 2005, Bangalore, Dated:20th January, 2010

Whereas it is necessary to make an order with a view to enabling M/s Indian Cane Power Ltd., Uttur Village Mudhol Taluk, Bagalkot District, to purchase the quantity of Sugar Cane required having regard to the crushing capacity of the factory, the availability of Sugarcane in the area where sugarcane is grown and the need for production of Sugar.

Now, therefore, in exercise of the powers conferred by clause 6, 7, 8 and 9 of the Sugarcane (Control) Order 1966 read with CSR 1127, Dated:16th July 1966 of the Government of India in the Ministry of Food, Agriculture, Community Development and Co-Operation (Department of Food) the Government of Karnataka hereby makes the following orders namely:

1. TITLE, COMMENCEMENT AND DURATION OF OPERATION:

i) This Order may be called the Karnataka Sugarcane (Regulation of Distribution) M/s Indian Cane Power Ltd., at Uttur Village, Mudhol Taluk, Bagalkot District, order 2010.

ii) It shall come into force at once and shall remain in force till withdrawn or repealed subject to amendments as the State Government may make from time to time.

2) Definitions: In this Order:-

a) Factory means the premises of the factory at Uttur Village, owned by M/s Indian Cane Power Ltd., Uttur Village Mudhol Taluk, Bagalkot District including the premises of such factory.

b) 'Form' means a form appended to this order.

c) Words and expressions used in this order but not defined shall have the meaning assigned to them in clause 2 of the Sugarcane (Control) order 1966.

3) Determination of the quantity of Sugarcane required by the factory and reservation of the area for supply of sugarcane.

i) The crushing capacity of M/s Indian Cane Power Ltd., being 2500 TCD. The quantity of Sugarcane required by the factory during a year is about 4.50 Lakh M.Ts to 5.00 Lakh M.Ts.

ii) The factory shall secure the sugarcane determined under sub clause (2) from the areas specified in schedule-I to this order which shall be the area reserved temporarily in the interest of farmers for supplying sugarcane to the factory concerned, till the new factories, likely to comp up in that area are established.

4) FIXIATION OF QUANTITY OF SUGARCANE TO BE SUPPLIED BY THE GROWER:

Every grower of sugarcane in the area reserved temporarily as specified in Schedule-I shall supply to the factory ninety five percent of the sugarcane grown by each such grower Co-operative Society operating in the reserved area, through such society.

5) AGREEMENT TO SUPPLY OR PURCHASE THE DETERMINED QUANTITY OF SUGARCANE:

Every grower of sugarcane or a sugarcane grower Co-operative Society, supplying sugarcane to the factory and the factory shall enter into agreement to supply or purchase as the case may be, the quantity of sugarcane determined under clause-4.

6) PROHIBITION OF EXPORT OF SUGARCANE FROM AREA RESERVED TEMPORARILY.

No. Sugarcane shall be exported from the area reserved temporarily except under and in accordance with the conditions of a permit issued by the Deputy Commissioner in Form-I of Schedule-II.

7) ISSUE OF PERMITS:

i) Application for the grant of a permit under clause-6 shall be made in form 2 of Schedule-II and shall be accompanied by a fee of Rs.5/- and an amount of Rs.100/- as security Deposit.

ii) If any condition of the permit is contravened, the Deputy Commissioner may after giving an opportunity to the person Concerned to show cause why the amount deposited by way of security or any

part there of may not be forfeited, pass order forfeiting the whole or part of the amount deposited as security.

By Order and in the Name of the Governor of Karnataka,

P. ANANDA KUMAR

Desk Officer (Sugar),

Commerce and Industries Department.

SCHEDULE-I

Following 13 villages of Mudhol Taluk of Bagalkot District are allocated temporarily to M/s Indian Cane Power Ltd., Uttur Village, Mudhol Taluk, Bagalkot District, for supply of Sugarcane. These 13 villages were already allotted to the following 4 sugar factories and the same were withdrawn from them.

Sl. No.	Name of the withdrawing factory	Name of the Villages	No.of Villages
1.	Sri Prabhulingeshwara Sugars, Siddapura, Jamkhandi Taluk, Bagalkote District	Uttur Jaliberi	2 Villages
2.	Raithara S.S.K., Rannanagar, Bagalkote District.	Roogi Ningapura Gulagala jambagi Jeerigala Chinchakhandi B.K. Chinchakhandi K.D. Chuncharakoppa	7 Villages
3.	Nirani Sugars Ltd., Mudhol Taluk, Bagalkote District	Mudhol	1 Village
4.	Godavari Biorefinaries Sameerwadi, Bagalkote District.	Metagudda Chennala Ranjanagi	3 Villages
	Total		**13 Villages**

CI 248 SGF 2005

P. ANANDA KUMAR

Desk Officer (Sugar),

Commerce and Industries Department.

SCHEDULE-II-FORM-I

(SEE CLAUSE 6)

The Karnataka Sugarcane (regulation of Distribution), M/s Indian Cane Power Ltd., Uttur Village, Mudhol Taluk, Bagalkote District, Order 2010.

Permit No. **Date:**

1. Full name of the permit holder :
2. Father's Name :
3. Residential Address in full :
4. Quantity of Sugarcane for which permit is granted for export :
5. Area and village from which Sugarcane is permitted to be exported. :
6. A. Place to which it is to be exported :

   B. The purpose for which export is permitted.

   i. For Sale

ii. For crushing sugar cane juice for Manufacture of Gur/Sakkare Gul/ Jaggery Rabi or Khandasari.

7. Their permit is valid up to :

8. The permit is granted subject to the following terms and conditions. :

a) Permit is not transferable. :

b) The permit shall be produced on demand by an officer authorized by the Deputy Commissioner.

c) On expiry of the validity of the permission within 48 hours of the expiry of the validity date the permit shall be surrendered to the permit issuing authority.

Place: SIGNATURE OF THE PERMIT ISSUING AUTHORITY.

Date:

SCHEDULE-II-FORM-II

(SEE CLAUSE 7)

The Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagalkote District, Order 2010. Application for the grant of permit for exporting sugarcane from a reserved area.

1. Full Name of the Applicant :
2. Father's Name :
3. Residential Address in full :
4. Quantity of Sugarcane for which permit is requested for export :
5. Area and the Village from which Sugarcane is intended to be exported :
6. The purpose for which the export is intended :

i) For Sale

ii) For Crushing Sugarcane Juice or manufacture of Gur/Sakkare Gul/ Jaggery/ Rabi/ or Khandasari for sale or self consumption

I declare that, I am fully aware of the provisions of the Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagaikot District, Order 2010 and the particulars furnished in the application are true to the best of my knowledge and belief and the permit to be issued will be properly used for the purpose for which it is issued. I have actually read-got read and understood the conditions of the permit given in Form No.I of the Schedule appended to the Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagalkote District Order 2010 and I agree to abide by them.

Place: SIGNATURE OF THE APPLICANT.

Date:

P. ANANDA KUMAR

Desk Officer (Sugar),

Commerce and Industries Department.

PR-173

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/121/ಡಿಟಿಸಿಆರ್/2008-09, ದಿನಾಂಕ:27ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿಗಳು:**
ಪೊಲೀಸ್ ಉಪ ನಿರೀಕ್ಷಕರು (ಕಾ.ಸು)	ಸಂತೋಷ್, ಎನ್.ಆರ್. ಪುರ ತಾಲ್ಲೂಕು
ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ	**ವಾಹನ ಮಾಲೀಕರು**
	- ಮಾಹಿತಿ ಲಭ್ಯವಿರುವುದಿಲ್ಲ -

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28-7-2008ರಂದು ಸಂಜೆ 4-30 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಸಿಬ್ಬಂದಿಯವರೊಂದಿಗೆ ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮದ ಸಂಕೊಳ್ಳಿಗೆ ಎಂಬಲ್ಲಿ ಮೇಲಾಧಿಕಾರಿಗಳ ಆದೇಶದಂತೆ ಸ್ಫೋಟಕ ವಸ್ತುಗಳ ಸಾಗಾಣಿಕೆ ಕುರಿತು ವಾಹನ ತಪಾಸಣೆಯಲ್ಲಿ ನಿರತರಾಗಿರುವಾಗ ಮಂಗಳೂರು ಕಡೆಯಿಂದ ಕೇರಳ ಕಡೆಗೆ ಅತೀ ವೇಗದಲ್ಲಿ ಬರುತ್ತಿದ್ದ ಒಂದು ಕಪ್ಪು ಬಣ್ಣದ GJ-3-BA-303 ನೊಂದಾಣಿ ಸಂಖ್ಯೆ ಇರುವ ಸ್ಕಾರ್ಪಿಯೋ ಕಾರನ್ನು ಕಂಡು ಸಂಶಯಗೊಂಡು ಅದರ ಚಾಲಕರಿಗೆ ನಿಲ್ಲಿಸಲು ಸೂಚನೆ ನೀಡಿದಾಗ, ಆತನು ವಾಹನವನ್ನು ನಿಲ್ಲಿಸದೇ ತಲಪಾಡಿ ಕಡೆಗೆ ಮುಂದೋಡಿಸಿದಾಗ ಫಿರ್ಯಾದುದಾರರು ಹಾಗೂ ಸಿಬ್ಬಂಧಿಗಳು ಇಲಾಖಾ ವಾಹನದಲ್ಲಿ ಅದನ್ನು ಬೆನ್ನಟ್ಟಲಾಗಿ, ಸದ್ರಿ ಕಾರಿನ ಚಾಲಕನು ತಲಪಾಡಿ ಆರ್.ಟಿ.ಒ ಚೆಕ್ ಪೋಸ್ಟ್ ತನಕ ಓಡಿಸಿ ಸದ್ರಿ ಕಾರನ್ನು ಪೂಮಣ್ಣು ಕಡೆಗೆ ತಿರುಗಿಸಿ ಅಲ್ಲಿಂದ ಕೆ.ಸಿ ನಗರ ಮೂಲಕ ನಾಟಿಕಲ್ಲು ರಸ್ತೆ ಕಡೆಗೆ ಹೋಗಿ ಅಲ್ಲಿಂದ ತಿರುಗಿಸಿ ಬೆಳರಿಂಗೆ ರಸ್ತೆಯಲ್ಲಿ ಸುಮಾರು 5 ಕಿ.ಮಿ ದೂರ ಹೋದವನು, ತಾರು ರಸ್ತೆಯನ್ನು ಬಿಟ್ಟು ಕಜೆಎಂಬ ಸ್ಥಳದ ಮೂಲಕ ಕಲ್ಕಟ್ಟೆ ಎಂಬ ಒಳರಸ್ತೆಯಲ್ಲಿ ಪ್ರವೇಶಿಸಿದಾಗ ಫಿರ್ಯಾದುದಾರರು ಬೆನ್ನಟ್ಟುತ್ತಿರುವುದನ್ನು ಕಂಡು ಸದ್ರಿ ಕಾರಿನ ಚಾಲಕನು ಅತೀ ವೇಗದಿಂದ ವಾಹನವನ್ನು ಚಲಾಯಿಸಿದ ಕಾರಣದಿಂದಾಗಿ ಚಾಲಕನ ಹತೋಟಿ ತಪ್ಪಿ ಕಿನ್ಯಾ ಗ್ರಾಮದ ಕಜೆ ಎಂಬ ಪ್ರದೇಶದಲ್ಲಿ ವಾಹನ ರಸ್ತೆ ಎಡಭಾಗದ ಚರಂಡಿಗೆ ಬಿದ್ದು ಕಾರಿನ ಚಾಲಕ ಮತ್ತು ಅತನೊಡನೆ ಇದ್ದ ಇನ್ನೊರ್ವ ವ್ಯಕ್ತಿ ವಾಹನದಿಂದ ಜಿಗಿದು ಕಾಡು ಪ್ರದೇಶದ ಕಡೆ ಓಡಿ ಪರಾರಿಯಾಗಿರುತ್ತಾರೆ. ಓಡಿ ಹೋದ ವ್ಯಕ್ತಿಯ ಮುಖಚಹರೆಯಿಂದ ಆತನು ಸಂತೋಷ್ ಎನ್.ಅರ್.ಪುರ ಎಂದು ತಿಳಿದು ಬಂದು ನಂತರ ಚರಂಡಿಗೆ ಬಿದ್ದಿದ್ದ ವಾಹನ GJ-3-BA-303 ಕಪ್ಪು ಬಣ್ಣದ ಸ್ಕಾರ್ಪಿಯೊ ಕಾರನ್ನು ಪಂಚ ಸಾಕ್ಷಿದಾರರ ಸಮಕ್ಷಮ ಪರಿಶೀಲಿಸಿದಾಗ ವಾಹನದ ಒಳಗಡೆ 37 ರಟ್ಟಿನ ಬಾಕ್ಸ್‌ಗಳಿದ್ದು,ಪ್ರತಿ ರಟ್ಟಿನ ಬಾಕ್ಸ್‌ಗಳಲ್ಲಿ 180 ಮಿಲಿಯ ತಲಾ 48 ಬಾಟಲಿ ಗಳಂತೆ ಒಟ್ಟು 1776 ಬಾಟಲಿಗಳಲ್ಲಿ ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ ಮದ್ಯ ಇರುವುದು ಪತ್ತೆಯಾಗಿ ನಂತರ ವಾಹನವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಮದ್ಯ ಸಾಗಾಟದ ಬಗ್ಗೆ ಪರವಾನಿಗೆ ಯಾ ದಾಖಲೆ ಪತ್ರಗಳು ವಾಹನದಲ್ಲಿ ಲಭ್ಯವಾಗದೇ ಇರುವುದು ಹಾಗೂ ವಾಹನದ ಚಾಲಕನು ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರುವುದನ್ನು ಗಮನಿಸಿದಾಗ ಸದ್ರಿ ಸ್ಕಾರ್ಪಿಯೊ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಕೇರಳ ರಾಜ್ಯಕ್ಕೆ ಸಾಗಾಟ ಮಾಡಲು ಪ್ರಯತ್ನಿಸಿರುವುದು ಖಾತ್ರಿಯಾಗಿರುವುದರಿಂದ, ಪತ್ತೆಯಾದ ಮದ್ಯ ಹಾಗೂ ವಾಹನವನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಂಡು 37 ರಟ್ಟಿನ ಪೆಟ್ಟಿಗೆಗಳಿಂದ ತಲಾ ಒಂದೊಂದರಂತೆ ಒಟ್ಟು 37 ಬಾಟಲಿಗಳನ್ನು ರಾಸಾಯನಿಕ ಮಾದರಿಗಾಗಿ ತೆಗೆದು, ವಾಹನವನ್ನು ಪರಿಶೀಲಿಸಲಾಗಿ ಅದರ ಇಂಜಿನಿನಲ್ಲಿ B.F34M83563 ಎಂದು ಬೊನೆಟಿನ ಮೇಲೆ ಅಲ್ಯುಮೀನಿಯಂ ಪ್ಲೇಟ್ ಅಳವಡಿಸಿದ್ದು, ಅದರಲ್ಲಿ ಮಾಡೆಲ್ SCORPIO- TURBO-2,GLX 2 W D 85,SL NO.MA-ITA-2BFC42,A-60925 ಎಂದು ನಮೂದಿಸಿರುವುದು ಕಂಡು ಬಂತು. ಮಹಜರು ಕ್ರಮ ಜರುಗಿ- ಮಾದರಿ ಸೀಸೆಗಳಿಗೆ ಮತ್ತು ಸೊತ್ತುಗಳಿಗೆ ಗುರುತು ಚೀಟಿಯನ್ನು ಅಂಟಿಸಿ, ಮಹಜರು ಜರುಗಿಸಿರುತ್ತಾರೆ. ಇದು ಅಬಕಾರಿ ಕಾಯಿದೆ 13ಎ,14 ರ ಪ್ರಕಾರ ಅಪರಾಧವಾಗಿದ್ದು, 32, 34,35 ಮತ್ತು 43ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಅರೋಪಿಯಾದ ಸಂತೋಷ್ ಎನ್.ಆರ್.ಪುರ ಎಂಬವನ ವಿರುದ್ಧ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಉಳ್ಳಾಲ ಠಾಣಾ ಕ್ರೈಂ ಸಂ:170/08 ದಿ:28-7-2008 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು, ಪ್ರಾದಿಕಾರದ ದಿ:30-10-2008ರ ಆದೇಶದಂತೆ ಪ್ರಕರಣದ ಸೊತ್ತು ಮತ್ತು ಕಡತವನ್ನು ಕಾರ್ಯ ವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-II ಇವರಿಗೆ ದಿನಾಂಕ: 18-8-2009ರಂದು ಹಸ್ತಾಂತರಿಸಿರುತ್ತಾರೆ .

ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಇವರು ಪ್ರಕರಣದ ಜಪ್ತು ಸೊತ್ತುಗಳ ಮುಟ್ಟುಗೋಲಿಗೆ ಸಂಬಂಧಿಸಿ ತನಿಖೆಯನ್ನು ಕೈಗೊಂಡು, ತನಿಖಾ ವರದಿ ಸಂಖ್ಯೆ: ಎಂಎಸ್‌ಆರ್-2/ ಮೊ.ಕ್ರೈಂ/16/2009-10 ದಿ: 24-8-2009ರ ವರದಿಯಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಒಳಪಡಿಸಿ, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ-529-37 ದಿ:6-12-2008 ರ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಶೇ.36.0

ಇರುವುದಾಗಿ ಹಾಗೂ ಮಾದರಿಗಳು ಭಾರತೀಯ ಮಾನಕ ಬ್ಯುರೋದ ಮಾನಕಕ್ಕೆ ಅನುಗುಣವಾಗಿರುವುದಿಲ್ಲ ಎಂಬ ಅಭಿಪ್ರಾಯದೊಂದಿಗೆ ದೃಡೀಕರಿಸಿರುವುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ಜಪ್ತುಪಡಿಸಿಕೊಂಡ 37 ರಟ್ಟಿನ ಪೆಟ್ಟಿಗೆಗಳಲ್ಲಿದ್ದ ಒಟ್ಟು 1776 ಬಾಟಲಿಗಳ ಪೈಕಿ ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾದ 37 ಬಾಟಲಿಗಳನ್ನು ಹೊರತುಪಡಿಸಿ ಉಳಿದಂತೆ 313.020 ಲೀಟರು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಪ್ರಾಧಿಕಾರದಿಂದ ದಿ:27–8–2009ರಂದು ಆದೇಶ ನೀಡಲಾಗಿರುತ್ತದೆ. ಜಪ್ತುಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ನೀಡುವ ಬಗ್ಗೆ ತನಿಖಾಧಿಕಾರಿಗಳು ಪ್ರಾ.ಸಾ.ಅ ,ಗುಜರಾತ್ ಇವರಿಗೆ ದಿ:8–9–2009ರಂದು ಬರೆದ ಪತ್ರದ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ ಈವರೆಗೆ ಸ್ವೀಕೃತವಾಗಿರುವುದಿಲ್ಲ ಎಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿ ವಾಹನವನ್ನು ಜಪ್ತುಪಡಿಸಿಕೊಂಡು ಈಗಾಗಲೇ ಒಂದು ವರ್ಷ 6 ತಿಂಗಳುಗಳು ಮೀರಿದ್ದು,ವಾಹನದ ಬಿಡುಗಡೆ ಬಗ್ಗೆ ಯಾರೊಬ್ಬರೂ ಮುಂದೆ ಬಾರದಿರುವುದರಿಂದ ಸದ್ರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೊಂದಾಯಿತ ಮಾಲೀಕರ ವಿವರಗಳಿರುವ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಜಪ್ತು ಸಂದರ್ಭದಲ್ಲಿ ವಾಹನದ ನೊಂದಾಣಿ ಸಂಖ್ಯೆ GJ-3-BA-303 ಎಂದು ಕಂಡು ಬಂದಿರುವ ಸೂಚನಾ ಫಲಕಕ್ಕೆ ಅನುಗುಣವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಗುಜರಾತ್ ರಾಜ್ಯ ಇವರಿಗೆ ತನಿಖಾದಿಕಾರಿಗಳು ದಿ: 8–9–2009 ರಂದು ಪತ್ರ ಬರೆದು, ತದನಂತರದಲ್ಲಿ ನೆನಪೋಲೆಗಳನ್ನು ಬರೆಯಲಾಗಿದ್ದರೂ ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಸ್ವೀಕೃತವಾಗದೇ ಇರುವುದರಿಂದ ವಾಹನದ ಮಾಲೀಕರ ಲಭ್ಯವಿಲ್ಲದೇ ಇರುವುದರಿಂದ ಹಾಗೂ ಪ್ರಕರಣದಲ್ಲಿ ಆರೋಪಿತನಾಗಿರುವ ವ್ಯಕ್ತಿಯ ಪರಿಪೂರ್ಣ ವಿಳಾಸವು ಕೂಡಾ ಲಭ್ಯವಿಲ್ಲದೇ ಇರುವುದರಿಂದ ಪ್ರಕರಣವನ್ನು ಅಬಕಾರಿ ಕಾಯಿದೆ 43ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಪೂರ್ವದಲ್ಲಿ ಕಲಂ 43 ಬಿ ಅಡಿ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 28–7–2008 ರಂದು ಕಪ್ಪು ಬಣ್ಣದ ಸ್ಕಾರ್ಪಿಯೊ ಕಾರು ಸಂ:GJ-3-BA-303 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿತರು 319.680 ಲೀಟರು ಮದ್ಯವನ್ನು ಅಕಮವಾಗಿ ಸಾಗಾಟ ಮಾಡಿರುವುದನ್ನು ಪತ್ತೆಹಚ್ಚಿ, ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಉಳ್ಳಾಲ ಕ್ರೈಂ ಸಂ:170/2008 ದಿ:28–7–2008ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯ ಆಗಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದು ಹಾಗೂ ವಾಹನದ ಮಾಲೀಕರ ಬಗ್ಗೆ ಮಾಹಿತಿಗಳನ್ನು ಪಡೆಯುವ ಏಕೈಕ ಮಾರ್ಗವಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಈ ಪ್ರಾಧಿಕಾರದಿಂದ ದಿ:15–6–2009ರಂದು ನೊಂದಾಣಿ ಅಂಚೆಯ ಮೂಲಕ ಪತ್ರ ಬರೆಯಲಾಗಿದ್ದು ಹಾಗೂ ತನಿಖಾಧಿಕಾರಿಗಳು ಸಹ ಸದ್ರಿ ಸಾರಿಗೆ ಅಧಿಕಾರಿಗಳಿಗೆ ಹಲವು ಬಾರಿ ಪತ್ರ ಮುಖೇನಾ ಸಂಪರ್ಕಿಸಿದ್ದರೂ, ಸದ್ರಿಯವರಿಂದ ಯಾವುದೇ ವರದಿ ಬಾರದೇ ಇರುವುದರಿಂದ ವಾಹನದ ಮಾಲೀಕರ ವಿವರ ಲಭ್ಯವಿಲ್ಲದ ಕಾರಣ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಪ್ರಕರಣ ಸಂದರ್ಭದಲ್ಲಿ ವಾಹನದ ಸುಪರ್ಧಿ ಹೊಂದಿರುವ ಮಾಲೀಕರು ವಾಹನದ ಬಿಡುಗಡೆ ಬಗ್ಗೆ ಯಾವುದೇ ಪ್ರಯತ್ನ ಪಡದೇ ಇರುವುದು ಹಾಗೂ ಪ್ರಕರಣ ಸಂದರ್ಭದಲ್ಲಿ ಅರೋಪಿತ ವ್ಯಕ್ತಿಗಳು ವಾಹನದೊಂದಿಗೆ ಫಿರ್ಯಾದುದಾರರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರುವುದನ್ನು ಗಮನಿಸಿದಾಗ ವಾಹನದ ಮಾಲೀಕರು ಹಾಗೂ ಆರೋಪಿತ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಅಕ್ರಮ ಎಸಗಿರುವುದು ನಿಸ್ಸಂದೇಹವಾಗಿರುವುದರಿಂದ ಪ್ರಾದಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿ ರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಿಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ: 28–7–2008ರಂದು ಸ್ಕಾರ್ಪಿಯೊ ಕಾರು ಸಂ:GJ-3-BA-303 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 319.680 ಲೀಟರು ಮದ್ಯವನ್ನು ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ ಸಿ.ಹೆಚ್.ಸೋಮಶೇಖರ್, ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ಪ್ರಕರಣ ತನಿಖೆ ಕೈಗೊಂಡ ಬಗ್ಗೆ ಅಭಿಯೋಗದ ಪರ ದಿನಾಂಕ:19–1–2010ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡುತ್ತಾ, ನಾನು ದಿ:1–10–2008 ರಿಂದ ದಿ:23–10–2009ರವರೆಗೆ ಮಂಗಳೂರು ದಕ್ಷಿಣ ವಲಯ–2 ರಲ್ಲಿ ಪ್ರಭಾರ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ ಇವರ ಪ್ರ.ಮಾ.ವ ಸಂ:170/2008,ದಿ:28–7–2008ರಲ್ಲಿ ವಶಪಡಿಸಿಕೊಂಡ ಈ ಕೆಳಕಂಡ ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಪ್ರಾಧಿಕಾರದ ದಿ:30–10–2008ರ ಆದೇಶದಂತೆ, ನಾನು ದಿನಾಂಕ:18–8–2009ರಂದು ಪಡೆದು ಕೊಂಡಿರುತ್ತೇನೆ.

1) 37 ರಟ್ಟಿನ ಪೆಟ್ಟಿಗೆಗಳಲ್ಲಿ 47 ಬಾಟಲಿಗಳಂತೆ ಸೂಪರ್ ಚಾಕ್ ವಿಸ್ಕಿಯ ಒಟ್ಟು 1739 ಬಾಟಲಿಗಳಲ್ಲಿ ಒಟ್ಟು–313.020 ಲೀಟರು ಮದ್ಯ.

2) ಸ್ಕಾರ್ಪಿಯೋ ವಾಹನ ಸಂ:GJ-3-BA-303

ಮೇಲಿನ ಸೊತ್ತುಗಳ ಪೈಕಿ ವಾಹನವನ್ನು ಹೊರತುಪಡಿಸಿ, ಇತರೆ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಆದೇಶ ಕೋರಿ ದಿ:24–8–2009ರಂದು ರಾಸಾಯನಿಕ ವರದಿಯೊಂದಿಗೆ ಅಬಕಾರಿ ಉಪ ಅಯುಕ್ತರಿಗೆ ಶಿಫಾರಸ್ಸು ಪತ್ರ ಬರೆದಿರುತ್ತೇನೆ. ಸದ್ರಿ ಪತ್ರವನ್ನು ಈಗ ನೋಡಿ ನಿಶಾನೆ ಪಿ–1 ಎಂದು, ಅದರ ಮೇಲಿನ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಲಾಯಿತು. ಅದರಂತೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ರವರ ಅದೇಶ ಸಂ: ಎಸ್‌ಡಿಕೆ:121:ಡಿಟಿಸಿಆರ್:2008–09 ದಿ:27–8–2009ರಲ್ಲಿ ವಾಹನವನ್ನು ಹೊರತು ಪಡಿಸಿ, ಮದ್ಯವನ್ನು ಮಹಜರು ಕ್ರಮ ಜರುಗಿಸಿ ನಾಶಪಡಿಸಲು ಆದೇಶಿಸಿರುತ್ತಾರೆ. ಅದರಂತೆ ಸದ್ರಿ ಮದ್ಯವನ್ನು ನಾಶಪಡಿಸಿ ವರದಿ ಸಲ್ಲಿಸಿರುತ್ತೇನೆ.

ದಿನಾಂಕ:8–9–2009ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಅಹ್ಮದಬಾದ್ , ಗುಜರಾತ್ ಇಲ್ಲಿಗೆ ಜಪ್ತು ಪಡಿಸಿದ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಗಾಗಿ ಪತ್ರ ಮತ್ತು ನೆನಪೋಲೆಗಳನ್ನು ನೀಡಲಾಗಿದ್ದರೂ, ಯಾವುದೇ ಮಾಹಿತಿ ಸದ್ರಿ ಅಧಿಕಾರಿಗಳಿಂದ ಸ್ವೀಕೃತವಾಗಿರುವುದಿಲ್ಲ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಬರೆದ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸಿದ್ದು, ಅದನ್ನು ಈಗ ನೋಡಿ ನಿಶಾನೆ ಪಿ–2 ಎಂದು, ಅದರ ಮೇಲಿನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ನಂತರದಲ್ಲಿ ದಿನಾಂಕ: 23–10–2009ರಂದು ಸದ್ರಿ ಪ್ರಕರಣಕ್ಕೆ ಸಂಬಂಧಿಸಿದ ಕಡತ ಹಾಗೂ ವಾಹನವನ್ನು ಮಂಗಳೂರು ದಕ್ಷಿಣ ವಲಯ–2ಕ್ಕೆ ಖಾಯಂ ಅಬಕಾರಿ ನಿರೀಕ್ಷಕರಾಗಿ ನಿಯೋಜಿತರಾದ ಶ್ರೀ ಕೇಶವ ಮೂರ್ತಿ ಇವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ. ಪ್ರಕರಣ ದಾಖಲಿಸಿಕೊಂಡು ಈಗಾಗಲೇ ಒಂದು ವರ್ಷ 6 ತಿಂಗಳು ಕಳೆದಿರುವುದರಿಂದ ಹಾಗೂ ವಾಹನದ ಬಗ್ಗೆ ಯಾರೊಬ್ಬರೂ ಬೇಡಿಕೆ ಸಲ್ಲಿಸದೇ ಇರುವುದರಿಂದ ಸದ್ರಿ ವಾಹನವನ್ನು ಸರ್ಕಾರದ ಆದಾಯದ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ತಮ್ಮ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು:

ವಾಹನದ ಮಾಲೀಕರಾಗಲೀ, ಅವರ ಪರ ಪ್ರತಿನಿಧಿ ಅಥವಾ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಪ್ರಾ.ಸಾ–2

ಶ್ರೀ ಹೆಚ್. ಶಿವಪ್ರಕಾಶ್, ಪೊಲೀಸ್ ಉಪ ನಿರೀಕ್ಷಕರು, (ಕಾ.ಸು)ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ಪ್ರಕರಣದ ಫಿರ್ಯಾದುದಾರರ ನೆಲೆಯಲ್ಲಿ ಅಬಿಯೋಗದ ಪರ ದಿ:19–1–2010 ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡುತ್ತಾ, ನಾನು ದಿ:26–6–2007 ರಿಂದ ದಿ:14–8–2009ವರೆಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 28–7–2008ರಂದು ಸಿಬ್ಬಂದಿಗಳಾದ ಹೆಚ್.ಸಿ.1206, ಹೆಚ್.ಸಿ.–773, ಪಿ.ಸಿ.370, ಪಿ.ಸಿ377, ಮತ್ತು ಪಿ.ಸಿ–1145 ಇವರ ಜೊತೆಯಲ್ಲಿ ಮಂಗಳೂರು ತಾಲೂಕು ಸೋಮೇಶ್ವರ ಗ್ರಾಮದ ಸಂಕೊಳಿಗೆ

ಎಂಬಲ್ಲಿ ವಾಹನ ತಪಾಸಣೆ ನಿರತರಾಗಿರುವಾಗ ಮಂಗಳೂರು ಕಡೆಯಿಂದ ಕೇರಳ ಕಡೆಗೆ ಅತೀ ವೇಗದಲ್ಲಿ ಬರುತ್ತಿದ್ದ ಕಪ್ಪು ಬಣ್ಣದ GJ-3-BA 303 ನಂಬರಿನ ಸ್ಕಾರ್ಪಿಯೊ ಕಾರನ್ನು ಕಂಡು ಸಂಶಯಗೊಂಡು,ಅದರ ಚಾಲಕನಿಗೆ ನಿಲ್ಲಿಸುವರೇ ಸೂಚನೆ ನೀಡಿದಾಗ ಚಾಲಕನು ವಾಹನವನ್ನು ನಿಲ್ಲಿಸದೇ ತಲಪಾಡಿ ಕಡೆಗೆ ಮುಂದಕ್ಕೆ ಓಡಿಸಿದಾಗ ಅದನ್ನು ಇಲಾಖಾ ಜೀಪಿನಲ್ಲಿ ಬೆನ್ನಟ್ಟಿದಾಗ ಕಾರಿನ ಚಾಲಕನು ತಲಪಾಡಿ.ಆರ್.ಟಿ.ಓ ಚೆಕ್‌ಪೋಸ್ಟ್ ಸಮೀಪ ಕಾರನ್ನು ಪೂವಣ್ಣು ಕಡೆಗೆ ತಿರುಗಿಸಿ, ಅಲ್ಲಿಂದ ಕೆ.ಸಿ.ನಗರ ಮೂಲಕ ನಾಟೇಕಲ್ಲು ರಸ್ತೆಗೆ ಕೊಂಡು ಹೋಗಿ, ಅಲ್ಲಿಂದ ಬೆಳರಿಂಗೆ ರಸ್ತೆಯಲ್ಲಿ ತಿರುಗಿಸಿ, ಸುಮಾರು 5 ಕಿ.ಮೀ ನಷ್ಟು ದೂರ ಹೋಗಿ, ಕಲ್ಲಟ್ಟಿ ಎಂಬ ಒಳ ರಸ್ತೆಯಲ್ಲಿ ಕೊಂಡುಹೋಗಿ, ಕಿನ್ಯಾ ಗ್ರಾಮದ ಕಜೆ ಎಂಬ ಸ್ಥಳದಲ್ಲಿ ಚಾಲಕನು ಅತೀವೇಗದಲ್ಲಿ ವಾಹನ ಚಲಾಯಿಸಿ, ಆತನಿಗೆ ವಾಹನ ಹತೋಟಿ ತಪ್ಪಿ, ರಸ್ತೆಯ ಎಡಭಾಗದ ಚರಂಡಿಯೊಂದಕ್ಕೆ ವಾಹನವು ಬಿದ್ದು, ಸದ್ರಿ ಸಮಯದಲ್ಲಿ ಕಾರಿನ ಚಾಲಕ ಮತ್ತು ಆತನೊಂದಿಗೆ ಇದ್ದ ಇನ್ನೋರ್ವ ವ್ಯಕ್ತಿಯು ವಾಹನ ಬಿಟ್ಟು, ಪಕ್ಕದ ಕಾಡು ಪ್ರದೇಶದಲ್ಲಿ ಓಡತೊಡಗಿದಾಗ ಸಿಬ್ಬಂದಿಯವರು ಹಿಡಿಯಲು ಪ್ರಯತ್ನಿಸಿದರೂ ಕಾಡಿನಲ್ಲಿ ಮರೆಯಾಗಿ ಪರಾರಿಯಾಗಿರುತ್ತಾರೆ. ಸದ್ರಿ ಓಡಿರುವ ವ್ಯಕ್ತಿಗಳ ಪೈಕಿ ಓರ್ವನ ಮುಖ ಚಹರೆಯಿಂದ ಆತನು ಎನ್.ಆರ್.ಪುರ ತಾಲ್ಲೂಕಿನ ವಾಸಿ ಸಂತೋಷ್ ಎಂಬುದಾಗಿ ತಿಳಿದು ಬಂದಿದೆ. ನಂತರ ಚರಂಡಿಯಲ್ಲಿ ಬಿದ್ದಿದ್ದ GJ-3-BA-303 ನಂಬರಿನ ಸ್ಕಾರ್ಪಿಯೊ ಕಾರನ್ನು ಪಂಚರ ಸಮಕ್ಷಮದಲ್ಲಿ ಪರಿಶೀಲಿಸಿದಾಗ ಅದರಲ್ಲಿ ಒಟ್ಟು 37 ರಟ್ಟಿನ ಪೆಟ್ಟಿಗೆಗಳು ತುಂಬಿಸಿದ್ದು, ಪ್ರತಿ ರಟ್ಟಿನ ಪೆಟ್ಟಿಗೆಗಳನ್ನು ಪರಿಶೀಲಿಸಿದಾಗ 180ಎಂ.ಎಲ್ ಸಾಮರ್ಥ್ಯದ ಪ್ರತಿ ಪೆಟ್ಟಿಗೆಯಲ್ಲಿ ತಲಾ 48 ರಂತೆ ಒಟ್ಟು 1776 ಸೂಪರ್ ಜ್ಯಾಕ್ ಕ್ಲಾಸಿಕ್ ವಿಸ್ಕಿ ಎಂಬ ಲೇಬಲ್ ಇರುವ ಮದ್ಯ ತುಂಬಿದ ಬಾಟಲಿಗಳು ಇರುವುದು ಕಂಡು ಬಂತು. ವಾಹನವನ್ನು ಕೂಲಂಕುಷವಾಗಿ ತಪಾಸಣೆ ನಡೆಸಿದಾಗ ವಾಹನದ ಚಾಲಕ ಮತ್ತು ಇನ್ನೋರ್ವ ವ್ಯಕ್ತಿ ಸದ್ರಿ ಮದ್ಯವನ್ನು ಸಾಗಾಟ ಮಾಡುವ ಬಗ್ಗೆ ಯಾವುದೇ ರಹದಾರಿ ಹೊಂದಿರುವುದು ಕಂಡು ಬರಲಿಲ್ಲ. ಕಾರಣ ಸದ್ರಿ ಮದ್ಯವನ್ನು ಅಕ್ರಮವಾಗಿ ಕೇರಳ ರಾಜ್ಯಕ್ಕೆ ಮಾರಾಟ ಮಾಡುವ ಸಲುವಾಗಿ ಸದ್ರಿ ವಾಹನದಲ್ಲಿ ಸಾಗಾಟ ಮಾಡುತ್ತಿರುವುದು ಖಚಿತಗೊಂಡು, ಇದು ಅಬಕಾರಿ ಕಾಯಿದೆಯ ಉಲ್ಲಂಘನೆ ಎಂದು ತಿಳಿದು ವಾಹನ ಮತ್ತು ಅದರಲ್ಲಿರುವ ಮದ್ಯದ ಬಾಕ್ಸ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಪ್ರತಿಯೊಂದು ಮದ್ಯದ ಪೆಟ್ಟಿಗೆಯಿಂದ ತಲಾ ಒಂದೊಂದರಂತೆ ಒಟ್ಟು 37ವಿಸ್ಕಿ ತುಂಬಿದ ಬಾಟಲಿಗಳನ್ನು ಮಾದರಿಗೆ ತೆಗೆದಿರಿಸಿ, ಅವುಗಳ ಮುಚ್ಚಳಕ್ಕೆ ಬಟ್ಟೆ ಸುತ್ತಿ, ಎಸ್.ಹೆಚ್.ಓ ಮೊಹರು ಮಾಡಿ,ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು . ವಶಪಡಿಸಿಕೊಂಡ ಸ್ಕಾರ್ಪಿಯೊ ಇಂಜಿನನ್ನು ಪರಿಶೀಲಿಸಲಾಗಿ ಅದರ ಇಂಜಿನಿನಲ್ಲಿ B.F34M83563ಎಂದು ಬೊನೆಟಿನ ಮೇಲೆ ಅಲ್ಯುಮೀನಿಯಂ ಪ್ಲೇಟ್ ಅಳವಡಿಸಿದ್ದು, ಅದರಲ್ಲಿ ಮಾಡೆಲ್ SCORPIO- TURBO-2,GLX 2 W-D 85,SL NO.MA-ITA-2BFC42,A-60925 ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಸದ್ರಿ ವಾಹನ ಹತೋಟಿ ತಪ್ಪಿ ಬಿದ್ದಿರುವ ಸ್ಥಳದ ಚೆಕ್ ಬಂದಿಯನ್ನು ನಮೂದಿಸಿ, ಸ್ಥಳದಲ್ಲಿಯೆ ಮಹಜರನ್ನು ಜರುಗಿಸಲಾಯಿತು.ಸದ್ರಿ ಮಹಜರಿಗೆ ಪಂಚ ಸಾಕ್ಷಿದಾರರ ಸಹಿಯನ್ನು ಪಡೆಯಲಾಯಿತು. ಮಹಜರನ್ನು ಈಗ ನೋಡಿ ಅದನ್ನು ನಿಶಾನೆ ಪಿ–3 ಎಂದು ಅದರ ಮೇಲಿರುವ ನನ್ನ ಸಹಿಯನ್ನು ನಿಶಾನೆಪಿ–3 ಎ ಎಂದು ಗುರುತಿಸ ಲಾಯಿತು. ವಾಹನ ಮತ್ತು ಇತರ ಸೊತ್ತುಗಳನ್ನು ಠಾಣೆಗೆ ಕೊಂಡೊಯ್ದು, ಠಾಣೆಯಲ್ಲಿ ಉಳ್ಳಾಲ ಪೊಲೀಸ್ ಠಾಣಾ ಕ್ರೈಂ ಸಂ:170/2008 ದಿ:28–7–08ರಂತೆ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಲಾಯ್ತು. ಹಾಗೂ ಜಪ್ತುಪಡಿಸಿದ ಸೊತ್ತುಗಳ ವಿವರಗಳನ್ನು ನಮೂದಿಸಿ, ಉಳ್ಳಾಲ ಪೊಲೀಸ್ ಠಾಣಾ ಪಿ.ಎಫ್ ಸಂ: 163/08 ದಿ:28–7–08ರಂತೆ ವರದಿ ತಯಾರಿಸಿ, ಸದ್ರಿ ಸ್ವತ್ತುಗಳನ್ನು ಹಸ್ತಾಂತರಿಸುವ ಬಗ್ಗೆ ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಲಾಯ್ತು. ಪ್ರಥಮ ಮಾಹಿತಿ ವರದಿ ಪ್ರತಿಯನ್ನು ಈಗ ನೋಡಿ,ನಿಶಾನೆ ಪಿ–4 ಎಂದು ಅದರ ಮೇಲಿನ ನನ್ನ ಸಹಿಯನ್ನು ನಿಶಾನೆ ಪಿ–4 ಎ ಎಂದು ಗುರುತಿಸಲಾಯ್ತು. ಹಾಗೂ ಪಿ.ಎಫ್ ವರದಿಯನ್ನು ನಿಶಾನೆ ಪಿ–5 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–5ಎ ಎಂದು ಗುರುತಿಸಲಾಯಿತು. ನಂತರ ಸದ್ರಿ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವರೇ ವಿನಂತಿಸಿ, ಸೊತ್ತುಗಳನ್ನು ವ್ಯಾಪ್ತಿಯ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರಿಸಲು ಆದೇಶ ಕೋರಿ ದಿ:01–10–2008ರಂದು ಮಾನ್ಯ ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ಇವರಿಗೆ ಪತ್ರ ಬರೆಯಲಾಯ್ತು.ಸದ್ರಿ ಪತ್ರವನ್ನು ಈಗ ನೋಡಿ ಅದನ್ನು ನಿಶಾನೆ ಪಿ–6 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ.ಪಿ–6ಎ ಎಂದು ಗುರುತಿಸಲಾಯ್ತು. ಮಾನ್ಯ ಅಧಿಕೃತ ಅಧಿಕಾರಿಗಳ ದಿ:30–10–2008ರ ಆದೇಶದಂತೆ ದಿ:15–6–2009ರಂದು ವಾಹನ ಮತ್ತು ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ ಇವರಿಗೆ ಹಸ್ತಾಂತರಿಸಿರುತ್ತೇನೆ. ಪ್ರಕರಣದ ಮದ್ಯದ ಮಾದರಿ ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಪಡೆಯಲಾದ ರಾಸಾಯನಿಕ ವಿಶ್ಲೇಷಣಾ ವರದಿ ಪ್ರತಿಯನ್ನು ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಕಡತದ ಪ್ರತಿಗಳನ್ನು ದಿ:10–8–2009 ರಂದು ಸಂಬಂಧಿಸಿದ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ವಕೀಲರಾಗಲೀ ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ತೋರಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

III -F3 -(O)

ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಗಳು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ: 28–7–2008 ರಂದು ಜಪ್ತು ಪಡಿಸಿರುವ ಸ್ಕಾರ್ಪಿಯೋ ಸಂ: GJ-3-BA-303 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ಅಕ್ರಮ ಸಂದರ್ಭದಲ್ಲಿ ವಾಹನದ ಸುಪರ್ಧಿ ಹೊಂದಿರುವ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಜಪ್ತಾದ ವಾಹನದ ಮಾಲೀಕತ್ವದ ಬಗ್ಗೆ ವಿವರಗಳುಳ್ಳ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಗುಜರಾತ್ ರಾಜ್ಯ ಇವರಿಗೆ ಪತ್ರ ಮುಖೇನಾ ಸಂಪರ್ಕಿಸಲಾಗಿದ್ದರೂ, ಸದ್ರಿಯವರಿಂದ ಯಾವುದೇ ಮಾಹಿತಿ ಲಭ್ಯವಿಲ್ಲದೇ ಇರುವುದರಿಂದ ವಾಹನದ ಮಾಲೀಕರಿಗೆ ಅಬಕಾರಿ ಕಾಯಿದೆ ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ. ಪ್ರಕರಣ ದಾಖಲಾಗಿ ಸುಮಾರು 1 ವರ್ಷ 6 ತಿಂಗಳುಗಳು ಕಳೆದಿದ್ದರೂ, ಜಪ್ತಾದ ವಾಹನದ ಮಾಲೀಕರು ತನ್ನ ವಾಹನವನ್ನು ಪಡೆದುಕೊಳ್ಳುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಹಾಗೂ ಈ ಬಗ್ಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಸೂಕ್ತ ಸಾಕ್ಷ್ಯದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಪ್ರಕರಣ ನಡೆಸಲು ಉತ್ಸುಕರಾಗದೇ ಇರುವುದನ್ನು ಗಮನಿಸಿದಾಗ ಜಪ್ತಾದ ವಾಹನ ಮಾಲೀಕರು ತನ್ನ ತಿಳುವಳಿಯಿಂದಲೇ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಸ್ಕಾರ್ಪಿಯೋ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಜ್ಯಾರಿಯಲ್ಲಿರುವ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿ ಯೋಗ್ಯ ಹಾಗೂ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಭಾಗಶ: ಜಖಂಗೊಂಡಿರುವ ಸ್ಕಾರ್ಪಿಯೋ ಕಾರು ಸಂ: GJ-3-BA-303 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ನೇ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಗಳೂರು ಗ್ರಾಮಾಂತರ ಉಳ್ಳಾಲ ಪೊಲೀಸ್ ಠಾಣಾ ಕ್ರೈಂ ಸಂ:170/2008 ದಿ: 28–7–2008 ರಲ್ಲಿ ಜಪ್ತು ಪಡಿಸಿ ಕೊಂಡಿರುವ ವಾರಸ್ಸುದಾರರು ಯಾರೂ ಇಲ್ಲದ ಸ್ಕಾರ್ಪಿಯೋ ಕಾರು ಸಂ:GJ-3-BA-303 (ಇಂಜಿನ್ ಸಂ:B.F34M83563 ಮತ್ತು ಚಾಸೀಸ್ ಸಂ: MA-ITA-2BFC42, A-60925)ನ್ನು ನಿಯಮ 43ಸಿ ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:27-01-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ ಸಿ.ಹೆಚ್.ಸೋಮಶೇಖರ್, ಅಬಕಾರಿ ನಿರೀಕ್ಷಕರು (ಪ್ರಭಾರ)
ಮಂಗಳೂರು ದಕ್ಷಿಣ ವಲಯ–2,ಮಂಗಳೂರು.

ಪ್ರಾ.ಸ–2 : ಶ್ರೀ ಹೆಚ್.ಶಿವಪ್ರಕಾಶ್, ಪೊಲೀಸ್ ಉಪ ನಿರೀಕ್ಷಕರು, (ಕಾ.ಸು) ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ಇಎಕ್ಸ್ ಪಿ–I : ಅಬಕಾರಿ ಉಪ ಅಯುಕ್ತರಿಗೆ ದಿ: 24–8–09 ರಂದು ಬರೆದ ಶಿಫಾರಸ್ಸು ಪತ್ರ.
ಇಎಕ್ಸ್ ಪಿ–I ಎ :ಅದರ ಮೇಲಿನ ಸಹಿ

ಇಎಕ್ಸ್ ಪಿ-2	: :ಪ್ರಾ.ಸಾ.ಅ ರವರಿಗೆ ಬರೆದ ಪತ್ರ ದಿ:8-9-2009
ಇಎಕ್ಸ್ ಪಿ-2ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ-3	: ಮಹಜರು ಪ್ರತಿ
ಇಎಕ್ಸ್ ಪಿ-3ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ-4	: ಪ್ರಥಮ ಮಾಹಿತಿ ವರದಿ
ಇಎಕ್ಸ್ ಪಿ-4ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ-5	: ಪಿ.ಎಫ್.ವರದಿ
ಇಎಕ್ಸ್ ಪಿ-5ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ-6	: ಪ್ರಾ.ಸಾ-2ರವರು ಅಧಿಕೃತ ಅಧಿಕಾರಿಗಳಿಗೆ ಬರೆದ ಪತ್ರ
ಇಎಕ್ಸ್ ಪಿ-6ಎ	: ಅದರ ಮೇಲಿನ ಸಹಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :-

ಅರ್ಜಿದಾರರ ಹೇಳಿಕೆ :- – ಯಾವುದು ಇಲ್ಲ–

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :- – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,

ಪಿ.ಆರ್.209

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/50/ಡಿಟಿಸಿಆರ್/2009-10, ದಿನಾಂಕ:18ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು,
ಪುತ್ತೂರು ವಲಯ, ಪುತ್ತೂರು.

ಆರೋಪಿ:

ಎಸ್. ಬಾಲಕೃಷ್ಣ ರೈ (42 ವ), ಬಿನ್ ದಿ. ತ್ಯಾಂಪಣ್ಣ ರೈ.
ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು.

ವಾಹನ ಮಾಲೀಕರು:

ಶ್ರೀ ಮಹಮ್ಮದ್ ಬಿನ್ ಮಮ್ಮುನಿ ಬ್ಯಾರಿ,
ವಾಸ:2-45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:31-8-2009 ರಂದು ಸಂಜೆ 6-30 ಗಂಟೆ ಸಮಯಕ್ಕೆ ದೊರೆತ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರು ಮತ್ತು ಅಬಕಾರಿ ಉಪ ನಿರೀಕ್ಷಕರು ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿ ಬಂದಾಗ ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನಿಂತಿದ್ದು, ಅದರ ಹತ್ತಿರ ನಿಂತಿದ್ದ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ಸಿಬ್ಬಂದಿಯವರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದನು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ ಸಿಬ್ಬಂದಿಯವರ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನದ ಶೋಧನಾ ಕ್ರಮ ಸ್ಥಳದಲ್ಲಿಯೇ ಜರುಗಿಸಲಾಯಿತು. ಸ್ಕೂಟರಿನ ಕಾಲು ಇಡುವ ಜಾಗದಲ್ಲಿ ಮತ್ತು ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳನ್ನು ದಾಸ್ತಾನು ಹೊಂದಿರುವುದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ, ಸದರಿ ಮದ್ಯವನ್ನು ಅಕ್ರಮ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಬಾಲಕೃಷ್ಣ ರೈ(42 ವ), ಬಿನ್:

ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ, ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವ ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ತಕ್ಷೀರು ನಡೆದ ದಿನಾಂಕ ಮತ್ತು ಸಮಯವನ್ನು ನಮೂದಿಸಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 38(ಎ) ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಆರೋಪಿಯ ವಿರುದ್ಧ ತಕ್ಷೀರು ಸಂ:2/2009–10 ದಿ:31–8–2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/6/2009–10 ದಿ:9–11–2009 ರ ವರದಿಯಲ್ಲಿ, ಮದ್ಯದ ರಾಸಾಯನಿಕ ವಿಶ್ಲೇಷಣಾ ಪತ್ರ ಸಂಖ್ಯೆ: ಇ–330–26 ದಿ:11–9–2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಮತ್ತು ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ರ ಬಿ ಎಕ್ಸ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಬಿ ಎಕ್ಸ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ವಾಹನದ ನೋಂದಣಿ ಮಾಲೀಕ ಶ್ರೀ.ಮಹಮ್ಮದ್, ಬಿನ್: ಮಮ್ಮುನಿ ಬ್ಯಾರಿ, ವಾಸ: 2–45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು ಆಗಿದ್ದು, ಇದರ ಚಾಸೀಸ್ ನಂ: 06ಸಿ94ಕೆ 33537 ಮತ್ತು ಇಂಜಿನ್ ನಂ:06ಇ94ಕೆ 38306 ಆಗಿರುತ್ತದೆ. ಮತ್ತು ವಾಹನದ ಪ್ರಸ್ತುತ ಮೌಲ್ಯವನ್ನು ಮೋಟಾರು ವಾಹನ ನಿರೀಕ್ಷಕರು, ಸಾರಿಗೆ ಅಧಿಕಾರಿ, ಪುತ್ತೂರು ಇವರ ದೃಢೀಕರಣ ಪತ್ರ ದಿನಾಂಕ: 24–10–2009 ರ ವರದಿಯಲ್ಲಿ, ವಾಹನದ ಮೌಲ್ಯ ರೂ.1,200/– ಗಳಾಗಬಹುದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಬಜಾಜ್ ಚೇತಕ್ ಸ್ಕೂಟರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಲಯ ಅಬಕಾರಿ ನಿರೀಕ್ಷಕರ ಶಿಫಾರಸ್ಸಿನ ಮೇರೆಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/50/ಡಿಟಿಸಿಆರ್/2009–10 ದಿ:18–11–2009 ರ ಆದೇಶದಲ್ಲಿ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಆಯುಕ್ತರ ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಅನುಸರಿಸಿ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ವಾಹನದ ನೋಂದಣಿ ಮಾಲೀಕರಾದ ಶ್ರೀ.ಮಹಮ್ಮದ್, ಬಿನ್: ಮಮ್ಮುನಿ ಬ್ಯಾರಿ, ವಾಸ:2–45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು ಮತ್ತು ಆರೋಪಿಯಾದ ಎಸ್.ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1966 ರ ಕಲಂ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳು ಸ್ವೀಕೃತಿಯಾಗಿ, ಸ್ವೀಕೃತಿ ಪತ್ರ ಈ ಪ್ರಾಧಿಕಾರಕ್ಕೆ ತಲುಪಿರುತ್ತದೆ. ಆದರೆ ವಾಹನದ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಮತ್ತು ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಯಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಬಿಡುಗಡೆ ಪಡೆಯಲು ಯಾವುದೇ ಅರ್ಜಿಯನ್ನು ಇದುವರೆಗೂ ಸಲ್ಲಿಸಿರುವುದಿಲ್ಲ.

ಪ್ರಕರಣವು ದಾಖಲಾಗಿ ಸುಮಾರು 4 ತಿಂಗಳು ಕಳೆದರೂ ವಾಹನದ ಬಿಡುಗಡೆಗಾಗಿ ಈ ಪ್ರಾಧಿಕಾರಕ್ಕೆ ಯಾರೂ ಅರ್ಜಿಯನ್ನು ಸಲ್ಲಿಸಿರುವ ಕಾರಣಕ್ಕೆ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ತಕ್ಷೀರಿಗೆ ಸಂಬಂಧಿಸಿದ ಫಿರ್ಯಾದುದಾರರು, ತನಿಖಾಧಿಕಾರಿಯವರು ಮತ್ತು ಮಹಜರು ಸಾಕ್ಷಿದಾರರಿಗೆ ಹಾಗೂ ವಾಹನ ಮಾಲೀಕರಿಗೆ ಮತ್ತು ಆರೋಪಿಗೆ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ವಾಹನದ ಮಾಲೀಕರಾಗಲಿ ಅಥವಾ ಆರೋಪಿಯಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ಸಾಕ್ಷಿ ವಿಚಾರಣೆಯನ್ನು ನೀಡಿರುವುದಿಲ್ಲ. ಪ್ರಕರಣದ ವಿಚಾರಣೆಯನ್ನು ಆರಂಭಿಸಿ ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 31–8–2009 ರಂದು ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು

ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್,ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:15–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ ಕಚೇರಿಯ ಅಬಕಾರಿ ನಿರೀಕ್ಷಕರಾಗಿದ್ದು, ತಾನು ದಿ:31–8–2009 ರಂದು ಪುತ್ತೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿಯ ಕಂಟ್ರೋಲ್ ರೂಮ್ ದೂರವಾಣಿ ಸಂ: 08251–231981 ಕ್ಕೆ ಬಂದ ಕರೆಯ ಮೇರೆಗೆ ತಾನು ಮತ್ತು ತನ್ನ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿ ಬಂದಾಗ ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ನಿಂತಿದ್ದು, ಅದರ ಹತ್ತಿರ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ತಮ್ಮನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ತಮ್ಮ ಸಿಬ್ಬಂದಿಯವರಾದ ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಮತ್ತು ಶ್ರೀ.ಗಂಗಾಧರ, ಅಬಕಾರಿ ರಕ್ಷಕರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದರು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ, ತಮ್ಮ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನ ಶೋಧನಾ ಕ್ರಮ ಸ್ಥಳದಲ್ಲಿಯೇ ಜರುಗಿಸಲಾಯಿತು. ಸ್ಕೂಟರಿನ ಕಾಲು ಇಡುವ ಜಾಗದ ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳು ಇದ್ದದ್ದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸದರಿ ಮದ್ಯವನ್ನು ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವುದು ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ಸಮಯವನ್ನು ನಮೂದಿಸಲಾಗಿದೆ. ಮಹಜರಿನ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ಸದರಿ ವರದಿಯನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಕಚೇರಿಗೆ ಬಂದು ಆಪಾದಿತ ವಿರುದ್ಧ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ಸದರಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ–3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಸರ್ಚ್ ಮೆಮೊವನ್ನು ನಿಶಾನೆ ಪಿ–4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–4ಎ ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಮುಂದುವರಿಸಿ ಆಪಾದಿತನ ಗುರುತಿನ ಪಟ್ಟಿಯನ್ನು ತಯಾರಿಸಲಾಗಿ, ನಿಶಾನೆ ಪಿ–5 ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಣೆಗೆ ಮದ್ಯದ ಬಾಟಲ್‌ಗಳನ್ನು ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಇವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದ್ದು ಅವರಿಂದ ವರದಿಯನ್ನು ಪಡೆಯಲಾಗಿದ್ದು, ಅವರ ವರದಿ ಸಂ: ಇ–330–26 ದಿ:11–9–2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ಧೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು ಹಾಗೂ ವಾಹನದ ಮೌಲ್ಯ ಹಾಗೂ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆಯಲಾಗಿದ್ದು, ಇದರ ನೋಂದಣಿ ಮಾಲೀಕ ಶ್ರೀ.ಮಹಮ್ಮದ್, ಪುತ್ತೂರು ಹಾಗೂ ವಾಹನದ ಈಗಿನ

ಮೌಲ್ಯ ರೂ.1,200/- ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವರದಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದ್ದು, ಅವುಗಳನ್ನು ನಿಶಾನೆ ಪಿ-7 ಮತ್ತು 8 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ದಿ:9-11-2009 ರಂದು ಸಲ್ಲಿಸಲಾಗಿದೆ. ಸದರಿ ವರದಿಯನ್ನು ಈಗ ನೋಡಲಾಗಿ, ನಿಶಾನೆ ಪಿ-9 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-9ಎ ಎಂದು ಗುರುತಿಸಲಾಯಿತು. ಈ ಪ್ರಾಧಿಕಾರದ ಮುಟ್ಟುಗೋಲು ಆದೇಶ ಸಂಖ್ಯೆ:ಎಸ್‌ಡಿಕೆ/ 50/ಡಿಟಿಸಿಆರ್ /2009-10 ದಿ:18-11-2009 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಸದರಿ ಆದೇಶದಂತೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಅಬಕಾರಿ ಆಯುಕ್ತರ ಸುತ್ತೋಲೆಯ ಅನುಸಾರ ದಿ:18-12-2009 ರಂದು ಮಹಜರು ಜರುಗಿಸಿ ನಾಶಪಡಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ-1 ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಮತ್ತೊಬ್ಬರು ಮಹಜರು ಸಾಕ್ಷಿದಾರರಾದ ಶ್ರೀ.ಯಾಕುಬ್‌ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿನಾಂಕ:15-1-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿದ್ದು, ತಾನು ದಿ:31-8-2009 ರಂದು ತಮಗೆ ಪುತ್ತೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿಯ ಕಂಟ್ರೋಲ್ ರೂಮ್ ದೂರವಾಣಿ ಸಂ: 08251-231981 ಕ್ಕೆ ಬಂದ ಕರೆಯ ಮೇರೆಗೆ ತಾನು ಮತ್ತು ತನ್ನ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿಗೆ ಬಂದಾಗ, ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನಿಂತಿದ್ದು, ಅದರ ಹತ್ತಿರ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ತಮ್ಮನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ತಮ್ಮ ಸಿಬ್ಬಂದಿಯವರಾದ ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಮತ್ತು ಶ್ರೀ.ಗಂಗಾಧರ, ಅಬಕಾರಿ ರಕ್ಷಕರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದರು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ ನಮ್ಮ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನ ಶೋಧನಾ ಕ್ರಮ ಸ್ಥಳದಲ್ಲಿಯೇ ಅಬಕಾರಿ ನಿರೀಕ್ಷಕರು ಇವರು ಜರುಗಿಸಿರುತ್ತಾರೆ. ಸ್ಕೂಟರಿನ ಕಾಲು ಇಡುವ ಜಾಗದ ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳು ಇದ್ದದ್ದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸದರಿ ಮದ್ಯವನ್ನು ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವ ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ಸಮಯವನ್ನು ನಮೂದಿಸಲಾಗಿದೆ. ಮಹಜರಿನಲ್ಲಿ ತಾನು ಮತ್ತು ತನ್ನ ಸಿಬ್ಬಂದಿಯವರು ಸಹಿ ಮಾಡಿರುತ್ತಾರೆ. ಈಗಾಗಲೇ ಗುರುತಿಸಿರುವ ಮಹಜರಿನ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ತನ್ನ ಸಹಿಯನ್ನು ನಿಶಾನೆ ಪಿ-2B ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ಕೈಗೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ-2 ನೇ ಸಾಕ್ಷಿಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿ ಮತ್ತು ಮಹಜರು ಸಾಕ್ಷಿದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ: 31-8-2009 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ರಲ್ಲಿ ಅಕ್ರಮವಾಗಿ 180 ಮಿಲಿಯ 30 ಬಾಟ್ಲಿಗಳಲ್ಲಿ 5-400 ಲೀಟರ್

ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಈ ಪ್ರಾಧಿಕಾರದಿಂದ ಕಾಲಂ 43(ಬಿ) ರಡಿ ನೀಡಲಾಗಿರುವ ಕಾರಣ ಕೇಳಿ ನೋಟೀಸನ್ನು ಸ್ವೀಕರಿಸಿಕೊಂಡಿದ್ದು, ಅವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಅವರ ತಿಳುವಳಿಕೆಗೆ ಬಾರದೆ ಸದ್ರಿ ಅಪರಾಧವೆಸಗಲಾಗಿದೆ ಎಂಬ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಒಪ್ಪಿಸಲು ಮುಂದಾಗಿರುವುದಿಲ್ಲ. ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಯು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ವಶಪಡಿಸಿಕೊಂಡು ಸುಮಾರು 4 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪುತ್ತೂರು ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಹಾಗೂ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ಪ್ರಾಧಿಕಾರದಿಂದ ವಾಹನದ ನೋಂದಣಿ ಮಾಲೀಕರಿಗೆ ಮತ್ತು ಆರೋಪಿಗೆ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದರೂ, ಸದರಿ ನೋಟೀಸುಗಳನ್ನು ಸ್ವೀಕರಿಸಿಕೊಂಡಿದ್ದು ಯಾವುದೇ ಉತ್ತರವನ್ನು ಈ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ ಹಾಗೂ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿದಾರರ ಪಾಟೀ ಸವಾಲು ಹಾಗೂ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ದಸ್ತಗಿರಿಯಾದ ಆರೋಪಿಯು ಇದುವರೆಗೂ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸದಿರುವ ಕಾರಣಕ್ಕೆ, ವಾಹನದಲ್ಲಿ ಮದ್ಯ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಈಗಾಗಲೇ 4 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/50/ಡಿಟಿಸಿಆರ್/2009-10, ದಿನಾಂಕ:18ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತಕ್ಷೀರು ಸಂ:2/2009-10 ದಿ:31-8-2009 ರಲ್ಲಿ ಅಕ್ರಮ ಸಾಗಾಟಕ್ಕೆ ಬಳಸಿದ ಜಪ್ತುಪಡಿಸಿಕೊಂಡಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:18-01-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಶಿವ ಪ್ರಸಾದ್,ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಪ್ರಾ.ಸಾ-2: ಶ್ರೀ.ಯಾಕುಬ್‌ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರು.

ನಿಶಾನೆ ಪಿ-1ಎ : ಮಹಜರಿನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-2B : ಮಹಜರಿನಲ್ಲಿ ಪ್ರಾ.ಸಾ:2ರವರ ಸಹಿ.

ನಿಶಾನೆ ಪಿ-3 : ಸೊತ್ತುಗಳ ಪಟ್ಟಿ.

ನಿಶಾನೆ ಪಿ-3ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ-4 : ಸರ್ಚ್ ಮೆಮೊ.

ನಿಶಾನೆ ಪಿ-4ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ-5 : ಆಪಾದಿತನ ಗುರುತಿನ ಪಟ್ಟಿ.

ನಿಶಾನೆ ಪಿ-6 : ರಾಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ ಪಿ-7 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ-8 : ವಾಹನದ ಮೌಲ್ಯದ ಬಗ್ಗೆ ದೃಢೀಕರಣ ಪತ್ರ.

ನಿಶಾನೆ ಪಿ-9 : ತನಿಖಾ ವರದಿ.

ನಿಶಾನೆ ಪಿ-9ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್,

ಪಿ.ಆರ್.210

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/585/ಡಿಟಿಸಿಆರ್/2005-06, ದಿನಾಂಕ:22ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು (ಕಾ.ಸು.)
ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ.

ಆರೋಪಿ:

ಹೆನ್ರಿ ಡಿಸೋಜ 32 ವರ್ಷ, ಕ್ಲಿಟಸ್ ಡಿಸೋಜ
ವಾಸ:ಅನಿಲ್ ಕಂಪೌಂಡು ಒಂಭತ್ತುಕೆರೆ,
ಉಳ್ಳಾಲ ಗ್ರಾಮ, ಮಂಗಳೂರು ತಾಲ್ಲೂಕು
ಮತ್ತು ತಲೆ ಮರೆಸಿಕೊಂಡಿರುವ ಓರ್ವ ಆರೋಪಿ.

ಮಾಲೀಕರು

ಶ್ರೀ.ಮೊಹಮ್ಮದ್ ಅಶ್ರಫ್, ಬಿನ್:ಸುಲೈಮಾನ್,
ಡೋರ್ ನಂ:16-17/16, ಹೈದರ್ ಅಲಿ ರೋಡ್,
ಮುಕ್ಕಚೇರಿ, ಉಳ್ಳಾಲ, ಮಂಗಳೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು(ಕಾ.ಸು) ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರಿಗೆ ದಿನಾಂಕ: 9-2-2006 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ರಾತ್ರಿ 9-45 ಗಂಟೆ ಸಮಯಕ್ಕೆ ಮಂಗಳೂರು ತಾಲೂಕು ಕೋಟೆಕಾರು ಗ್ರಾಮದ ಬಗಂಬಿಲ ಎಂಬಲ್ಲಿಗೆ ತೆರಳಿ ಆಟೋ ರಿಕ್ಷಾ ಸಂ:KA-19-A-8436ನ್ನು ತಪಾಸಣೆ ಮಾಡಿದಾಗ, ರಿಕ್ಷಾದಿಂದ ಒಬ್ಬಾತನು ಹಾರಿ ಓಡಿ ಹೋಗಿದ್ದು, ಬೆನ್ನಟ್ಟಿದರೂ ಸಿಗದೇ ಇದ್ದು,ಸದ್ರಿ ರಿಕ್ಷಾ ಚಲಾಯಿಸುತ್ತಿದ್ದ ಚಾಲಕನನ್ನು ವಶಕ್ಕೆ ತೆಗೆದುಕೊಂಡು ರಿಕ್ಷಾವನ್ನು ಪರಿಶೀಲಿಸಿದಾಗ 2 ರಬ್ಬರ್ ಟ್ಯೂಬ್‌ಗಳಲ್ಲಿ ಕಂಟ್ರಿ ಶರಾಬು ಇರುವುದಾಗಿಯೂ, ಸದ್ರಿ ಪ್ರಮಾಣದಲ್ಲಿ ಕಂಟ್ರಿ ಶರಾಬನ್ನು ಆಟೋ ರಿಕ್ಷಾದಲ್ಲಿ ಸಾಗಿಸಲಾಗುತ್ತಿದ್ದ ಬಗ್ಗೆ ವಿಚಾರಿಸಲಾಗಿ ಅದು ಅಕ್ರಮವಾಗಿ ಮಾರಾಟ ಮಾಡುವರೇ ಕೊಂಡುಹೋಗುವುದಾಗಿ ತಿಳಿದುಬಂದಿದ್ದು, ಟ್ಯೂಬ್‌ಗಳಲ್ಲಿದ್ದ ಕಳ್ಳಭಟ್ಟಿ ಸಾರಾಯಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದುದಾಗಿ ತಿಳಿಸಿದಂತೆ ಆತನನ್ನು ವಶಕ್ಕೆ ತೆಗೆದುಕೊಂಡು ಹೆಸರು ವಿಳಾಸ ವಿಚಾರಿಸಲಾಗಿ 1) ಹೆನ್ರಿ ಡಿಸೋಜ32 ವರ್ಷ, ಬಿನ್:ಕ್ಲೀಟಸ್ ಡಿಸೋಜ ವಾಸ:ಅನಿಲ್ ಕಂಪೌಂಡು, ಒಂಭತ್ತುಕೆರೆ, ಉಳ್ಳಾಲ ಗ್ರಾಮ,ಮಂಗಳೂರು ತಾಲೂಕು ಹಾಗೂ ಓಡಿ ಹೋದವನ ಹೆಸರು ಮೆಲ್ವಿನ್ ಡಿಸೋಜ,30 ವರ್ಷ, ಬಿನ್: ಮೇಕಿ ಡಿಸೋಜ, ವಾಸ:ಅಡಂಕುದ್ರು ಮನೆ, ಜಪ್ಪಿನಮೊಗರು ಗ್ರಾಮ ಎಂಬುದಾಗಿದ್ದು, ಎರಡು ರಬ್ಬರ್ ಟ್ಯೂಬ್‌ಗಳಲ್ಲಿ 50 ಲೀ ಕಂಟ್ರಿ ಸಾರಾಯಿ ಇರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧವಾಗಿದ್ದು ಹಾಗೂ 32,34ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ವಾಹನ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿಯೇ ಮಹಜರು ತಯಾರಿಸಿ, ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ:41/2006 ದಿ:9-2-2006ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಕರಣದ ಮುಂದಿನ ತನಿಖೆಗೆ ಸೊತ್ತು ಮತ್ತು ಕಡತವನ್ನು ಕಾರ್ಯವ್ಯಾಪ್ತಿಯ ಅಂದಿನ ಅಬಕಾರಿ ಉಪ ನಿರೀಕ್ಷಕರು (1), ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಇವರಿಗೆ ಹಸ್ತಾಂತರಿಸಲು ಈ ಪ್ರಾಧಿಕಾರದಿಂದ ಅನುಮತಿ ಕೋರಿದ್ದು, ಪ್ರಾಧಿಕಾರದಿಂದ ದಿನಾಂಕ:7-4-2006ರಂದು ಅನುಮತಿ ನೀಡಲಾಗಿರುತ್ತದೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:-

1) ಬಜಾಜ್ ಅಟೋ ರಿಕ್ಷಾ ನೊಂದಣಿ ಸಂ:KA-19A-8436

2) ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಳ್ಳಭಟ್ಟಿ ಸಾರಾಯಿ.

(ಸದ್ರಿ ಎರಡು ರಬ್ಬರ್ ಟ್ಯೂಬ್‌ಗಳಿಂದ 750 ಮಿಲಿಯದ 6 ಬಾಟಲಿಗಳಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ.

ಪ್ರಾಧಿಕಾರದ ದಿ:7-4-2006ರ ಆದೇಶದಂತೆ ಅಬಕಾರಿ ಉಪ ನಿರೀಕ್ಷಕರು(ನಂ.1) ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆರವರು ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಂಟ್ರಿ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ನ್ನು ದಿ:28-4-06 ರಂದು ಫಿರ್ಯಾದಿದಾರರಿಂದ ಹಸ್ತಾಂತರ ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಮೊಹಮ್ಮದ್ ಆಶ್ರಫ್, ಬಿನ್:ಸುಲೈಮಾನ್, ಡೋರ್ ನಂ:16-17/16, ಹೈದರ್ ಅಲಿ ರೋಡ್, ಮುಕ್ಕಚೇರಿ, ಉಳ್ಳಾಲ,ಮಂಗಳೂರು ತಾಲೂಕು ಇವರು ಈ ಪ್ರಾಧಿಕಾರಕ್ಕೆ ವಾಹನದ ಆರ್.ಸಿ ಪ್ರತಿಯೊಂದಿಗೆ ದಿ:16-2-2006ರಂದು ಅವರ ವಕೀಲರ ಮೂಲಕ ಅರ್ಜಿ ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯನ್ನು ಪರಿಶೀಲಿಸಿದ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರ ಪ್ರಾಧಿಕಾರದಿಂದ ದಿ:20-9-2006 ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮಾಲೀಕರ ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ, ಮಂಗಳೂರು ದಕ್ಷಿಣ ಇವರು ದಿ:15-5-2006 ರಂದು ಸಲ್ಲಿಸಿದ್ದ ತನಿಖಾ ವರದಿ ಸಂ: ಮಂ.ದ.ಜಾ.ತ/ಸಿಆರ್‌ಎಂ:86:05-06 ಇದರೊಂದಿಗೆ ಜಪ್ತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮಾದರಿಗಳ ವಿಶ್ಲೇಷಣಾ ವರದಿ ಸಂ:143-6 ದಿ:14-3-2006 ಮತ್ತು ಜಪ್ತುಪಡಿಸಿದ ವಾಹನ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ಇದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಮಂಗಳೂರು ಇವರಿಂದ ಪಡೆಯಲಾದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರತಿಯನ್ನು ಅಡಕಗೊಳಿಸಿ ಸಲ್ಲಿಸುತ್ತಾ, ಜಪ್ತುಪಡಿಸಿಕೊಳ್ಳಲಾದ ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿದ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರತಿಯ ಪ್ರಕಾರ ಜಪ್ತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮಾದರಿಗಳಲ್ಲಿ ಮದ್ಯಸಾರದ ಅಂಶ 25.0 % ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ವಶಪಡಿಸಿಕೊಂಡ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯಂತೆ ಶ್ರೀ.ಯು. ಮೊಹಮ್ಮದ್

ಅಶ್ರಫ್, ಬಿನ್:ಸುಲೈಮಾನ್, ಡೋರ್ ನಂ:16-17/16, ಹೈದರ್ ಅಲಿ ರೋಡ್, ಮುಕ್ಕಚೇರಿ, ಉಳ್ಳಾಲ, ಮಂಗಳೂರು ತಾಲೂಕು ಇವರು ಸದ್ರಿ ವಾಹನದ ನೊಂದಣಿ ಮಾಲೀಕರಾಗಿರುವುದಾಗಿ ದೃಡೀಕೃತವಾಗಿರುತ್ತದೆ.

ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಜಪ್ತುಪಡಿಸಿಕೊಂಡ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಂಟ್ರಿ ಕಳ್ಳಭಟ್ಟಿ ಸಾರಾಯಿ (ಮಾದರಿ ಹೊರತು ಪಡಿಸಿ)ಯನ್ನು ದಿನಾಂಕ:27-2-2007ರ ಪ್ರಾಧಿಕಾರದ ಆದೇಶದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 1965ರ ಕಲಂ 43ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಮುಟ್ಟುಗೋಲು ಹಾಕಿಕೊಳ್ಳಲಾದ ಕಳ್ಳಭಟ್ಟಿ ಸಾರಾಯಿಯನ್ನು ದಿನಾಂಕ:28-4-2007ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ದ.ಕ ಜಿಲ್ಲೆ, ಮಂಗಳೂರು ಇವರಿಂದ ಪಡೆಯಲಾದ ಬಿ.ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಢಪಟ್ಟಿರುವ ವಾಹನದ ಮಾಲೀಕರಿಗೆ ಹಾಗೂ ಪ್ರಕರಣದ ಆರೋಪಿತ ವ್ಯಕ್ತಿಗಳಿಗೆ ಜಪ್ತುಪಡಿಸಿದ ವಾಹನವನ್ನು ಯಾಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಡಿಯಲ್ಲಿ ದಿ:10-8-2006ರಂದು ಕಾರಣ ಕೇಳಿ ನೋಟೀಸು ನೀಡಲಾಗಿದ್ದು, ಸದ್ರಿ ನೋಟೀಸು ವಾಹನದ ಮಾಲೀಕರಿಗೆ ದಿ:16-8-2006ರಂದು ಜಾರಿಯಾಗಿದ್ದು, ಸದ್ರಿಯವರು ದಿ:20-9-2006ರಂದು ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತಾ, ಕೃತ್ಯ ವಾಹನದ ಮಾಲೀಕರ ತಿಳುವಳಿಕೆ ಯಿಂದ ಆಗಿರುವುದಿಲ್ಲ ಎಂದು ತಿಳಿಸಿ, ಆರೋಪವನ್ನು ಅಲ್ಲಗಳೆದು ವಾಹನದ ಮುಟ್ಟುಗೋಲು ನಡವಳಿಕೆಯನ್ನು ಕೈಬಿಡಬೇಕಾಗಿ ಕೋರಿರುತ್ತಾರೆ. ಪ್ರಕರಣದ ಅರೋಪಿತ ವ್ಯಕ್ತಿಗಳಿಗೆ ನೀಡಲಾದ ಕಾರಣ ಕೇಳಿ ನೋಟಿಸು ಕ್ರಮವಾಗಿ ದಿ:16-8-2006 ಮತ್ತು 14-8-06ರಂದು ಜ್ಯಾರಿಯಾಗಿದ್ದು, ಅರೋಪಿತನಾದ ಹೆನ್ರಿ ಡಿಸೋಜ ಎಂಬವನು ದಿ:25-8-2006ರಂದು ಪ್ರಾದಿಕಾರಕ್ಕೆ ಉತ್ತರವನ್ನು ಸಲ್ಲಿಸಿ ಪ್ರಕರಣವನ್ನು ಅಲ್ಲಗಳೆದು ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಾರದೆಂದು ವಿನಂತಿಸಿರುತ್ತಾರೆ. ಹಾಗೂ ಉಳಿದಂತೆ ಇನ್ನೊಬ್ಬ ಅರೋಪಿಯಿಂದ ಯಾವುದೇ ಉತ್ತರ ಸ್ವೀಕೃತವಾಗಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ತನಿಖಾಧಿಕಾರಿಗಳಾದ ಶ್ರೀ ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು ಮತ್ತು ಶ್ರೀ.ಎಂ.ಪಿ.ಹಾಲಯ್ಯ,ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಹಾಗೂ ಮಹಜರು ಸಾಕ್ಷಿದಾರರಾದ ಶ್ರೀ.ಧರ್ಣಪ್ಪ ಹೆಗ್ಡೆ, ಪಿಸಿ ನಂ:370, ಸಂಚಾರಿ ಪೊಲೀಸ್ ಠಾಣೆ,ಉಳ್ಳಾಲ, ಇವರುಗಳು ಪ್ರಾಸಿಕ್ಯೂಶನ್ ಸಾಕ್ಷಿಗಳಾಗಿ ಕ್ರಮವಾಗಿ ಪಿಡಬ್ಲ್ಯೂ-1, 2 ಮತ್ತು 3 ರಂತೆ ಈ ಪ್ರಾದಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ವಾಹನದ ಮಾಲೀಕರ ಹಾಗೂ ರಕ್ಷಣಾ ಪರ ವಕೀಲರ ನಿರಂತರ ಗೈರು ಹಾಜರಿನಿಂದ ಸಾಕ್ಷಿ ವಿಚಾರಣೆ ವೇಳೆಯಲ್ಲಿ ಪಾಟೀ ಸವಾಲು ನಡೆಸಲು ಸಾಧ್ಯವಾಗದೇ ಇರುವುದರಿಂದ ಅಭಿಯೋಜನ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಸರ್ಕಾರಿ ಅಭಿಯೋಜಕರ ವಾದವನ್ನು ಅಲಿಸಿ ಅಂತಿಮ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾದಾಂಶಗಳು

1) ದಿನಾಂಕ:9-2-2006 ರಂದು ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436 ರಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ-1:

ಶ್ರೀ. ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು,ಜಾರಿ ಮತ್ತು ತನಿಖೆ ಸುಳ್ಯ ಇವರು ದಿನಾಂಕ: 26-10-2006 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ದಿನಾಂಕ:28-4-2006ರಂದು ಉಳ್ಳಾಲ ಪೊಲೀಸ್ ಠಾಣಾ ಅಧಿಕಾರಿಗಳು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಮತ್ತು ವಶಪಡಿಸಿಕೊಂಡ ಸೊತ್ತುಗಳಾದ ಬಜಾಜ್ ಅಟೋ ರಿಕ್ಷಾ ಮತ್ತು ಕಳ್ಳಭಟ್ಟಿ ಸಾರಾಯಿ ತುಂಬಿದ 2 ಟ್ಯೂಬ್‌ಗಳು ಹಾಗೂ 6 ಮಾದರಿ ಸೀಸೆಗಳನ್ನು ನಮಗೆ ಹಸ್ತಾಂತರಿಸಿರುತ್ತಾರೆ. ವಶಪಡಿಸಿಕೊಂಡ ವಾಹನ ಆಟೋ ರಿಕ್ಷಾ ಸಂ:KA-19-A-8436 ಇದರ ಮಾಲೀಕತ್ವದ ಬಗ್ಗೆ ತಿಳಿದುಕೊಳ್ಳುವರೇ ಸಂಬಂಧಿಸಿದ ಸಾರಿಗೆ ಕಛೇರಿಗೆ ಪತ್ರ ಬರೆದೆನು. ದಿ:15-5-2006ರಂದು ಈ ಬಗ್ಗೆ ಒಂದು ವರದಿಯನ್ನು

ತಯಾರಿಸಿ ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ಉಳ್ಳಾಲ ಠಾಣಾಧಿಕಾರಿಗಳು ಮಾದರಿ ಸೀಸೆಗಳನ್ನು ನಮಗೆ ಹಸ್ತಾಂತರಿಸುವ ಮೊದಲೇ ರಾಸಾಯನಿಕ ವಿಶ್ಲೇಷಕರಿಂದ ಪರೀಕ್ಷಿಸಿ ರಾಸಾಯನಿಕ ವಿಶ್ಲೇಷಕರ ವರದಿಯನ್ನು ಸಹಾ ನಮಗೆ ಹಸ್ತಾಂತರಿಸಿರುತ್ತಾರೆ. ಜೂನ್-2006ರಲ್ಲಿ ನನಗೆ ವರ್ಗಾವಣೆ ಆದೇಶ ಬಂದಿರುವುದರಿಂದ ಪ್ರಕರಣದ ಕಡತವನ್ನು ನನ್ನ ನಂತರದ ಅಧಿಕಾರಿ ಶ್ರೀ.ಎಂ.ಪಿ.ಹಾಲಯ್ಯ ಇವರಿಗೆ ಹಸ್ತಾಂತರಿಸಿರುತ್ತೇನೆ. ಉಳ್ಳಾಲ ಠಾಣಾ ಅಧಿಕಾರಿಗಳು ಪ್ರಕರಣದಲ್ಲಿ ತಯಾರಿಸಿದ ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ನೋಡಿದೆನು. ಅದನ್ನು ನಿಶಾನೆ-ಪಿ2 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಉಳ್ಳಾಲ ಠಾಣಾಧಿಕಾರಿಗಳು ತಯಾರಿಸಿದ ಮಹಜರಿನ ಛಾಯಾ ಪ್ರತಿಯನ್ನು ಈಗ ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಶಾನೆ ಪಿ-3 ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಕರ ವರದಿಯ ಪ್ರತಿಯನ್ನು ನೋಡಿದೆನು. ಅದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಉಳ್ಳಾಲ ಠಾಣಾಧಿಕಾರಿಗಳು ತಯಾರಿಸಿದ ಮಹಜರಿನ ಛಾಯಾ ಪ್ರತಿಯನ್ನು ಈಗ ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ಪರ ವಕೀಲರ ಅಕ್ಷೇಪಣೆ ಮೇರೆಗೆ ನಿಶಾನೆ ಪಿ-3 ಎಂದು ಗುರುತಿಸಲಾಯಿತು.ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಆಟೋ ರಿಕ್ಷಾ KA-19-A-8436ಕ್ಕೆ ಸಂಬಂಧಿಸಿದ ಬಿ ವರದಿಯನ್ನು ಪಡೆದುಕೊಂಡಿದ್ದು, ಅದರ ಛಾಯಾ ಪ್ರತಿಯನ್ನು ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ವಕೀಲರ ಅಕ್ಷೇಪಣೆ ಮೇರೆಗೆ ನಿಶಾನೆ ಪಿ-5 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ರಕ್ಷಣಾ ಪರ ವಕೀಲರಾದ ಶ್ರೀ.ವಿಜಯ ಕುಮಾರ್ ಇವರ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ ಈ ಪ್ರಕರಣವು ಪ್ರಥಮ ಬಾರಿಗೆ ಉಳ್ಳಾಲ ಪೊಲೀಸರಿಂದ ನನಗೆ 28-4-2006ರಂದು ಹಸ್ತಾಂತರವಾಗಿರುತ್ತದೆ. ದಿ:28-4-06ರ ಮೊದಲು ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ನಾನು ಈ ಪ್ರಕರಣದ ಬಗ್ಗೆ ದಿನಾಂಕ:15-5-2006ರಂದು ಪ್ರಥಮ ಬಾರಿಗೆ ಪೊಲೀಸರು ಮಾನ್ಯ ಅಧಿಕೃತ ಅಧಿಕಾರಿಗಳಿಗೆ ಈ ಪ್ರಕರಣದ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

ಉಳ್ಳಾಲ ಪೊಲೀಸರು ನನಗೆ ದಿ:28-4-2006ರಂದು ಆಟೋ ರಿಕ್ಷಾ, 6 ರಾಸಾಯನಿಕ ಪರೀಕ್ಷೆಗೆ ಒಳಪಟ್ಟ ಮಾದರಿ ಸೀಸೆಗಳು ಹಾಗೂ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿ ಸಾಗಿಸಿದ್ದಾರೆ ಎನ್ನಲಾದ ರಬ್ಬರ್ ಟ್ಯೂಬ್‌ಗಳನ್ನು ಕಳುಹಿಸಿಕೊಟ್ಟಿದ್ದರು. ಸದ್ರಿ ಟ್ಯೂಬ್‌ಗಳಲ್ಲಿ ಸುಮಾರು 50 ಲೀಟರಿನಷ್ಟು ಸಾರಾಯಿ ಇತ್ತು. ಸದ್ರಿ ಟ್ಯೂಬ್‌ಗಳಿಂದ ಮಾದರಿ ಸೀಸೆಗೆ ಯಾರು,ಯಾವಾಗ ಯಾವ ರೀತಿಯಲ್ಲಿ ಸಾರಾಯಿ ತೆಗೆದಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮೇಲೆ ತಿಳಿಸಿದ ಸೊತ್ತುಗಳನ್ನು ಪೊಲೀಸರಿಂದ ಪಡೆದು ಸಾರಿಗೆ ಇಲಾಖೆಯಿಂದ ವಾಹನ ಮಾಲೀಕತ್ವದ ಬಗ್ಗೆ ದೃಡೀಕರಣ ಕೋರಿ ಪತ್ರ ಪಡೆದಿರುತ್ತೇನೆ. ಹಾಗೂ ಇದರ ಹೊರತಾಗಿ ಯಾವುದೇ ತನಿಖಾ ಕಾರ್ಯವನ್ನು ಮಾಡಿರುವುದಿಲ್ಲ. ನಾನು ಮಾದರಿ ಸೀಸೆಗಳನ್ನಾಗಲೀ, ರಬ್ಬರ್ ಟ್ಯೂಬ್‌ಗಳಲ್ಲಿದ್ದ ಕಳ್ಳಭಟ್ಟಿ ಸಾರಾಯಿಯನ್ನಾಗಲೀ ಸ್ವೀಕರಿಸಿಲ್ಲ ಅಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಪ್ರಾ.ಸಾ-2:

ಶ್ರೀ.ಎಂ.ಪಿ.ಹಾಲಯ್ಯ, ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಇವರು ದಿ:22-3-2007 ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ, ದಿನಾಂಕ:2-6-2006ರಿಂದ ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪೂರ್ವದ ಅಬಕಾರಿ ಉಪ ನಿರೀಕ್ಷಕರಾದ ಶ್ರೀ.ಕೃಷ್ಣ ನಾಯ್ಕ್ ಅವರಿಂದ ಕಡತ ಹಾಗೂ ಸೊತ್ತುಗಳನ್ನು ಪಡೆದುಕೊಂಡೆನು. ಪ್ರಕರಣದಲ್ಲಿ ತನಿಖೆ ಮುಂದುವರೆದಿದ್ದು, ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲು ಬಾಕಿ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ಅರ್ಜಿದಾರರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಾ.ಸಾ-3:

ಶ್ರೀ.ಧರ್ಣಪ್ಪ ಹೆಗ್ಡೆ, ಪಿ.ಸಿ-370 ,ಸಂಚಾರಿ ಪೊಲೀಸ್ ಠಾಣೆ ಇವರು ದಿ:19-1-2010 ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ, ನಾನು ದಿನಾಂಕ:2-6-2006ರಿಂದ ದಿ:2-7-2009 ರವರೆಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಕಾನ್ಸ್‌ಟೇಬಲ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ. ದಿ:9-2-2006ರಂದು ನಾನು 10-00 ಗಂಟೆ ರಾತ್ರಿ ಸಮಯಕ್ಕೆ ಠಾಣೆಯಲ್ಲಿರುವಾಗ ಪಿಎಸ್‌ಐರವರಿಗೆ ಬಂದ ವರ್ತಮಾನದ ಮೇರೆಗೆ ನನ್ನನ್ನು ಮತ್ತು ಇತರ ಸಿಬ್ಬಂಧಿಯನ್ನು ಇಲಾಖಾ ಜೀಪಿನಲ್ಲಿ ಕೋಟೆಕಾರು ಗ್ರಾಮ ಬಗಂಬಿಲ ಪೆನ್ನಿ ಪ್ಯಾಕ್ಟರಿ ಬಳಿ ಕರೆದುಕೊಂಡು ಹೋಗಿ ಅಲ್ಲಿ ನಮಗೆ ಬಂದ ವರ್ತಮಾನದ ಬಗ್ಗೆ ರಸ್ತೆ ಬದಿ ಹೊಂಚು ಹಾಕುತ್ತಿರುವಾಗ ರಾತ್ರಿ 9-45 ಗಂಟೆ ಸಮಯ ಬಗಂಬಿಲ ಗುಡ್ಡೆ ಕಡೆಯಿಂದ ಬರುತ್ತಿದ್ದ ಒಂದು ಆಟೋ ರಿಕ್ಷಾವನ್ನು ಪಿಎಸ್‌ಐರವರು ತಡೆದು ನಿಲ್ಲಿಸಿದಾಗ ರಿಕ್ಷಾದಲ್ಲಿದ್ದ ಒಬ್ಬ ವ್ಯಕ್ತಿಯು ರಿಕ್ಷಾದಿಂದ ಹಾರಿ ಹೋಗಿ ತಪ್ಪಿಸಿಕೊಂಡಿದ್ದು,ರಿಕ್ಷಾ ಚಾಲಕನನ್ನು ಪಿ.ಎಸ್.ಐರವರು ವಶಪಡಿಸಿ ಆತನ ಹೆಸರು,ವಿಳಾಸ ಕೇಳಲಾಗಿ, ಹೆನ್ರಿ ಡಿಸೋಜ, ಉಳ್ಳಾಲ ಗ್ರಾಮ ಎಂದು ತಿಳಿಸಿರುತ್ತಾನೆ. ಹಾಗೂ ಓಡಿ ಹೋದವನ ಹೆಸರು ವಿಳಾಸ ವಿಚಾರಿಸಿದಾಗ ಜಪ್ಪಿನ ಮೊಗ್ರು ಗ್ರಾಮದ ಮೆಲ್ವಿನ್

ಡಿಸೋಜ ಎಂದು ತಿಳಿಸಿರುತ್ತಾನೆ. ರಿಕ್ಷಾ ಚಾಲಕನಲ್ಲಿ ರಿಕ್ಷಾದಲ್ಲಿ ಏನಿದೆ ಎಂದು ವಿಚಾರಿಸಿದಾಗ ಅವನು ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡಲು ಕೊಂಡು ಹೋಗುತ್ತಿರುವುದಾಗಿ ತಿಳಿದ್ದು ರಿಕ್ಷಾ ಪರಿಶೀಲಿಸಿದಾಗ ಸದ್ರಿ ರಿಕ್ಷಾದಲ್ಲಿ 2 ಟಯರ್ ಟ್ಯೂಬ್‌ಗಳಲ್ಲಿ 50 ಲೀಟರುನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಪತ್ತೆಯಾಗಿ,ಸದ್ರಿ ಕಳ್ಳಭಟ್ಟಿ ಸಾರಾಯಿ ಬಗ್ಗೆ ಯಾವುದೇ ದಾಖಲಾತಿ ಅಥವಾ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆ.ಆದ್ದರಿಂದ ಸದ್ರಿ ಟ್ಯೂಬಿನಲ್ಲಿದ್ದ ಸಾರಾಯಿ ಪೈಕಿ 750ಎಂಎಲ್‌ನ 6 ಬಾಟಲಿಗಳಲ್ಲಿ ಸಾರಾಯಿಯನ್ನು ಸ್ಯಾಂಪಲ್‌ಗಾಗಿ ತೆಗೆದಿರಿಸಿ ಮೊಹರು ಕ್ರಮ ಜರುಗಿಸಿ ಅವುಗಳಿಗೆ ಎ 1 ರಿಂದ ಎ 6ವರೆಗೆ ಕ್ರ.ಸಂ ನೀಡಿ ಪಂಚರ ಸಹಿ ಇರುವ ಲೇಬಲ್ ಅಂಟಿಸಲಾಯಿತು. ಹಾಗೂ ಟಯರ್ ಟ್ಯೂಬ್‌ಗಳಿಗೆ 7 ಮತ್ತು 8 ಎಂದು ಕ್ರಮ ಸಂಖ್ಯೆ ನೀಡಲಾಯಿತು. ಸದ್ರಿ ಸಾರಾಯಿ ಸಾಗಿಸುತ್ತಿದ್ದ ರಿಕ್ಷಾ KA-19-A-8436 ಆಗಿರುತ್ತದೆ. ಸದ್ರಿ ರಿಕ್ಷಾ ಹಾಗೂ ಸೊತ್ತುಗಳನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿ ಪಂಚರ ಸಮಕ್ಷಮ ರಾತ್ರಿ 10 ರಿಂದ 11 ಗಂಟೆ ತನಕ ಜೀಪಿನ ಹೆಡ್ ಲೈಟ್ ಬೆಳಕಿನಿಂದ ಮಹಜರು ತಯಾರಿಸಲಾಗಿರುತ್ತದೆ. ಸ್ಥಳದಲ್ಲಿ ತಯಾರಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ–3 ಎಂದು ಸಾಕ್ಷಿ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು. ನಂತರ ಸ್ವಾಧೀನ ಪಡಿಸಿದ ಸೊತ್ತುಗಳು ಹಾಗೂ ದಸ್ತಗಿರಿಯಾದ ಆರೋಪಿ ಜೊತೆ ನಾವು ಠಾಣೆಗೆ ಹೋಗಿದ್ದು, ಪಿ.ಎಸ್.ಐರವರು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತಾರೆ. ಆ ದಿನ ನಾವು ಸ್ವಾಧೀನಪಡಿಸಿದ ರಿಕ್ಷಾ ಮತ್ತು ಇನ್ನಿತರ ಸಾರಾಯಿ ತುಂಬಿದ ಟ್ಯೂಬ್‌ಗಳು ಹಾಗೂ ಸ್ಯಾಂಪಲ್ ತಯಾರಿಸಿದ ಬಾಟಲುಗಳನ್ನು ನೋಡಿದರೆ ಗುರುತಿಸಬಲ್ಲೆ ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ರಿಕ್ಷಾದಲ್ಲಿ ಅಕ್ರಮ ಸಾರಾಯಿ ಸಾಗಾಟ ಮಾಡಿದ ಕಾರಣ ಸದ್ರಿ ರಿಕ್ಷಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಾನು ಪ್ರಾಧಿಕಾರದ ಮುಂದೆ ವಿನಂತಿಸಿಕೊಳ್ಳುತ್ತಿದ್ದೇನೆ. ತನಿಖೆ ಸಮಯ ನಾನು ಪಿಎಸ್.ಐಗೆ ಹೇಳಿಕೆ ನೀಡಿದ್ದು,ಸದ್ರಿ ಹೇಳಿಕೆಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಎದುರುದಾರರು ಹಾಗೂ ಅವರ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ–1, 2 ಮತ್ತು 3 ರವರ ಸಾಕ್ಷಿ ವಿಚಾರಣೆಯನ್ನು ಹಾಗೂ ವಿಚಾರಣೆ ವೇಳೆಯಲ್ಲಿ ವಾಹನದ ಮಾಲೀಕರಾಗಲೀ, ಮಾಲೀಕರ ಪರ ರಕ್ಷಣಾ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಅಭಿಯೋಗದ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಮತ್ತು ಮಹಜರು ಸಾಕ್ಷಿದಾರರ ಹಾಗೂ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿ:9–2–2006 ರಂದು ಜಪ್ತು ಪಡಿಸಿರುವ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ರಲ್ಲಿ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು, ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ವಶಪಡಿಸಿಕೊಂಡಿದ್ದು, ಬಜಾಜ್ ಅಟೋ ರಿಕ್ಷಾ ನೊಂದಣಿ ಸಂ: KA-19A-8436ನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಪ್ರಾಧಿಕಾರದ ಮುಂದೆ ವಿಚಾರಣೆಗೆ ಒಳಪಟ್ಟಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ ವಾಹನವನ್ನು ಯಾವುದೇ ಅಕ್ರಮಕ್ಕೆ ಬಳಸಿರುವುದಿಲ್ಲ ಮತ್ತು ಈ ಅಕ್ರಮ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬ ಬಗ್ಗೆ ಲಿಖಿತ ಉತ್ತರ ನೀಡಿರುವರಾದರೂ ಇದನ್ನು ಸಮರ್ಥಿಸಿಕೊಳ್ಳುವ ಬಗ್ಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಸದ್ರಿ ವಾಹನದಿಂದ ದಿ:09–02–2006ರಂದು ಜಪ್ತುಪಡಿಸಲಾಗಿರುವ 50.000ಲೀಟರ್ ಕಳ್ಳಭಟ್ಟಿ ಸಾರಾಯಿ ಹೇಗೆ ಸಾಗಿಸಲು ಕಾರಣ ಹಾಗೂ ಅದು ಅವರ ತಿಳುವಳಿಕೆಗೆ ಬಾರದೇ ನಡೆದಿರುವ ಬಗ್ಗೆ ಸೂಕ್ತ ಹಾಗೂ ಸಮಂಜಸ ಸಾಕ್ಷ್ಯಾಧಾರಗಳನ್ನು ಪ್ರಾಧಿಕಾರದ ಮುಂದೆ ಒಪ್ಪಿಸಲು ವಿಫಲರಾಗಿರುತ್ತಾರೆ. ಹಾಗೂ ಈ ಪ್ರಾಧಿಕಾರದಿಂದ ಸಾಕ್ಷಿ ವಿಚಾರಣೆಗೆ ನಿಗದಿಪಡಿಸಿದ ದಿನಾಂಕಗಳಂದು ವಾಹನದ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಹಾಜರಾಗದೇ ಇದ್ದು ಮಾಲೀಕರು ತಮ್ಮ ನಿರಾಪರಾಧಿತ್ವವನ್ನು ಸಾಬೀತುಪಡಿಸುವಲ್ಲಿ ಮುತುವರ್ಜಿ ವಹಿಸದೇ ಇರುವುದನ್ನು ಗಮನಿಸಿದಾಗ ಈ ಅಕ್ರಮವು ವಾಹನದ ಮಾಲೀಕರ ತಿಳುವಳಿಕೆಯಿಂದಲೇ ನಡೆದಿದೆ ಎಂಬುದು ಪ್ರಾಧಿಕಾರಕ್ಕೆ ಮನದಟ್ಟಾಗಿರುವುದರಿಂದ ಎರಡನೆಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಬಜಾಜ್ ಅಟೋ ರಿಕ್ಷಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಯಲ್ಲಿ ಯೋಗ್ಯವೆಂದು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು (ಕಾ.ಸು) ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ ಇವರ ತಕ್ಷೀರು ಸಂ:41/2006 ದಿ:9-2-2006 ರಲ್ಲಿ ಜಪ್ತು ಪಡಿಸಿರುವ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436 (ಚಾಸೀಸ್ ನಂ:24FBJL79503 ಮತ್ತು ಇಂಜಿನ್ ನಂ:AEMBJL 98208) ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ: 22-01-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ-I : ಶ್ರೀ ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು ಜಾರಿ ಮತ್ತು ತನಿಖೆ ಸುಳ್ಯ ತಾಲೂಕು
ಪ್ರಾ.ಸಾ-2: ಶ್ರೀ.ಎಂ.ಪಿ.ಹಾಲಯ್ಯ, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ.
ಪ್ರಾ.ಸಾ-3: ಶ್ರೀ . ಧರ್ನಪ್ಪ ಹೆಗ್ಡೆ, ಪಿ.ಸಿ-370 ಸಂಚಾರಿ ಪೊಲೀಸ್ ಠಾಣೆ, ಮಂಗಳೂರು.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

ನಿಶಾನೆ ಪಿ-I : ಅಧಿಕೃತ ಅಧಿಕಾರಿಗಳಿಗೆ ದಿ:15-5-2006ರಂದು ಬರೆದ ಪತ್ರ
ನಿಶಾನೆ ಪಿ-IA : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ-3 : ಮಹಜರು ಪ್ರತಿ
ನಿಶಾನೆ ಪಿ-3ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ-4 : ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-5 : ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ-6 : ಸಾಕ್ಷಿದಾರರ ಹೇಳಿಕೆ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :-

-ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :- - ಯಾವುದು ಇಲ್ಲ-

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.211

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/147/ಡಿಟಿಸಿಆರ್/2008-09, ದಿನಾಂಕ:20ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು,
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,ಪುತ್ತೂರು.

ಆರೋಪಿಗಳು:
ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:
ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:15-11-2008 ರಂದು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಕೊಂದಲಕಾನ ಎಂಬಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ವಾಹನ ತಪಾಸಣೆ ಹಾಗೂ ಗ್ರಾಮ ಭೇಟಿ ಮಾಡುತ್ತಿರುವ ಸಮಯವಲ್ಲಿ ಸಂಜೆ ಸುಮಾರು 5-30 ಗಂಟೆಗೆ ಪುತ್ತೂರು ಕಡೆಯಿಂದ ಪಾಣಾಜೆ ಅತ್ತ ಕಡೆಗೆ ಹಾದುಹೋಗುವ ಸಾರ್ವಜನಿಕ ಡಾಮಾರು ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಇಂಡಿಕಾ ಕಾರನ್ನು ಅದರ ಚಾಲಕ ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಸಂಶಯದ ಮೇರೆಗೆ ಸದರಿ ಕಾರನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕರು ಕಾರನ್ನು ನಿಲ್ಲಿಸದೆ ಅತೀ ವೇಗವಾಗಿ ಕೊಂದಾಲಕಾನ ಕಡೆಯಿಂದ ಹಾದುಹೋಗುವ ರಸ್ತೆಗೆ ತಿರುಗಿಸಿ ಚಲಾಯಿಸಿದರು. ವಾಹನವನ್ನು ಅತೀ ವೇಗವಾಗಿ ಚಲಾಯಿಸಿದ ಪರಿಣಾಮ ಕಾರಿನ ಹಿಂಬದಿಯ ಎಡಭಾಗದ ಇಂಡಿಕೇಟರ್‌ಗಳು ಹಾಗೂ ಮುಂಭಾಗದ ಎಡಬದಿಯ ರಸ್ತೆಯ ಬದಿಯಲ್ಲಿರುವ ಮೈಲುಕಲ್ಲಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಕಾರಿನ ಚಾಲಕರು ಸದರಿ ಕಾರನ್ನು ಅಲ್ಲಿಯೇ ಬಿಟ್ಟು ಕಾಡು ಪ್ರದೇಶದಲ್ಲಿ ಓಡಿ ಪರಾರಿಯಾದರು. ಅವರನ್ನು ಬೆನ್ನಟ್ಟಿದರೂ ಹಿಡಿಯಲು ಸಾಧ್ಯವಾಗಲಿಲ್ಲ. ಸದರಿ ಕಾರನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಕಾರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಕಂಡು ಬರಲಿಲ್ಲ. ಕಾರಿನ ಒಳಗಡೆ ಸಾರಾಯಿ ಪ್ಯಾಕೆಟ್‌ಗಳಿರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ರಹದಾರಿ ಪತ್ರಗಳಿಲ್ಲದೆ ಅಕ್ರಮವಾಗಿ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಖಚಿತವಾಗಿರುವುದರಿಂದ ಸದರಿ ಸಾರಾಯಿ ಪ್ಯಾಕೆಟ್‌ಗಳನ್ನು ಹಾಗೂ ಕಾರನ್ನು ವಶಪಡಿಸಿಕೊಂಡು ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ಸಾರಾಯಿ ಸ್ಯಾಚೆಟ್‌ಗಳ ಪಾಲಿಥಿನ್ ಚೀಲಗಳನ್ನು ಹೊರಗೆ ತೆಗೆದು ನೋಡಲಾಗಿ, 13 ಬಿಳಿ ಪಾಲಿಥಿನ್ ಚೀಲಗಳಲ್ಲಿ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿರುವುದು ಕಂಡು ಬಂತು. 12 ಪಾಲಿಥಿನ್ ಚೀಲಗಳಲ್ಲಿ ತಲಾ 500 ರಂತೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು ಹಾಗೂ ಇನ್ನೊಂದು ಪಾಲಿಥಿನ್ ಚೀಲದಲ್ಲಿ 300 ರಂತೆ 100 ಎಂ.ಎಲ್.ನ ಸಾರಾಯಿ ಸ್ಯಾಚೆಟ್‌ಗಳು ಒಟ್ಟು 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳು ದಾಸ್ತಾನಿರುವುದು ಪತ್ತೆಯಾದವು. ಪ್ರತಿಯೊಂದು ಸಾರಾಯಿ ಸ್ಯಾಚೆಟ್‌ಗಳ ಮೇಲೆ 100 ಎಂ.ಎಲ್.ನ ಸಾರಾಯಿ 35 ಡಿಗ್ರಿ ಯು.ಪಿ., ಜೆ.ಪಿ.ಡಿಸ್ಟಿಲರಿ(ಪ್ರೈ) ಲಿಮಿಟೆಡ್ ತುಮಕೂರು, ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ ಮತ್ತು ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಲ್ಪಟ್ಟಿದೆ ಎಂದು ಬರೆದಿರುತ್ತದೆ. ಪ್ರತಿಯೊಂದು ಪಾಲಿಥಿನ್ ಚೀಲದಿಂದ ತಲಾ 5 ರಂತೆ ಸಾರಾಯಿ ಸ್ಯಾಚೆಟ್‌ಗಳ ಪ್ಯಾಕೆಟ್‌ಗಳನ್ನು ಸ್ಯಾಂಪಲ್‌ಗಾಗಿ ತೆಗೆದು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಹೊಲಿದು, ಅವುಗಳಿಗೆ ಅರಗು ಹಾಕಿ ಎಸ್.ಹೆಚ್.ಒ ಸೀಲ್ ಮಾಡಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಅವುಗಳಿಗೆ ಕ್ರಮ ಸಂಖ್ಯೆಯನ್ನು ನೀಡಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಇಂಡಿಕಾ ಕಂಪೆನಿಯ ಕಾರನ್ನು ಪರಿಶೀಸಿದಾಗ, ಅದರ ಹಿಂಭಾಗ ಮತ್ತು ಮುಂಭಾಗದಲ್ಲಿ ಕಪ್ಪು ಅಕ್ಷರದಲ್ಲಿ ಕೆಎ-16-ಎಂ-3313 ಎಂದು ನೋಂದಣಿ ಸಂಖ್ಯೆ ಬರೆದಿರುತ್ತದೆ. ಕಾರಿನ ಇಂಜೀನ್ ನಂ: 4755149ಇಟಿರ್ಫೆಡ್‌ಪಿ-63881 ಮತ್ತು ಚಾಸೀಸ್ ನಂ:600208ಇಟಿರ್ಫೆಡ್ ಪಿ70718 ಆಗಿದ್ದು, ಟವೈಪಿ475ಎಸ್‌ಐ 49 ಆಗಿರುತ್ತದೆ. ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮತ್ತು ಸ್ಯಾಂಪಲ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ, ತಕ್ಷೀರು ನಡೆದ ಸ್ಥಳ ಮತ್ತು ದಿನಾಂಕವನ್ನು ನಮೂದಿಸಿದ್ದು ಮತ್ತು ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದುಕೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 15, 32, 34 ಮತ್ತು 43ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಓಡಿಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:117/2008 ದಿ:15-11-2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ಈ ಪ್ರಾಧಿಕಾರಕ್ಕೆ ದಿನಾಂಕ:17-11-2008 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/147/ಡಿಟಿಸಿಆರ್/2008-09 ದಿ:20-11-2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮುಂದಿನ ಮುಟ್ಟುಗೋಲು ನಡವಳಿ ನಡೆಸುವ ಬಗ್ಗೆ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ದಿ:10-2-2009 ರಂದು ಹಸ್ತಾಂತರಿಸಿರುತ್ತಾರೆ.

ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:14-5-2009 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರಿನ ನೋಂದಣಿ ಮಾಲೀಕನಾಗಿದ್ದು ತನ್ನ ವಾಹನವು ಕಳ್ಳತನವಾಗಿದ್ದು, ಈ ಬಗ್ಗೆ ತಾಳಿಪರಂ ಪೊಲೀಸ್ ಠಾಣೆ, ಕಣ್ಣೂರು ಜಿಲ್ಲೆ, ಕೇರಳ ರಾಜ್ಯ ಇವರು ಪ್ರಕರಣ ಸಂಖ್ಯೆ:175/2008 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ವಾಹನದ ಆರ್.ಸಿ. ಪ್ರತಿಯೊಂದಿಗೆ ವಾಹನವನ್ನು ಮಧ್ಯಂತರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಶೀಲಿಸುವ ಸಲುವಾಗಿ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಈ ಪ್ರಾಧಿಕಾರದಿಂದ ದಿ:18-5-2009 ರಂದು ಅರ್ಜಿಯ ಕುರಿತು ಕ್ರಮ ಜರುಗಿಸುವ ಬಗ್ಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಂದ ವಾಹನದ ಮೌಲ್ಯಮಾಪನ ವರದಿಯನ್ನು ಪಡೆದು ಒಪ್ಪಿಸುವಂತೆ ಸೂಚಿಸಲಾಗಿದ್ದು, ಅದರಂತೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್/ಸಿಆರ್ಎಂ/44/2008-09 ದಿ:15-6-2009 ರ ವರದಿಯಲ್ಲಿ, ಮೋಟಾರು ವಾಹನ ನಿರೀಕ್ಷಕರು, ಪುತ್ತೂರು ಇವರು ಇಂಡಿಕಾ ಕಾರಿನ ಈಗಿನ ಸ್ಥಿತಿಗತಿಯ ಮಾರುಕಟ್ಟೆ ಮೌಲ್ಯ ರೂ.1,20,000/- ಗಳಾಗಬಹುದೆಂದು ದೃಢೀಕರಣ ಪತ್ರವನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನ ನಿರೀಕ್ಷಕರು, ಪುತ್ತೂರು ಇವರು ಸಲ್ಲಿಸಿದ ಮೌಲ್ಯಮಾಪನ ವರದಿಯಂತೆ ವಾಹನದ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಇವರಿಗೆ ರೂ.1,20,000/- ಮೌಲ್ಯದ ಬ್ಯಾಂಕ್ ಗ್ಯಾರಂಟಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗುವುದೆಂದು ಈ ಪ್ರಾಧಿಕಾರದಿಂದ ದಿ:14-9-2009 ರಂದು ನೋಟೀಸುಗಳನ್ನು ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೂ ನೀಡಲಾಗಿದ್ದು, ಆರ್.ಸಿ. ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಇವರು ಸದ್ರಿ ನೋಟೀಸನ್ನು ದಿ:6-10-2009 ರಂದು ಸ್ವೀಕರಿಸಿರುತ್ತಾರೆ. ಆದರೆ ಇಂದಿನವರೆಗೆ ಅವರು ಈ ಪ್ರಾಧಿಕಾರಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ನೀಡಿರುವುದಿಲ್ಲ ಹಾಗೂ ನೋಟೀಸಿಗೆ ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ.

ವಾಹನ ನೋಂದಣಿ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಮತ್ತು ಅವರ ಪರ ವಕೀಲರಿಗೆ ಕರ್ನಾಟಕ ಅಬಕಾರಿ ಕಾಯಿದೆ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ದಿ:25-9-2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ನೋಟೀಸುಗಳು ಸ್ವೀಕೃತಿ ಅಂಚೆ ಮೂಲಕ ತಲುಪಿದ್ದು, ಆದರೆ ಕಾರಣ ಕೇಳಿ ನೋಟೀಸಿಗೆ ಅರ್ಜಿದಾರರಾಗಲಿ, ಅವರ ಪರ ವಕೀಲರಾಗಲಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್ /ಸಿಆರ್ಎಂ/44/2008-09 ದಿ:25-7-2009 ರ ವರದಿಯಲ್ಲಿ ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ತಕ್ಷೀರಿಗೆ ಸಂಬಂಧಿಸಿದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ: ಇ-567 ದಿ:6-1-2009 ರಲ್ಲಿ, ಸಾರಾಯಿ ಮದ್ಯಸಾರ ಪ್ರಮಾಣ ಶೇ.26 ಇರುವುದಾಗಿ ದೃಡೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿಯನ್ನು ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸಾರಾಯಿಯನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಆದೇಶ ನೀಡಬೇಕೆಂದು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/147/ಡಿಟಿಸಿಆರ್/2008-09 ದಿ:31-7-2009 ರ ಆದೇಶದಲ್ಲಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ವಾಹನದ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರದ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್ಎಂ/2004 ದಿ:12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ವರದಿ ಸಂಖ್ಯೆ ದಿ:18-8-2009 ರ ವರದಿಯಲ್ಲಿ ಅಬಕಾರಿ ಉಪ ಅಧೀಕ್ಷಕರು, ವಲಯ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ನಿರೀಕ್ಷಕರ ಹಾಗೂ ಕೆ.ಎಸ್.ಬಿ.ಸಿ.ಎಲ್. ಡಿಪೋ ಪುತ್ತೂರು ಮತ್ತು ಮಾಧ್ಯಮ ಪ್ರತಿನಿಧಿ ಹಾಗೂ ಸಾರ್ವಜನಿಕರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ನೋಂದಣಿ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಮತ್ತು ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು, ವಾಹನದ ಮಾಲೀಕರಾಗಲಿ ಅವರ ಪರ ವಕೀಲರಾಗಲಿ ಹಾಜರಾಗಿ ಸಾಕ್ಷಿದಾರರ ಪಾಟೀ ಸವಾಲನ್ನು ಮತ್ತು ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:15-11-2008 ರಂದು ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿವೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧಕ್ಕೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ?.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ,ಪುತ್ತೂರು ಇವರು ದಿ:05-01-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ಈ ಪ್ರಾಧಿಕಾರದ ಆದೇಶ ದಿ:20-11-2008 ರಂತೆ ತಾನು ಪುತ್ತೂರು ಗ್ರಾಮಂತರ ಪೊಲೀಸ್ ಠಾಣೆಗೆ ಸಂಬಂಧಿಸಿದಂತೆ ಪ್ರಕರಣ ಸಂಖ್ಯೆ:117/2008 ರಂತೆ ವಶಪಡಿಸಿಕೊಂಡ ಇಂಡಿಕಾ ಕಾರು ಮತ್ತು ಸಾರಾಯಿ ಸ್ಯಾಚೆಟ್‌ಗಳು ಹಾಗೂ ಸ್ಟೆಪಿನ್ ಟಯರು ಮತ್ತು ಜಾಕನ್ನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರ ಮುಖಾಂತರ ದಿ:10-2-2009 ರಂದು ತನ್ನ ವಶಕ್ಕೆ ಪಡೆದುಕೊಂಡಿದ್ದು, ಈ ಬಗ್ಗೆ ಈ ಪ್ರಾಧಿಕಾರಕ್ಕೆ ದಿ:11-2-2009 ರಂದು ಲಿಖಿತ ವರದಿಯನ್ನು ಸಲ್ಲಿಸಿರುತ್ತೇನೆ ಹಾಗೂ ದಿ:5-6-2009 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಮೌಲ್ಯಮಾಪನ ವರದಿಯನ್ನು ಪಡೆದುಕೊಂಡಿದ್ದು, ಮೌಲ್ಯಮಾಪನ ವರದಿಯ ಪ್ರಕಾರ ರೂ.1,20,000/- ಎಂದು ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ನಿಶಾನೆಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ದಿ:6-1-2009 ರ ರಾಸಾಯನಿಕ ಕೆಮಿಕಲ್ ವರದಿಯನ್ನು ಪೊಲೀಸ್ ಉಪ ನಿರೀಕ್ಷಕರವರಿಂದ ಪಡೆದುಕೊಂಡಿದ್ದು, ಸದರಿ ವರದಿಯನ್ನು ನಿಶಾನೆ ಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ಈ ಪ್ರಾಧಿಕಾರಕ್ಕೆ ದಿ:15-6-2009 ಮತ್ತು ದಿ:25-7-2009 ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಕ್ರಮವಾಗಿ ನಿಶಾನೆ ಪಿ-3 ಮತ್ತು 4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-3ಎ ಮತ್ತು ನಿಶಾನೆ ಪಿ-4ಎ ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮಹಜರು ಜರುಗಿಸಿ ನಾಶಪಡಿಸಲಾಗಿದ್ದು, ಈ ಬಗ್ಗೆ ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:18-8-2009 ರಂದು ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ನಿಶಾನೆ ಪಿ-5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-5ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣ ದಾಖಲಿಸಿದ ಮಹಜರು ಸಾಕ್ಷಿದಾರರಾದ ಶ್ರೀ.ದಯಾನಂದ, ಪೊಲೀಸ್ ಮುಖ್ಯ ರಕ್ಷಕ, ಸುರತ್ಕಲ್ ಪೊಲೀಸ್ ಠಾಣೆ, ಸುರತ್ಕಲ್ ಇವರು ದಿ:19-1-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2000 ರಿಂದ 2009 ರವರೆಗೆ ಪೊಲೀಸ್ ಮುಖ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:15-11-2008 ರಂದು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಯವರ ಜೊತೆಗೂಡಿ ವಾಹನ ತಪಾಸಣೆಗೆಂದು ಹೊರಟು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಒಂದಾಲಕಾನ ಎಂಬಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಪುತ್ತೂರಿನಿಂದ ಪಾಣಾಜೆ ಕಡೆಗೆ ಹಾದುಹೋಗುವ ಸಾರ್ವಜನಿಕ ದಾಮಾರು ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಇಂಡಿಕಾ ಕಾರನ್ನು ಅದರ ಚಾಲಕ ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಸಂಶಯದ ಮೇರೆಗೆ ಸದರಿ ಕಾರನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕನು ಕಾರನ್ನು ನಿಲ್ಲಿಸದೆ ಅತೀ ವೇಗವಾಗಿ ಕೊಂದಾಲಕಾನ ಕಡೆಯಿಂದ ಹಾದುಹೋಗುವ ರಸ್ತೆಗೆ ತಿರುಗಿಸಿ ಚಲಾಯಿಸಿದನು. ವಾಹನವನ್ನು ಅತೀ ವೇಗವಾಗಿ ಚಲಾಯಿಸಿದ ಪರಿಣಾಮ ಕಾರಿನ ಹಿಂಬದಿಯ ಎಡಭಾಗದ ಇಂಡಿಕೇಟರ್‌ಗಳು ಹಾಗೂ ಮುಂಭಾಗದ ಎಡಬದಿಯ ರಸ್ತೆಯ ಬದಿಯಲ್ಲಿರುವ ಮೈಲುಕಲ್ಲಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಕಾರಿನ ಚಾಲಕರು ಸದರಿ ಕಾರನ್ನು ಅಲ್ಲಿಯೇ ಬಿಟ್ಟು ಕಾಡು ಪ್ರದೇಶದಲ್ಲಿ ಓಡಿ ಪರಾರಿಯಾದರು. ಅವರನ್ನು ಬೆನ್ನಟ್ಟಿದರೂ ಹಿಡಿಯಲು ಸಾಧ್ಯವಾಗಲಿಲ್ಲ. ಸದರಿ ಕಾರನ್ನು

ಕೂಲಂಕುಷವಾಗಿ ಪರಿಶೀಲಿಸಿದಾಗ, ಕಾರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಕಂಡು ಬರಲಿಲ್ಲ. ಕಾರಿನ ಒಳಗಡೆ ಸಾರಾಯಿ ಪ್ಯಾಕೆಟ್‌ಗಳಿರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ರಹದಾರಿ ಪತ್ರಗಳಿಲ್ಲದೆ ಅಕ್ರಮವಾಗಿ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡುವುದೆಂದು ಖಚಿತವಾಗಿರುವುದರಿಂದ ಸದರಿ ಸಾರಾಯಿ ಪ್ಯಾಕೆಟ್‌ಗಳನ್ನು ಹಾಗೂ ಕಾರನ್ನು ವಶಪಡಿಸಿಕೊಂಡು ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ಸಾರಾಯಿ ಸ್ಯಾಚೆಟ್‌ಗಳ ಪಾಲಿಥಿನ್ ಚೀಲಗಳನ್ನು ಹೊರಗೆ ತೆಗೆದು ನೋಡಲಾಗಿ, 13 ಬಿಳಿ ಪಾಲಿಥಿನ್ ಚೀಲಗಳಲ್ಲಿ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿರುವುದು ಕಂಡು ಬಂತು. 12 ಪಾಲಿಥಿನ್ ಚೀಲಗಳಲ್ಲಿ ತಲಾ 500 ರಂತೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು ಹಾಗೂ ಇನ್ನೊಂದು ಪಾಲಿಥಿನ್ ಚೀಲದಲ್ಲಿ 300 ರಂತೆ 100 ಎಂ.ಎಲ್.ನ ಸಾರಾಯಿ ಸ್ಯಾಚೆಟ್‌ಗಳು ಒಟ್ಟು 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳು ದಾಸ್ತಾನಿರುವುದು ಪತ್ತೆಯಾದವು. ಪ್ರತಿಯೊಂದು ಸಾರಾಯಿ ಸ್ಯಾಚೆಟ್‌ಗಳ ಮೇಲೆ 100 ಎಂ.ಎಲ್., 35 ಡಿಗ್ರಿ ಯು.ಪಿ., ಜೆ.ಪಿ.ಡಿಸ್ಟಿಲರಿ (ಪ್ರೈ) ಲಿಮಿಟೆಡ್ ತುಮಕೂರು ಎಂದು ಹಾಗೂ ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ, ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಲ್ಪಟ್ಟಿದೆ ಎಂದು ಬರೆದಿರುತ್ತದೆ. ಪ್ರತಿಯೊಂದು ಪಾಲಿಥಿನ್ ಚೀಲದಿಂದ ತಲಾ 5 ರಂತೆ ಸಾರಾಯಿ ಸ್ಯಾಚೆಟ್‌ಗಳ ಪ್ಯಾಕೆಟ್‌ಗಳನ್ನು ಸ್ಯಾಂಪಲ್‌ಗಾಗಿ ತೆಗೆದು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಹೊಲಿದು, ಅವುಗಳಿಗೆ ಅರಗು ಹಾಕಿ ಎಸ್.ಹೆಚ್.ಒ ಸೀಲ್ ಮಾಡಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಅವುಗಳಿಗೆ ಕ್ರಮ ಸಂಖ್ಯೆಯನ್ನು ನೀಡಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಇಂಡಿಕಾ ಕಂಪೆನಿಯ ಕಾರನ್ನು ಪರಿಸಿಲಿಸಿದಾಗ, ಅದರ ಹಿಂಭಾಗ ಮತ್ತು ಮುಂಭಾಗದಲ್ಲಿ ಕಪ್ಪು ಅಕ್ಷರದಲ್ಲಿ ಕೆಎ-16-ಎಂ-3313 ಎಂದು ನೋಂದಣೆ ಸಂಖ್ಯೆ ಬರೆದಿರುತ್ತದೆ. ಕಾರಿನ ಇಂಜೀನ್ ನಂ: 4755149ಇಟಿರೆಘಡ್‌ಪಿ-63881 ಮತ್ತು ಚಾಸೀಸ್ ನಂ:600208ಇಟಿರೆಘಡ್ ಪಿ70718 ಆಗಿದ್ದು, ಟಿವೈಪಿ475ಎಸ್‌ಐ 49 ಆಗಿರುತ್ತದೆ. ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮತ್ತು ಸ್ಯಾಂಪಲ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ವೃತ್ತ ನಿರೀಕ್ಷಕರು ಸ್ಥಳದಲ್ಲಿಯೇ ಜರುಗಿಸಿರುತ್ತಾರೆ. ಮಹಜರನ್ನು ಅದೇ ದಿನ ಸಂಜೆ 6-40 ರಿಂದ 8-30 ಗಂಟೆ ತನಕ ರಸ್ತೆ ಬದಿಯ ದೀಪದ ಸಹಾಯದಿಂದ ಬರೆದಿರುತ್ತೇನೆ. ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಶಾನೆ ಪಿ-6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-6ಎ ಎಂದು ಗುರುತಿಸಲಾಯಿತು, ಸ್ವಾಧೀನಪಡಿಸಿದ ಸೊತ್ತು ಮತ್ತು ಸಾಗಾಟಕ್ಕೆ ಬಳಸಿದ ವಾಹನ ಸಮೇತ ಠಾಣೆಗೆ ಬಂದು ಸಿ.ಬಿ.ಐ. ರವರು ನೀಡಿದ ದೂರಿನ ಬಗ್ಗೆ ತಮ್ಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಹಜರು ನನ್ನ ಹಸ್ತಾಕ್ಷರದಲ್ಲಿದ್ದು, ಸದರಿ ದೂರನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ವಾಹನದ ಆರ್.ಸಿ. ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಮತ್ತು ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸು ಮತ್ತು ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ಸದರಿ ನೋಟೀಸುಗಳು ಅವರಲ್ಲಿ ಸ್ವೀಕೃತಿಯಾಗಿದ್ದರೂ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸದ್ರಿ ವಾಹನವು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟದಲ್ಲಿ ಭಾಗಿಯಾಗದಿರುವ ಬಗ್ಗೆ ಯಾವುದೇ ರುಜುವಾತನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:15-11-2008 ರಂದು ಜಪ್ತುಪಡಿಸಿಕೊಂಡಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ರಲ್ಲಿ ಅಕ್ರಮವಾಗಿ 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮ ಸಾಗಾಣಿಕೆಗೆ ಸದರಿ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿದ್ದರೂ, ನಂತರ ಅವರು ಖುದ್ದಾಗಿ ಹಾಜರಾತಿ ನೋಟೀಸಿಗೆ ಪ್ರಕರಣದ ಯಾವುದೇ ಸಾಕ್ಷಿದಾರರ ಪಾಟೀ ಸವಾಲು ಮತ್ತು ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣಕ್ಕೆ ಮತ್ತು ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ನೀಡಿರುವುದಿಲ್ಲ. ಆದುದರಿಂದ ವಾಹನ ಮಾಲೀಕರ ತಿಳುವಳಿಕೆಯಿಂದಲೇ ಸದರಿ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಕೇರಳ ರಾಜ್ಯಕ್ಕೆ ಸಾಗಿಸಲು ಬಳಸಿರುವುದು ಸಾಕ್ಷಿ ಹೇಳಿಕೆಗಳಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರು ಸಂಖ್ಯೆ:

ಕೆಎಲ್-13-ಕ್ಯೂ-5503 ಇದಕ್ಕೆ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ನ್ನು ಅಳವಡಿಸಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38(ಎ) ರ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದಿದ್ದು, ವಾಹನದ ಮಾಲೀಕರು ವಾಹನವು ತನ್ನದೆಂದು ತನ್ನ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಕೋರಿರುತ್ತಾರೆ. ಆದರೆ ಈ ಪ್ರಾಧಿಕಾರದಿಂದ ಮೋಟಾರು ವಾಹನ ನಿರೀಕ್ಷಕರು ನೀಡಿರುವ ವಾಹನದ ಈಗಿನ ಅಂದಾಜು ಮೌಲ್ಯ ರೂ.1,20,000/- ಮೌಲ್ಯಕ್ಕೆ ಅನುಗುಣವಾಗಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಲು ಈ ಪ್ರಾಧಿಕಾರದಿಂದ ನೋಟೀಸನ್ನು ನೀಡಿದ್ದರೂ, ವಾಹನ ಮಾಲೀಕರು ಯಾವುದೇ ಬ್ಯಾಂಕ್ ಗ್ಯಾರಂಟಿಯನ್ನು ಮತ್ತು ಸದರಿ ನೋಟೀಸಿಗೆ ಉತ್ತರವನ್ನು ಸಲ್ಲಿಸಿರುವುದಿಲ್ಲ ಹಾಗೂ ಈ ಪ್ರಾಧಿಕಾರವು ನೀಡಿದ ಕಾರಣ ಕೇಳಿ ನೋಟೀಸುಗಳಿಗೂ ಸಹಾ ಉತ್ತರವನ್ನು ಈ ಪ್ರಾಧಿಕಾರದಲ್ಲಿ ಇದುವರೆಗೂ ಸಲ್ಲಿಸಿರುವುದಿಲ್ಲ. ತದನಂತರ ಪ್ರಕರಣದ ಯಾವುದೇ ಹಾಜರಾತಿ ನೋಟೀಸಿಗೆ ಖುದ್ದಾಗಿ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಹಾಗೂ ಆರೋಪಿಯಾಗಲಿ ಹಾಜರಾಗಿ ಈ ಪ್ರಾಧಿಕಾರದಲ್ಲಿ ನಡೆಸಿದ ಸಾಕ್ಷಿದಾರರ ವಿಚಾರಣೆ ಹೇಳಿಕೆಗಳ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ಯಾವುದೇ ರಕ್ಷಣಾ ಸಾಕ್ಷಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ. ಪ್ರಕರಣವು ಈಗಾಗಲೇ ದಾಖಲಾಗಿ ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದಿದ್ದು ಮತ್ತು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ವಾಹನದ ಮಾಲೀಕರು ತಕ್ಷೀರು ನಡೆಸಲು ಉತ್ಸುಕರಿಲ್ಲದ ಕಾರಣ ಮತ್ತು ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದಕ್ಕೆ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ನ್ನು ಬದಲಿಸಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಣಿಕೆಗೆ ಉದ್ದೇಶಪೂರ್ವಕವಾಗಿ ಬಳಸಿದ್ದು, ಸದ್ರಿ ವಾಹನವನ್ನು ಜಪ್ತುಪಡಿಸಿ ಈಗಾಗಲೆ ಒಂದು ವರ್ಷ ಒಂದು ತಿಂಗಳು ಕಳೆದಿದ್ದು, ಇದು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ-16-ಎಂ-3313 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ:ಎಸ್‌ಡಿಕೆ/147/ಡಿಟಿಸಿಆರ್/2008-09, ದಿನಾಂಕ:20ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ:117/2008 ದಿ:15-11-2008 ರಲ್ಲಿ ಜಪ್ತುಪಡಿಸಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್-13-ಕ್ಯೂ-5503 ಇದರ ನಕಲಿ ನೋಂದಣಿ ಸಂ: ಕೆಎ-16-ಎಂ-3313 ನ್ನು ಮತ್ತು ಸ್ಟೆಪಿನ್ ಟಯರು ಹಾಗೂ ಜ್ಯಾಕನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20-01-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಪ್ರಾ.ಸಾ-2: ಶ್ರೀ.ದಯಾನಂದ, ಪೊಲೀಸ್ ಮುಖ್ಯ ರಕ್ಷಕ, ಸುರತ್ಕಲ್ ಪೊಲೀಸ್ ಠಾಣೆ, ಸುರತ್ಕಲ್.

ಅನುಬಂಧ-2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1: ಮೌಲ್ಯಮಾಪನ ವರದಿ.
ನಿಶಾನೆ ಪಿ-1A: ಪ್ರಾ.ಸಾ-1- ರವರ ಸಹಿ.
ನಿಶಾನೆ ಪಿ-2 : ಕೆಮಿಕಲ್ ವರದಿ.
ನಿಶಾನೆ ಪಿ-2A : ಅದರಲ್ಲಿರುವ ಪ್ರಾ.ಸಾ-1ರವರ ಸಹಿ.
ನಿಶಾನೆ ಪಿ-3 : ಪ್ರಥಮ ತನಿಖಾ ವರದಿ.
ನಿಶಾನೆ ಪಿ-3A : ಅದರಲ್ಲಿರುವ ಪ್ರಾ.ಸಾ-1ರವರ ಸಹಿ.
ನಿಶಾನೆ ಪಿ-4 : ದ್ವಿತೀಯ ತನಿಖಾ ವರದಿ.
ನಿಶಾನೆ ಪಿ-4A : ಅದರಲ್ಲಿರುವ ಪ್ರಾ.ಸಾ-1ರವರ ಸಹಿ.
ನಿಶಾನೆ ಪಿ-5 : ನಾಶಪಡಿಸಿದ ಬಗ್ಗೆ ವರದಿ.
ನಿಶಾನೆ ಪಿ-5A : ಅದರಲ್ಲಿರುವ ಪ್ರಾ.ಸಾ-1ರವರ ಸಹಿ.
ನಿಶಾನೆ ಪಿ-6 : ಮಹಜರು ಪ್ರತಿ.
ನಿಶಾನೆ ಪಿ-6A : ಆದರಲ್ಲಿರುವ ಪ್ರಾ.ಸಾ-2ರವರ ಸಹಿ.
ನಿಶಾನೆ ಪಿ-7 : ಪೊಲೀಸ್ ನಿರೀಕ್ಷಕರು ನೀಡಿದ ದೂರಿನ ಪ್ರತಿ.

